ಮನೆ, ಸಮಾಜ ಮತ್ತು ಸಂಸ್ಕೃತಿ

(ಮ್ಯಾಸನಾಯಕರ ಹಾಗೂ ಊರ ನಾಯಕರ ಅಧ್ಯಯನ)

ಎಂ. ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ
ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು :

ವೀಣಾ. ಎಂ. ಪಿ.

ಮಾರ್ಗದರ್ಶಕರು :

ಡಾ. ಸುರೇಶ್. ಕೆ. ಎಂ.

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

ಅಕ್ಟೋಬರ್ 31, 1995

ಮನೆ, ಸಮಾಜ ಮತ್ತು ಸಂಸ್ಕೃತಿ

(ಮ್ಯಾಸನಾಯಕರ ಹಾಗೂ ಊರ-ನಾಯಕರ ಅಧ್ಯಯನ)

ಎಂ. ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ

ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು:

ವೀಣಾ. ಎಂ.ಪಿ.

ಮಾರ್ಗದರ್ಶಕರು:

ಡಾ|| ಸುರೇಶ್. ಕೆ.ಎಂ.

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ

ಅಕ್ಟೋಬರ್ 31, 1995.

ಮನೆ, ಸಮಾಜ ಮತ್ತು ಸಂಸ್ಕೃತಿ

(ಮ್ಯಾಸನಾಯಕರ ಹಾಗೂ ಊರ-ನಾಯಕರ ಅಧ್ಯಯನ)

ಎಂ. ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ

ಕನ್ನಡ ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಪ್ರಬಂಧ.

ಸಂಶೋಧಕರು:

ವೀಣಾ. ಎಂ.ಪಿ.

ಮಾರ್ಗದರ್ಶಕರು:

ಡಾ॥ ಸುರೇಶ್. ಕೆ.ಎಂ.

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ

ಅಕ್ಟೋಬರ್ 31, 1995.

ಪ್ರಮಾಣ ಪತ್ರ

ಈ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ೧೯೯೪-೯೫ರ ಶೈಕ್ಷಣಿಕ ವರ್ಷದ ಎಂ. ಫಿಲ್. ಪದವಿಗಾಗಿ ಡಾ. ಸುರೇಶ್, ಕೆ. ಎಮ್. ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಈ ಅಧ್ಯಯನದ ವಿಷಯವನ್ನು ಇದುವರೆಗೆ ಯಾವ ಪದವಿಗೂ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೩೦|೧೦|೯೫

ಸ್ಥಳ : ವಿದ್ಯಾರಣ್ಯ

ಸಂಶೋಧಕರು

(ವಿಣಾ, ಎಂ. ಪಿ.)

ದೃಢೀಕರಣ ಪತ್ರ

ವೀಣಾ, ಎಂ.ಪಿ. ಅವರು 'ಮನೆ, ಸಮಾಜ ಮತ್ತು ಸಂಸ್ಕೃತಿ (ವ್ಯಾಸಬೇಡರ ಮತ್ತು ಊರಬೇಡರ ಅಧ್ಯಯನ)' ಎಂಬ ಶೀರ್ಷಿಕೆಯ ಈ ಪ್ರೌಢಪ್ರಬಂಧವನ್ನು ೧೯೯೪-೯೫ರ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಪಿಸಲೆಂದು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಈ ಪ್ರೌಢಪ್ರಬಂಧದ ವಿಷಯವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ, ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : ೩೦।೧೦।೧೯೯೫

ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು

(ಡಾ|| ಸುರೇಶ್, ಕೆ. ಎಮ್.)
ವಸ್ತುಸಂಗ್ರಹಾಲಯ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

[illegible]

[illegible]

[illegible]

[illegible]

[illegible]

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ. ಫಿಲ್. ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಕುಲಪತಿಗಳಾದ ಡಾ. ಚಂದ್ರಶೇಖರ ಕಂಬಾರ ಹಾಗೂ ಕುಲಸಚಿವರಾದ ಡಾ. ಕೆ. ವಿ. ನಾರಾಯಣ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಈ ಪ್ರಬಂಧದ ರಚನೆಗೆ ಮಾರ್ಗದರ್ಶನ ನೀಡಿದ ಡಾ. ಸುರೇಶ್, ಕೆ. ಎಮ್. ಮತ್ತು ಬರವಣಿಗೆಯ ವಿವಿಧ ಹಂತಗಳಲ್ಲಿ ಸೂಕ್ತ ಸಲಹೆ ನೀಡಿದ ಶ್ರೀ ಕ.ಜ. ವಾಸುಕಿ ಅವರಿಗೆ ಕೃತಜ್ಞತೆಗಳು.

ಸಂಶೋಧನೆಯ ವಿಧಿವಿಧಾನಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಿದ ಡಾ. ಹೆಚ್. ಎಸ್. ರಾಘವೇಂದ್ರರಾವ್, ಪ್ರೊ. ಲಕ್ಷ್ಮಣ್ ತೆಲಗಾವಿ, ಪ್ರೊ. ಪುರುಷೋತ್ತಮ ಬಿಳಿಮಲೆ, ಡಾ. ಟಿ.ಎಸ್. ಸತ್ಯನಾಥ್ ಹಾಗೂ ಕನ್ನಡ ವಿಶ್ವವಿದ್ಯಾಲಯದ ಅಧ್ಯಾಪಕ ವೃಂದದವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಗ್ರಂಥಗಳನ್ನು ಎರವಲು ನೀಡಿ ಸಹಕರಿಸಿದ ಶ್ರೀ ಬಿ.ಆರ್. ಮಟಾರಿ, ಮತ್ತು ಕಮಲಾಪುರದ ಪುರಾತತ್ವ ವಸ್ತುಸಂಗ್ರಹಾಲಯದ ವ್ಯವಸ್ಥಾಪಕರಾದ ಟಿ. ಹನುಮಂತಪ್ಪನವರಿಗೆ ಹಾಗೂ ನಕ್ಷೆ, ಜನಸಂಖ್ಯಾವರದಿ ಇತ್ಯಾದಿ ದಾಖಲೆಗಳನ್ನು ನೀಡಿದ ಹೊಸಪೇಟೆ ತಾಲ್ಲೂಕ ಆಫೀಸ್ ಮತ್ತು ಕಮಲಾಪುರದ ಪುರಸಭೆ ಅಧಿಕಾರಿಗಳಿಗೆ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ತಿಂದಪ್ಪ ಹಾಗೂ ಕಮಲಾಪುರ -ತಿಮ್ಮಲಾಪುರದ ವ್ಯಕ್ತಿಗಳಿಗೆ ಋಣಿಯಾಗಿದ್ದೇನೆ.

ವ್ಯಾಸಂಗದ ಬಗ್ಗೆ ವಿಶೇಷ ಆಸಕ್ತಿ ತೋರಿ ಉತ್ತೇಜನವಿತ್ತ ಎಲ್. ಲಕ್ಷ್ಮೀದೇವಿ, ವಿ. ಕೆ. ಆಶಾ, ಡಾ. ಬಿ. ಮಂಜುನಾಥ, ವಿರೂಪಾಕ್ಷಿ, ವಾಸುದೇವನ್, ರವೀಂದ್ರ, ಅಶೋಕ್ ಕುಮಾರ್, ಪ್ರೇಮ್ ಕುಮಾರ್, ಕೃಪಾಶಂಕರ, ರಂಜನ್, ಕೀರ್ತಿನಾಥ, ವಿಶ್ವನಾಥ ಬಡಿಕಾನ, ಅಯ್ಯಳ್ಳಿ ತಿಮ್ಮಪ್ಪ, ಮತ್ತು ಎಲ್ಲ ಸ್ನೇಹಿತರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ವಿದ್ಯಾಭ್ಯಾಸ ಮತ್ತು ಬೆಳವಣಿಗೆಗೆ ಕಾರಣರಾದ ಅಪ್ಪಾಜಿ, ಅಮ್ಮ, ದೊಡ್ಡಪ್ಪ ಹಾಗೂ ಕುಟುಂಬದ ಸದಸ್ಯರಿಗೆ ಋಣಿಯಾಗಿದ್ದೇನೆ.

ಸಕಾಲಕ್ಕೆ ಮುದ್ರಿಸಿ ಕೊಟ್ಟ 'ಸ್ಮೃತಿ' ಕಂಪ್ಯೂಟರ್ಸ್ ಅವರಿಗೆ ಕೃತಜ್ಞತೆಗಳು.

ಎಂ. ಪಿ. ವೀಣಾ.

ಪರಿವಿಡಿ

ಅಧ್ಯಾಯ -೧ / ೧-೨೮

೧

೧.೧ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ :

ಮಾನವನ ಹುಟ್ಟಿನೊಂದಿಗೆ ಜನಾಂಗದ ಚರಿತ್ರೆ ಆರಂಭವಾಗುತ್ತದೆ. ಆದಿ ಮಾನವ ತನ್ನ ಅಲೆಮಾರಿ ಜೀವನವನ್ನು ಬಿಟ್ಟು ಒಂದು ಪ್ರದೇಶದಲ್ಲಿ ನೆಲೆ ನಿಂತು ನಾಗರಿಕ ಹಂತವನ್ನು ತಲುಪಿದಾಗ ಇವನಲ್ಲಿ ದೈಹಿಕ ಬದಲಾವಣೆ ಜೊತೆ ಆಂತರಿಕ ಬದಲಾವಣೆ (ಸಂಸ್ಕೃತಿ)ಗಳು ಕಂಡು ಬರುತ್ತವೆ. ಇಂಥಾ ವಿಕಾಸಗಳನ್ನು ಆದಿಸಂಸ್ಕೃತಿ, ಗ್ರಾಮೀಣ ಸಂಸ್ಕೃತಿ ಮತ್ತು ನಗರ ಸಂಸ್ಕೃತಿ ಎಂಬ ಮೂರು ಹಂತಗಳಲ್ಲಿ ಗುರುತಿಸಲಾಗಿದೆ (ತಿ.ನಂ. ಶಂಕರನಾರಾಯಣ. ೧೯೮೨, ಪು.೧).

ಪ್ರಪಂಚದಾದ್ಯಂತ ಎಲ್ಲಾ ಬುಡಕಟ್ಟುಗಳಲ್ಲೂ ಏಕಕಾಲಕ್ಕೆ ಹೊಸ ಆವಿಷ್ಕಾರಗಳು ಮತ್ತು ಚಿಂತನೆಗಳುಂಟಾಗಿ ಈ ರೀತಿಯ ವಿಕಾಸಗಳು ನಡೆಯಲಿಲ್ಲ. ಕೆಲವು ಬುಡಕಟ್ಟುಗಳಲ್ಲಿ ನವೀನ ಶೋಧನೆಗಳಾಗಿ ಆಧುನಿಕತೆಯ ಕಡೆ ಚಲಿಸಿದರೆ ಇನ್ನೂ ಕೆಲವು ಆಧುನಿಕತೆಗೆ ಬೆನ್ನು ಮಾಡಿದ್ದೂ ಉಂಟು. ಹೀಗಾಗಿ ಒಂದು ಬುಡಕಟ್ಟು ಅಥವಾ ಸಮುದಾಯ ನಾಗರಿಕತೆಯ ತುತ್ತತುದಿಯಲ್ಲಿ ನಿಂತಿದ್ದಾರೆ ಇನ್ನೊಂದು ಬುಡಕಟ್ಟು ನಾಗರಿಕತೆಯ ಶೈಶವಸ್ಥೆಯಲ್ಲಿಯೇ ಇರುವ ಸಾಧ್ಯತೆ ಇದೆ. ಆದ್ದರಿಂದಲೇ ಭಾರತದಲ್ಲಿ ಇಂದಿಗೂ ಗ್ರಾಮ ಮತ್ತು ನಗರಗಳಿಂದ ದೂರವಿರುವ ಆಧುನಿಕತೆಯ ಸೋಂಕಿಲ್ಲದ ಅನೇಕ ಬುಡಕಟ್ಟುಗಳು ಅಸ್ತಿತ್ವದಲ್ಲಿವೆ. ಇಂಥ ಬುಡಕಟ್ಟುಗಳು ಉತ್ಕೃಷ್ಟ

ವೈಶಿಷ್ಟ್ಯಗಳನ್ನು ಒಳಗೊಂಡ ತಮ್ಮದೇ ಆದ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿವೆ. ಕಾರಣ ಗ್ರಾಮ ಸಂಸ್ಕೃತಿ ಮತ್ತು ನಗರ ಸಂಸ್ಕೃತಿಗಳ ಜತೆಯಲ್ಲಿಯೇ ಬುಡಕಟ್ಟು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕ.

ಗ್ರಾಮ ಮತ್ತು ನಗರ ಸಂಸ್ಕೃತಿಯಿಂದ ದೂರವಾಗಿ ಅಡವಿ ಅಥವಾ ಅದರ ಅಂಚಿನಲ್ಲಿ ವಾಸ ಮಾಡುತ್ತಿರುವ ತನ್ನದೇ ಆದ ರೂಢಿ - ಸಂಪ್ರದಾಯ, ಆಚಾರ - ವಿಚಾರಗಳನ್ನು, ನಡವಳಿಕೆಗಳನ್ನು ಮೈಗೂಡಿಸಿಕೊಂಡಿರುವ ಬೇಡರ ಕುರಿತು ಇಲ್ಲಿ ಅಧ್ಯಯನ ಮಾಡಲಾಗಿದೆ. ಸರ್ಕಾರವು ಇವರನ್ನು ಪರಿಶಿಷ್ಟ ವರ್ಗವೆಂದು ಗುರುತಿಸಿದೆ. ಒಂದು ನಿರ್ದಿಷ್ಟ ಭೂಪ್ರದೇಶವನ್ನು ಹೊಂದಿದ್ದು, ತಮ್ಮದೇ ಆದ ಭಾಷೆಯನ್ನಾಡುವ, ಒಂದೇ ಸಮಾಜ, ಸಂಸ್ಕೃತಿ ಹೊಂದಿರುವ ಒಂದೇ ವೃತ್ತಿಯಲ್ಲಿ ತೊಡಗಿಕೊಂಡಿರುವ ಗುಂಪಿಗೆ ಬುಡಕಟ್ಟು ಎಂದು ಕರೆಯಬಹುದು. ಬುಡಕಟ್ಟುಗಳಲ್ಲಿ ರಕ್ತ ಸಂಬಂಧ ಬಹುಮುಖ್ಯವಾದ ಅಂಶವಾಗಿದೆ. ಡಾ|| ಮುಜುಂದಾರ, ಡಿ. ಎನ್. ಅವರು "Tribe is a collection of families, bearing a common name, mem bers of which occupy the same territory, speak the same lagnuage and observe certain laboos regarding marriage. Profession or oc upation and have developed a well assessed system of reciprocity and mutulity of obligation" ಎಂದು ಬುಡಕಟ್ಟುಗಳ ಬಗ್ಗೆ ವ್ಯಾಖ್ಯಾನಿಸಿದ್ದಾರೆ. (ಉದ್ಧೃತ: ಕರಿಶೆಟ್ಟಿ ರುದ್ರಪ್ಪ. ೧೯೯೫. ಪು. ೪).

ಸರ್ಕಾರವು ಬೇಡರನ್ನು ಬುಡಕಟ್ಟು ವರ್ಗಕ್ಕೆ ಸೇರಿಸಿದ್ದರೂ ಇವರಲ್ಲಿ ಇಂದು ಮಾರ್ಪಾಡುಗಳು ಕಂಡುಬರುತ್ತಿವೆ. ಈ ಪರಿವರ್ತನೆಯ ಕಾಲದಲ್ಲಿ ಈ ಸಮುದಾಯ ತಮ್ಮ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳಲು ಯಾವ ರೀತಿಯಲ್ಲಿ ಪ್ರಯತ್ನಿಸುತ್ತಿವೆ ಎನ್ನುವುದನ್ನು ವಿಶ್ಲೇಷಿಸುವುದು ಅವಶ್ಯಕವಾಗಿದೆ. ಇಂದಿಗೂ ಕೆಲವು ಪ್ರದೇಶದಲ್ಲಿ ವಾಸವಾಗಿರುವ ಬೇಡರ ಜನಾಂಗವು ಸಂಪೂರ್ಣ ಬುಡಕಟ್ಟು ಲಕ್ಷಣವನ್ನು ಹೊಂದಿದೆ. ತಮ್ಮ ಸಂಪ್ರದಾಯವನ್ನು ಪೂರ್ತಿಯಾಗಿ ಬಿಟ್ಟು ಕೊಡದೆ ಬೇರೆ ಸಮುದಾಯದ ಸಂಸ್ಕೃತಿ, ನಡವಳಿಕೆಗಳನ್ನು ಸ್ವೀಕರಿಸದೆ ತಮ್ಮದೇ ವಿಶಿಷ್ಟತೆಯನ್ನು ಉಳಿಸಿಕೊಳ್ಳುತ್ತಾ ಬಂದಿದೆ. ಆದರೆ ಈ ಪ್ರಬಂಧದಲ್ಲಿ ಆಯ್ಕೆ ಮಾಡಿಕೊಂಡಿರುವ

ಪ್ರದೇಶದಲ್ಲಿ ವಾಸಿಸುತ್ತಿರುವ ಬೇಡರು ಆಧುನಿಕತೆಗೂ ಸ್ಪಂದಿಸುತ್ತಾ ತಮ್ಮ ವೈಶಿಷ್ಟ್ಯತೆಯನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಪ್ರಯತ್ನದಲ್ಲಿ ರಕ್ತ ಶುದ್ಧತೆ ಕಾಪಾಡಿಕೊಳ್ಳಲು ಅಂತರ್ಜಾತಿಯ ಮತ್ತು ಸ್ವಬೆಡಗಿನಲ್ಲಿ ವಿವಾಹವನ್ನು ವಿರೋಧಿಸುತ್ತಾರೆ. ಅಷ್ಟೇ ಅಲ್ಲ ವೈದಿಕ ಧರ್ಮದ ಜಾತಿ ವ್ಯವಸ್ಥೆಯಲ್ಲಿ ಸೇರ್ಪಡೆಯಾಗಿರುವ ತಮ್ಮದೇ ಪಂಗಡದ ಉಪಪಂಗಡಗಳ ಜೊತೆಯಲ್ಲಿ ವೈವಾಹಿಕ ಸಂಬಂಧ ಬೆಳೆಸುವುದಿಲ್ಲ. ಉದಾಹರಣೆ ಮ್ಯಾಸಬೇಡರ ಮತ್ತು ಊರಬೇಡರ ನಡುವೆ ವೈವಾಹಿಕ ಸಂಬಂಧಕ್ಕೆ ಅವಕಾಶವಿಲ್ಲ.

ಬ್ರಿಟೀಷರ ಆಳ್ವಿಕೆ ಮತ್ತು ಸ್ವತಂತ್ರ ಭಾರತದಲ್ಲಿ ಸರ್ಕಾರದ ಕಾಯಿದೆ, ಕಾನೂನುಗಳು ಹಾಗೂ ಯೋಜನೆಗಳಿಂದ ಹಲವು ಬುಡಕಟ್ಟುಗಳಿಗೆ ಆಧುನಿಕ ಜಗತ್ತಿನ ನೇರ ಸಂಪರ್ಕವೇರ್ಪಟ್ಟಿತು. ಬ್ರಿಟಿಷ್ ಪೂರ್ವ ಇತಿಹಾಸವನ್ನು ಗಮನಿಸಿದಾಗ ಬುಡಕಟ್ಟುಗಳು ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡಿದ್ದವು ಎಂದು ತಿಳಿಯುತ್ತದೆ. ಮೌರ್ಯರ ಕಾಲದಿಂದ ಮುಸ್ಲಿಂ ಆಳ್ವಿಕೆಯವರೆಗೂ ಬುಡಕಟ್ಟಿನ ಸ್ವತಂತ್ರಕ್ಕೆ ಧಕ್ಕೆ ಉಂಟಾಗಿರಲಿಲ್ಲ. ಹಾಗೂ ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾದಾಗ ಸರ್ಕಾರದ ವಿರುದ್ಧ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಭಾರತದ ಸಂಪೂರ್ಣ ಭೂಭಾಗವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದರಿಂದ ಅವರು ಆಡಳಿತದ ಅನುಕೂಲಕ್ಕಾಗಿ, ಕಂದಾಯ ವಸೂಲಿಗಾಗಿ, ಅನೇಕ ಕಾಯಿದೆ ಕಾನೂನುಗಳನ್ನು ಮಾಡಿಕೊಂಡರು. ಇಂಥ ಸಂದರ್ಭಗಳಲ್ಲಿ ಸ್ಥಳೀಯ ಸಮಾಜಗಳ ಆಂತರಿಕ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡಲಾರಂಭಿಸಿದರು. ಸರ್ಕಾರದ ಹಸ್ತಕ್ಷೇಪವನ್ನು ಸಹಿಸದ ಬುಡಕಟ್ಟುಗಳು ತೀವ್ರವಾಗಿ ವಿರೋಧ ವ್ಯಕ್ತಪಡಿಸಿದ ದಾಖಲೆಗಳು ದೊರೆಯುತ್ತವೆ. ೧೮೫೭ರ ನಿಶ್ಶಸ್ತ್ರೀಕರಣ ಕಾಯಿದೆಯಿಂದ ತಮ್ಮ ಮೂಲ ವೃತ್ತಿಗೆ ಧಕ್ಕೆ ಉಂಟಾದ ಕಾರಣ ಹಲಗಲಿಯ ಬೇಡರು ತಮ್ಮ ಶಸ್ತ್ರಾಸ್ತ್ರಗಳನ್ನು ಸರ್ಕಾರಕ್ಕೆ ನೀಡುವುದಿಲ್ಲ ಎಂದು ದಂಗೆಯನ್ನು ಮಾಡಿದ ಉದಾಹರಣೆ ಇದೆ. ಇಂಥ ಅನೇಕ ಸಣ್ಣಪುಟ್ಟ ದಂಗೆಗಳನ್ನು ಬ್ರಿಟಿಷರು ತಮ್ಮ ಆಳ್ವಿಕೆಯುದ್ದಕ್ಕೂ ಎದುರಿಸ ಬೇಕಾಯಿತು. ಬುಡಕಟ್ಟುಗಳನ್ನು ಆಡಳಿತದ ಚೌಕಟ್ಟಿಗೆ ತರುವ ಪ್ರಯತ್ನದಿಂದಲೇ ಕೆಲವು ಆಂಗ್ಲಾಧಿಕಾರಿಗಳು ಇವರ ಕುರಿತು ಅಧ್ಯಯನ ಕೈಗೊಂಡರು. ಕ್ರಿಸ್ತ

[illegible]

[illegible]

[illegible]

ಚಿಂತನರಿಗಳಿಗೂ ಮತಾಂತರ ಮಾಡಿಕೊಳ್ಳಲು ಬುಡಕಟ್ಟಿನ ಅಧ್ಯಯನ ಅವಶ್ಯಕವಾಯಿತು. (ಸ್ವತಂತ್ರದನಂತರ ಭಾರತ ಸರ್ಕಾರವು ಹಿಂದಿನ ಆಡಳಿತ ವೈಖರಿಯನ್ನೇ ಅಳವಡಿಸಿಕೊಂಡಿತು. ಸರ್ಕಾರದ ಈ ನೀತಿ-ನಿಯಮಗಳು ಬುಡಕಟ್ಟಿನ ಸ್ವರೂಪವನ್ನೇ ಬದಲಾಯಿಸುತ್ತಿವೆ. ಒಂದು ಕಡೆ ಅರಣ್ಯ ನಾಶ, ಇನ್ನೊಂದು ಕಡೆ ಅರಣ್ಯ ರಕ್ಷಣಾ ನೀತಿಗಳು, ಹೊಸ ಅಣೆಕಟ್ಟುಗಳ ನಿರ್ಮಾಣ, ಬೃಹತ್ ಕೈಗಾರಿಕೆ ಗಣಿಗಾರಿಕೆಗೆ ಪ್ರೋತ್ಸಾಹ ಇಂಥ ಹಲವು ಕಾರಣಗಳಿಂದ ಬುಡಕಟ್ಟಿನ ಜನರು ಗ್ರಾಮ ಮತ್ತು ನಗರಗಳಿಗೆ ವಲಸೆ ಬರುತ್ತಿದ್ದಾರೆ. ಹೀಗೆ ವಲಸೆ ಬಂದ ಜನರು ತಮ್ಮ ಜೀವನದಲ್ಲಿ ಸಂಪೂರ್ಣ ಹೊಸತನ್ನು ಅಳವಡಿಸಿಕೊಳ್ಳದೆ ಸ್ವಂತಿಕೆಯನ್ನು ಉಳಿಸಿಕೊಳ್ಳುವ ವಿಫಲ ಪ್ರಯತ್ನ ನಡೆಸಿದ್ದಾರೆ. ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಬುಡಕಟ್ಟುಗಳು ಪ್ರತ್ಯೇಕವಾಗಿ ಉಳಿಯಲು ಸಾಧ್ಯವಿಲ್ಲದ ಹೊಸ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಅನಿವಾರ್ಯತೆ ಉಂಟಾಗಿದೆ. ಈ ಬದಲಾವಣೆ ಅನಿವಾರ್ಯ. ಯಾವುದೇ ಬೆಳೆಯುತ್ತಿರುವ ಸಮಾಜದಲ್ಲಿ ಈ ಅನಿವಾರ್ಯತೆ ಉದ್ಭವಿಸುತ್ತಲೇ ಇರುತ್ತದೆ. ಈ ಹಿನ್ನೆಲೆಯಲ್ಲಿ ಅನೇಕ ಬುಡಕಟ್ಟುಗಳು ಮಾರ್ಪಾಡುಗಳನ್ನು ಒಪ್ಪಿಕೊಂಡು ತಮ್ಮ ಆಚಾರ - ವಿಚಾರಗಳಲ್ಲಿ ತಮ್ಮದೇ ಆದ ವಿಶಿಷ್ಟತೆಗಳನ್ನು ಸಮಾಜ, ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಬಂದಿವೆ. ತಮ್ಮ ಹಿಂದಿನ ಕೊಂಡಿಗಳನ್ನು ಉಳಿಸಿಕೊಂಡಿರುವುದನ್ನು ಕಾಣಬಹುದು.)

ಈ ರೀತಿಯ ಪರಿವರ್ತನೆಗಳಿಗೆ ಒಳಗಾದ ಭಾರತೀಯ ಬುಡಕಟ್ಟುಗಳಲ್ಲಿ ಧೀರೇಂದ್ರನಾಥ ಮುಜುಂದಾರ ಅವರು ಮೂರು ಹಂತಗಳನ್ನು ಗುರುತಿಸಿದ್ದಾರೆ :

೧) ಜಾತಿಗಳಾಗಿ ಸಂಪೂರ್ಣ ಪರಿವರ್ತಿತವಾಗಿರುವ ಬುಡಕಟ್ಟುಗಳು

೨) ಹಿಂದೂಗಳೊಡನೆ ಭಾಗವಹಿಸಿಯೂ ತಮ್ಮ ಸಂಪ್ರದಾಯಗಳನ್ನು ನಂಬಿಕೆಗಳನ್ನೂ ಉಳಿಸಿಕೊಂಡಿರುವ ಬುಡಕಟ್ಟುಗಳು

೩) ಹಿಂದೂಧರ್ಮದ ಪ್ರಭಾವಕ್ಕೆ ಒಳಗಾಗದೆ, ಆ ಧರ್ಮದ ದಬ್ಬಾಳಿಕೆಯನ್ನು ಸಹಿಸದೆ ತಮ್ಮ ಸ್ವಾತಂತ್ರ್ಯಕ್ಕಾಗಿ, ಪ್ರತ್ಯೇಕವಾಗಿ ಹೋರಾಡುತ್ತಿರುವ ಬುಡಕಟ್ಟುಗಳು

(ಉದ್ಧೃತ: ಹಿ.ನಂ. ಶಂಕರನಾರಾಯಣ. ೧೯೮೨, ಪು. ೩)

ಈ ಮೂರು ಹಂತಗಳನ್ನು ಅವಲೋಕಿಸಿ ಉರುಬೇಡರನ್ನು ಅಧ್ಯಯನ ಮಾಡಿದಾಗ ಇವರು ಹಿಂದೂ ಧರ್ಮದ ಪ್ರಭಾವಕ್ಕೆ ಒಳಗಾಗಿ ಸಂಪೂರ್ಣ ಬದಲಾಗಿದ್ದಾರೆ ಎಂದು ಮತ್ತು ಇದೇ ಪಂಗಡದ ವ್ಯವಸಾಯಕರು ಹಿಂದೂ ಧರ್ಮವನ್ನು ಒಪ್ಪಿಕೊಂಡಿದ್ದರೂ ತಮ್ಮ ಸಂಪ್ರದಾಯಗಳನ್ನು ನಂಬಿಕೆಗಳನ್ನು ಬೆಳೆಸಿಕೊಂಡು ಬಂದಿರುವರು ಎಂದು ತಿಳಿದುಬರುತ್ತದೆ.

ಕರ್ನಾಟಕದಲ್ಲಿ ಬುಡಕಟ್ಟುಗಳ ಬಗ್ಗೆ ಅನೇಕ ಅಧ್ಯಯನಗಳು ನಡೆದಿವೆ. ಪ್ರಸ್ತುತ ಅಧ್ಯಯನವು ಸಂಕ್ರಮಣ ಸ್ಥಿತಿಯಲ್ಲಿರುವ, ಸಂಸ್ಕೃತೀಕರಣಗೊಳ್ಳುತ್ತಿರುವ ಅರೆ ಬುಡಕಟ್ಟುಗಳಲ್ಲಿ ಒಂದಾದ ಬೇಡರ ಸಮಾಜ ಮತ್ತು ಸಂಸ್ಕೃತಿಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ. ಈ ಅಧ್ಯಯನ ಈ ಹಿಂದೆ ನಡೆದಿರುವ ಅಧ್ಯಯನಕ್ಕಿಂತ ಭಿನ್ನವಾಗಿದೆ. ಏಕೆಂದರೆ ಇಂದಿನವರೆಗೂ ಬುಡಕಟ್ಟುಗಳ ಸಮಗ್ರ ಅಧ್ಯಯನಕ್ಕೆ ಪ್ರಾಮುಖ್ಯತೆ ಇದ್ದರೆ, ಇಲ್ಲಿ ಒಂದು ಘಟಕವನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಲಾಗಿದೆ. ಮಾನವನ 'ಭೌತಿಕ ಸಂಸ್ಕೃತಿ'ಯನ್ನು ಅದರಲ್ಲಿಯೂ ಅವನು ವಾಸಿಸುವ ಮನೆಯನ್ನು ಕೇಂದ್ರವಾಗಿಟ್ಟುಕೊಂಡು ಸಮಾಜ ಮತ್ತು ಸಂಸ್ಕೃತಿಯನ್ನು ತಿಳಿಯುವ ಪ್ರಯತ್ನ ಇಲ್ಲಿದೆ. **Carolina Ifeka** ಅವರ ಹೇಳಿಕೆಯಂತೆ ''ಜಗತ್ತನ್ನು ಮನೆಯೊಳಗೆ ಕಾಣುವ (**World in the house**)'' (ಉದ್ಧೃತ : ಪ್ರಕಾಶಚಂದ್ರ ಶೀಶಲ. ೧೯೯೨. ಪು. ೯) ಪ್ರಯತ್ನ ಮಾಡಲಾಗಿದೆ. ಭಾರತೀಯರು ಮನೆಯ ಒಳಗೆ ಜಗತ್ತನ್ನು ಕಾಣಲು ಪ್ರಯತ್ನಿಸುತ್ತಾರೆ. ಕೆಲವರಿಗೆ ಮನೆಯನ್ನು ಬಿಟ್ಟರೆ ಬೇರೆ ಪ್ರಪಂಚವಿಲ್ಲ. ದೇವರ ಆರಾಧನೆ, ಮದುವೆ, ಜನನ, ಮರಣ ಇತ್ಯಾದಿ ಸಂಸ್ಕಾರಗಳು ಮನೆಯ ಒಳಗೆ. ಮನೆಯ ರಚನಾ ವಿನ್ಯಾಸ, ಅದರ ಉಪಯುಕ್ತತೆ, ಮನೆ ಕಟ್ಟುವಿಕೆಯಲ್ಲಿ ಬಳಸುವ ವಸ್ತು ಮುಂತಾದವುಗಳು, ವ್ಯಕ್ತಿಯ ಅಥವಾ ಸಮುದಾಯದ ಸ್ಥಾನಮಾನವನ್ನು, ಆರ್ಥಿಕ ಮಟ್ಟವನ್ನು, ಸಂಸ್ಕೃತಿಯನ್ನು ಪರಿಚಯಿಸಿ ಕೊಡುತ್ತದೆ. ಅಲೆಗ್ಸಾಂಡರ್ ರೀ ಅವರ ''**The state of civilization of people is judged by its Architecture** '' (ಉದ್ಧೃತ : ತಿಪ್ಪೇರುದ್ರಸ್ವಾಮಿ, ಎಚ್., ೧೯೬೮, ಪು. ೫೨೫) ಎಂಬ ಮಾತು ಒಪ್ಪಬಹುದಾದರೂ ವಾಸ್ತುಶಿಲ್ಪವು ಕೇವಲ ನಾಗರಿಕತೆಯ ಬೆಳವಣಿಗೆಯನ್ನು ಗುರುತಿಸುವುದಷ್ಟೇ ಅಲ್ಲ, ಅದು ಸಮಾಜ, ಸಂಸ್ಕೃತಿಗಳ ಪ್ರತಿಬಿಂಬವು ಹೌದು.

/ಮಾನವ ತನ್ನ ಅವಶ್ಯಕತೆಗೆ ರೂಪಿಸಿ ಕೊಂಡ ಮನೆ ಅವನ ಆರ್ಥಿಕ ಮಟ್ಟ, ಸಾಮಾಜಿಕ ಸ್ಥಾನಮಾನ, ಅವನ ಸಂಸ್ಕೃತಿ ಇತ್ಯಾದಿಗಳ ಪ್ರತಿಬಿಂಬವಾಗಿದೆ. ಉದಾಹರಣೆಗೆ ಒಬ್ಬ ಶ್ರೀಮಂತ ವ್ಯಕ್ತಿಯು ತನ್ನ ಪ್ರತಿಷ್ಠೆಯನ್ನು ತೋರ್ಪಡಿಸಲು ಅಥವಾ ಒಂದು ಊರಿನ ಗೌಡ ತನ್ನ ಯಜಮಾನಿಕೆಯನ್ನು ಜನ ಗೌರವಿಸ ಬೇಕು ಎಂಬ ಉದ್ದೇಶದಿಂದ ರಚಿಸಿದ ಬೃಹತ ಮನೆ. ಅವನ ಆರ್ಥಿಕ, ಸಾಮಾಜಿಕ ಸ್ಥಾನಮಾನದ ಪ್ರತಿಬಿಂಬವಾಗಿದೆ. ಒಂದು ಗ್ರಾಮದ ಮನೆಗಳ ರಚನಾವಿನ್ಯಾಸ ಮತ್ತು ಅದರ ಒಳಗೆ ನಡೆಯುವ ವಿಧಿ, ನಿಷಿದ್ಧಗಳನ್ನು ಗಮನಿಸಿದಾಗ ಗ್ರಾಮದ ಜಾತಿ ವ್ಯವಸ್ಥೆ ಸ್ಪಷ್ಟವಾಗಿ ಗೋಚರಿಸುತ್ತದೆ. ಕೆಲವು ಜಾತಿಗಳಿಗೆ ಅಂಗಳದವರೆಗೆ, ಕೆಲವು ಜಾತಿಗಳಿಗೆ ಕಟ್ಟೆಯವರೆಗೆ, ಇನ್ನೂ ಕೆಲವು ಜಾತಿಯವರಗೆ ತಲೆಬಾಗಿಲವರೆಗೆ, ಮತ್ತು ಕೆಲವು ಜಾತಿಗಳಿಗೆ ಪಡಸಾಲೆಗೆ ಪ್ರವೇಶ ದೊರೆತರೆ, ರಕ್ತಸಂಬಂಧಗಳಿಗೆ, ಬಂಧು ಬಳಗದವರಿಗೆ ಮತ್ತು ಗುರುಗಳಿಗೆ ಅಡುಗೆಮನೆ ಹಾಗೂ ದೇವರ ಮನೆಯವರೆಗೆ ಪ್ರವೇಶವಿರುತ್ತದೆ. ಇಂಥ ವ್ಯವಸ್ಥೆ ಮೇಲ್ವರ್ಗದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಬುಡಕಟ್ಟುಗಳಲ್ಲಿ ಇಂಥ ನಿಯಮಗಳ ಪಾಲನೆ ಇಲ್ಲದಿದ್ದರೂ ಕೆಲವು ನಿಯಮಗಳನ್ನು ಇವರು ಸಹ ಪಾಲಿಸಿಕೊಂಡು ಬಂದಿದ್ದಾರೆ. ಮೈಲಿಗೆಯ ಸೂತಕದ ಸಮಯದಲ್ಲಿ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಮಹಿಳೆಯರು ಮನೆಯ ನಿರ್ದಿಷ್ಟ ಭಾಗವನ್ನು ಪ್ರವೇಶಿಸುವಂತಿಲ್ಲ. ಇಂಥ ಆಚರಣೆಗಳನ್ನು ಗಮನಿಸಿದಾಗ ಸಮಾಜದಲ್ಲಿ ಮಹಿಳೆಗೆ ಇರುವ ಗೌರವ, ಸ್ಥಾನಮಾನಗಳ ಬಗ್ಗೆ ಒಂದು ಕಲ್ಪನೆ ರೂಪಿತವಾಗುತ್ತದೆ. ಇಂಥ ಅತ್ಯಂತ ಸೂಕ್ಷ್ಮ ಅಂಶಗಳನ್ನು ಒಂದು ಮನೆಯ ಮೂಲಕ ಅಧ್ಯಯನ ಮಾಡಲು ಸಾಧ್ಯ. ಹಾಗೂ ಇಂದು ಆಧುನಿಕತೆಯ ಪ್ರಭಾವದಿಂದ ಬುಡಕಟ್ಟು ಜನಾಂಗದಲ್ಲಿ ಉಂಟಾಗುತ್ತಿರುವ ಪರಿವರ್ತನೆಯನ್ನು ಅವರ ಮನೆಗಳ ಮೂಲಕ ಅಧ್ಯಯನ ಮಾಡಬಹುದು. ಹಾಗೂ ಅವರು ಉಳಿಸಿ, ಬೆಳೆಸಿಕೊಂಡು ಬಂದ ಸಂಪ್ರದಾಯಗಳನ್ನು ಸಹ ಅಧ್ಯಯನ ಮಾಡಬಹುದು.\

ಈ ಹಿನ್ನೆಲೆಯಲ್ಲಿ ಬೇಡರನ್ನು ಕುರಿತು ಅಧ್ಯಯನವನ್ನು ಮಾಡಲಾಗಿದೆ. ಇವರು ಉತ್ತರ ಕರ್ನಾಟಕದ ಬೆಳಗಾವಿ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಲ್ಲದೆ ಹಳೇ ಮೈಸೂರಿನ ಚಿತ್ರದುರ್ಗ, ಕೋಲಾರ ಜಿಲ್ಲೆಗಳಲ್ಲಿ ಹಾಗೂ ಆಂಧ್ರದ ಕರ್ನೂಲು, ಅನಂತಪುರ ಜಿಲ್ಲೆಗಳಲ್ಲಿ ಹೆಚ್ಚಾಗಿ

ವಾಸವಾಗಿದ್ದಾರೆ. ಇವರು ಕರ್ನಾಟಕದ ಐದಾರು ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಪ್ರಯುಕ್ತ ದೀರ್ಘಾವಧಿಯ ಅಧ್ಯಯನ ಅವಶ್ಯಕ.

ಈ ಸಂಶೋಧನಾ ಪ್ರಬಂಧವನ್ನು ನಿರ್ದಿಷ್ಟವಾಗಿ ಒಂದು ತಾಲ್ಲೂಕಿಗೆ ಅಂದರೆ ಹೊಸಪೇಟೆ ತಾಲ್ಲೂಕಿಗೆ ಸೀಮಿತಪಡಿಸಿಕೊಳ್ಳಲಾಗಿದೆ. ಕ್ಷೇತ್ರಕಾರ್ಯಕ್ಕಾಗಿ ಮತ್ತು ಸ್ಥೂಲ ಅಧ್ಯಯನದ ದೃಷ್ಟಿಯಿಂದ ಊರನಾಯಕರು ಮತ್ತು ಮ್ಯಾಸನಾಯಕರು ಹೆಚ್ಚಾಗಿರುವ ತಿಮ್ಮಲಾಪುರ ಹಾಗೂ ಕಮಲಾಪುರವನ್ನು ಅಧ್ಯಯನಕ್ಕೆ ಆಯ್ಕೆಮಾಡಿಕೊಳ್ಳಲಾಗಿದೆ. ಊರನಾಯಕರು ಸ್ಥಳೀಯರೇ ಆಗಿದ್ದು ಕನ್ನಡವನ್ನು ಮಾತನಾಡುತ್ತಾರೆ. ಆದರೆ ಮ್ಯಾಸನಾಯಕರು ಆಂಧ್ರಪ್ರದೇಶದಿಂದ ವಲಸೆ ಬಂದವರಾಗಿದ್ದು ತೆಲುಗು ಇವರ ಮಾತೃಭಾಷೆ. ಇಂದು ಇವರು ಮಾತನಾಡುವ ಭಾಷೆ ಕನ್ನಡ ಮಿಶ್ರಿತ ತೆಲುಗು. ಮ್ಯಾಸನಾಯಕರು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಆಂಧ್ರದಿಂದ ಕಮಲಾಪುರಕ್ಕೆ ಬಂದಿರಬೇಕು. ಇವೆರಡು ಜನಾಂಗಗಳು ಒಂದೇ ಪಂಗಡಕ್ಕೆ ಸೇರಿದ ಉಪಪಂಗಡಗಳಾದರೂ ಸಮಾಜ ಮತ್ತು ಸಂಸ್ಕೃತಿಯಲ್ಲಿ ವೈವಿಧ್ಯತೆ ಕಂಡು ಬರುತ್ತದೆ.

ಒಟ್ಟಾರೆ ಹೇಳುವುದಾದರೆ ಇಲ್ಲಿ ನಾಯಕ ಅಥವಾ ಬೇಡ ಜನಾಂಗದ ಎರಡು ಪ್ರಮುಖ ಉಪಪಂಗಡಗಳ ಸಮಾಜ, ಸಂಸ್ಕೃತಿಯನ್ನು ಅಧ್ಯಯನ ಮಾಡಲು ಇವರೇ ರಚಿಸಿಕೊಂಡ ಗುಡಿಸಲು ಅಥವಾ ಮನೆಗಳನ್ನು ಹಾಗೂ ಮನೆಗೆ ಸಂಬಂಧಿಸಿದ ಇತರ ಘಟಕಗಳನ್ನು ಕೇಂದ್ರವಾಗಿಟ್ಟು -ಕೊಳ್ಳಲಾಗಿದೆ. ಆಂಶಿಕ ಅಧ್ಯಯನದಿಂದ ಸಮಗ್ರ ಅಧ್ಯಯನ ಮಾಡುವ ಉದ್ದೇಶವನ್ನು ಒಳಗೊಂಡಿದೆ. ಈ ಅಧ್ಯಯನ ಇಡೀ ಕರ್ನಾಟಕಕ್ಕೆ ಅನ್ವಯಿಸದೇ ಹೊಸಪೇಟೆ ತಾಲ್ಲೂಕಿಗೆ ಸೀಮಿತಗೊಂಡಿದೆ. ಅದು ಈ ಪ್ರಬಂಧದ ಮಿತಿಯೂ ಹೌದು.

೧.೩ ಅಧ್ಯಯನಗಳ ಸಮೀಕ್ಷೆ

ಬ್ರಿಟಿಷರ ಆಗಮನದ ನಂತರದಲ್ಲಿ ಬುಡಕಟ್ಟುಗಳ ಅಧ್ಯಯನ ಆರಂಭವಾಯಿತು ಎಂದರೆ ತಪ್ಪಾಗಲಾರದು. ಪುರಾತನ ಕಾವ್ಯಗಳಲ್ಲಿ ಬುಡಕಟ್ಟುಗಳ ಅಸ್ತಿತ್ವದ ಉಲ್ಲೇಖ ಕಂಡು ಬಂದರೂ ಬುಡಕಟ್ಟುಗಳ ಕುರಿತ ಪ್ರತ್ಯೇಕ ಅಧ್ಯಯನವಾಗಲಿ, ವಿವರಣೆಗಳಾಗಲಿ ದೊರೆಯುವುದಿಲ್ಲ. ಬ್ರಿಟಿಷ್ ಅಧಿಕಾರಿಗಳು ಮತ್ತು ಪಾದ್ರಿಗಳು ತಮ್ಮ ಅನುಕೂಲತೆಗಾಗಿ ಬುಡಕಟ್ಟುಗಳ ಅಧ್ಯಯನಗಳನ್ನು ಕೈಗೊಂಡರು. ವಿದೇಶಿಯರು ಈ ಅಧ್ಯಯನಗಳನ್ನು ಆರಂಭಿಸಿದ ಕಾರಣ ಅನೇಕ ತಪ್ಪುಗಳು ಕಂಡು ಬರುತ್ತವೆ. ಭಾರತೀಯ ವಿವಿಧ ಸಂಸ್ಕೃತಿ, ಸಮಾಜ, ಭಾಷೆಗಳ ತಿಳಿವಳಿಕೆಯ ಕೊರತೆಯಿಂದ ಈ ತಪ್ಪುಗಳು ನಡೆದಿರುವ ಸಾಧ್ಯತೆ ಹೆಚ್ಚು. ಅಲ್ಲದೇ ಸ್ಥಳೀಯರು ವಿದೇಶಿಯರಿಗೆ ಅಥವಾ ಅಪರಿಚಿತರಿಗೆ ಸಹಕರ ನೀಡದೆ ಹೋದದ್ದರಿಂದ ಮಾಹಿತಿ ಸಂಗ್ರಹಣೆಯಲ್ಲಿ ತೊಡಕುಂಟಾಗಿರಬೇಕು. ಬ್ರಿಟಿಷ್ ಅಧಿಕಾರಿಗಳು ಆದಿವಾಸಿಗಳಿರುವ ಪ್ರದೇಶಕ್ಕೆ ಹೋದರೆ ಕಂದಾಯ ವಸೂಲಿ ಮಾಡಲು ಅಥವಾ ತಮ್ಮನ್ನು ಬಂಧಿಸಿ ಗುಲಾಮರನ್ನಾಗಿ ಮಾಡಿಕೊಳ್ಳಲು ಬಂದಿದ್ದಾರೆ ಎಂದು ಭಯ ಪಟ್ಟು ಕಾಡಿನಲ್ಲಿ ತಲೆಮರಿಸಿಕೊಂಡು ಓಡಾಡುತ್ತಿದ್ದರು.

ಆರಂಭದಲ್ಲಿ ಬುಡಕಟ್ಟು ಅಧ್ಯಯನಗಳು ಭಾರತದಲ್ಲಿ ಅದರಲ್ಲಿಯೂ ಉತ್ತರ ಭಾರತದಲ್ಲಿ ತೀವ್ರವಾಗಿ ಮತ್ತು ವ್ಯಾಪಕವಾಗಿ ನಡೆದವು. ಇಂಥ ಅಧ್ಯಯನಗಳಲ್ಲಿ ಪ್ರಮುಖ ಪಾತ್ರವಹಿಸಿದ ವ್ಯಕ್ತಿ ವೆರಿಯರ್ ಎಲ್ವಿನ್. ಈತ ಇಂಗ್ಲಂಡಿನಿಂದ ಕ್ರೈಸ್ತಧರ್ಮ ಪ್ರಚಾರಕ್ಕಾಗಿ ಬಂದ ಪಾದ್ರಿ. ಬುಡಕಟ್ಟುಗಳ ಅಧ್ಯಯನ ಆರಂಭ ಮಾಡಿಕೊಂಡ ನಂತರ ತನ್ನ ಧರ್ಮ ಪ್ರಚಾರ ಕಾರ್ಯವನ್ನೇ ಕೈಬಿಟ್ಟಂಥ ವ್ಯಕ್ತಿ. ಗಿರಿಜನರ ಸಂಸ್ಕೃತಿಯಲ್ಲಿ ಆಸಕ್ತಿ ಮೂಡಿ ಅವರ ಏಳಿಗೆ, ಸಮಸ್ಯೆ ಇತ್ಯಾದಿಗಳಿಗೆ ಸ್ಪಂದಿಸುತ್ತಾ ಗಿರಿಜನರ ಕನ್ಯೆಯನ್ನೇ ಮದುವೆ ಮಾಡಿಕೊಂಡ. ಹಿಂದೂ ಸಂಸ್ಕೃತಿಯೊಡನೆ ಗಿರಿಜನರ ಸಂಸ್ಕೃತಿಯ ವಿಲೀನೀಕರಣವನ್ನು ಇವರು ತೀವ್ರವಾಗಿ ವಿರೋಧಿಸುತ್ತಿದ್ದರು (ಶಂಕರನಾರಾಯಣ, ತಿ.ನಂ., ೧೯೮೩, ಪು. ೧೪). ಗಿರಿ ವಾಸಿಗಳು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಸ್ವತಂತ್ರವಾಗಿ ಜೀವಿಸಿದ್ದಲ್ಲಿ ಮುಂದೆ ನಿಧಾನವಾಗಿ ಬದಲಾವಣೆ ಹೊಂದುತ್ತಾರೆ ಎಂದು ಅವರ ನಂಬಿಕೆ. ಇವರು ನೇಫಾ ಪ್ರದೇಶದ ಜನರನ್ನು ಮತ್ತು ನಾಗ ಸಂಸ್ಕೃತಿಯನ್ನು ಅಧ್ಯಯನ ಮಾಡಿದ್ದಾರೆ. ಇವರಲ್ಲದೇ ಮಿಲ್ಸ್, ಸ್ಮಿಥ್,

ಮುಜುಂದಾರ ಮುಂತಾದವರು ಬುಡಕಟ್ಟುಗಳ ಅಧ್ಯಯನಗಳನ್ನು ಕೈಗೊಂಡರು. ದಕ್ಷಿಣ ಭಾರತದಲ್ಲಿ ಇಷ್ಟು ವ್ಯಾಪಕವಾಗಿ ಹಾಗೂ ವಿವರಣಾತ್ಮಕವಾಗಿ ಅಧ್ಯಯನಗಳು ನಡೆಯಲಿಲ್ಲ ಎಂದೇ ಹೇಳಬಹುದು. ಕ್ರಿ. ಶ. ೧೯೦೦ರಲ್ಲಿ ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿ ಅವರ ''Castes and Tribes of Southern India'' ಕೃತಿಯು ದಕ್ಷಿಣ ಭಾರತದ ಹಲವು ಜಾತಿ, ಬುಡಕಟ್ಟುಗಳ ಸ್ಥೂಲ ವಿವರಣೆಯನ್ನು ಒಳಗೊಂಡಿದೆ. ಎಡ್ಗರ್ ಥರ್ಸ್ಟನ್ ಅವರು ಒಟ್ಟು ಏಳು ಸಂಪುಟಗಳಲ್ಲಿ ಬುಡಕಟ್ಟುಗಳ ಜನರನ್ನು ಪರಿಚಯ ಮಾಡಿ ಕೊಟ್ಟಿದ್ದಾರೆ. ಥರ್ಸ್ಟನ್ ಒಬ್ಬ ಆಂಗ್ಲ ಅಧಿಕಾರಿ. ಕಾರಣ ತಮ್ಮ ಕ್ಷೇತ್ರಕಾರ್ಯದಲ್ಲಿ ಅನೇಕ ತೊಂದರೆಗಳನ್ನು ಎದುರಿಸ ಬೇಕಾಯಿತು. ಜತೆಗೆ ಇಲ್ಲಿನ ಹವಾಮಾನವೂ ಇವರಿಗೆ ತೊಂದರೆಯನ್ನುಂಟು ಮಾಡಿತ್ತು. ಭಾರತದಲ್ಲಿ ಇತರ ಶಾಸ್ತ್ರಗಳ ಅಂದರೆ ಇತಿಹಾಸ, ಜಾನಪದಗಳಂತೆ ಬುಡಕಟ್ಟು ಅಧ್ಯಯನದ ಆರಂಭದಲ್ಲಿ ಕೇವಲ ದಾಖಲೆಗಳ ಸಂಗ್ರಹಣೆಗೆ ಮತ್ತು ಸೂಕ್ಷ್ಮ ಅಧ್ಯಯನಕ್ಕಿಂತ ಸಮಗ್ರ ಅಧ್ಯಯನಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿತ್ತು. ಥರ್ಸ್ಟನ್ ಕೃತಿಯು ಇದರಿಂದ ಹೊರತಾಗಿಲ್ಲ.

ಥರ್ಸ್ಟನ್ ಅವರ ಏಳು ಸಂಪುಟಗಳಲ್ಲಿ ಮೊದಲ ಸಂಪುಟದಲ್ಲಿ ಕರ್ನಾಟಕ ಮತ್ತು ಆಂಧ್ರದಲ್ಲಿನ ಬೇಡ ಅಥವಾ ಬೋಯಗಳ ವಿವರಣೆ ದೊರೆಯುತ್ತದೆ (ಎಡ್ಗರ್ ಥರ್ಸ್ಟನ್. ೧೯೮೭, ಪು. ೧೮೦-೨೦೯). ಬಳ್ಳಾರಿ ಜಿಲ್ಲೆಯ ಇತರ ಹಿಂದೂ ಜಾತಿಗಳಲ್ಲಿ ಬೇಡರೂ ಒಬ್ಬರು, ಇವರು ಹೈದರನ ಸೈನ್ಯದಲ್ಲಿ ಇದ್ದರೆಂದು ಹಾಗೂ ೧೮ನೆಯ ಶತಮಾನದ ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯ ಪಾಳೆಯಗಾರರು ಬೇಡರ (ಪು. ೧೮೩) ಸಮುದಾಯಕ್ಕೆ ಸೇರಿದವರು ಎಂದಿದ್ದಾರೆ. ಇಂದು ಬೇಡರು ಕೃಷಿಕರಾಗಿ ಜೀವಿಸುತ್ತಿದ್ದಾರೆ. ತೆಲುಗು ಮತ್ತು ಕನ್ನಡ ಮಾತನಾಡುವ ಬೇಡರ ಉಪವಿಭಾಗಗಳಾದ ಊರ ಬೇಡ ಮತ್ತು ಮ್ಯಾಸ ಬೇಡರನ್ನು ಹಾಗೂ ಅವರ ಬೆಡಗುಗಳನ್ನು ಥರ್ಸ್ಟನ್ ವಿವರಿಸಿದ್ದಾರೆ. ಬೆಡಗುಗಳಲ್ಲಿ ಎನ್ಮಲರು, ಮಂದಲವರು, ಪೂವಲರು ಮತ್ತು ಮೀಣಲವರು ಎಂದು ಕ್ರಮವಾಗಿ ಎಮ್ಮೆಯವರು, ದನ ಕಾಯುವವರು, ಹೂವಿನವರು, ಮೀನಿನವರು ಎಂದು ತಿಳಿಸಿದ್ದರೆ.

ಈ ಕೃತಿಯಲ್ಲಿ ಸರ್ಕಾರಿ ದಾಖಲೆಗಳನ್ನೇ ಆಕರವಾಗಿ ಬಳಸಿಕೊಳ್ಳಲಾಗಿದೆ. ಸರ್ಕಾರಿ ನೌಕರರೇ ಆಕರಗಳ ಸಂಗ್ರಹಕರು. ೧೮೯೧, ೧೯೦೧ರ ಮೈಸೂರು ಜನಸಂಖ್ಯಾ ವರದಿ ಮತ್ತು ೧೯೦೧ರ ಮದರಾಸ್ ಜನಸಂಖ್ಯಾ ವರದಿಯನ್ನು ಅವಲಂಬಿಸಿದೆ. ಇದರಲ್ಲಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಬೇಡರ ಆಚಾರ ವಿಚಾರಗಳನ್ನು ಕೊಟ್ಟಿದ್ದಾರೆ. ಇದರಿಂದ ೧೦೦ ವರ್ಷ (೧೮೯೪- ೧೯೯೪) ದಲ್ಲಿ ನಾಯಕರಲ್ಲಿ ಉಂಟಾದ ಮಾರ್ಪಾಡುಗಳನ್ನು ಗುರುತಿಸಬಹುದು. ಮ್ಯಾಸಬೇಡರು ಕೋಳಿಯನ್ನು ತಿನ್ನುವಂತಿಲ್ಲ, ಹೆಂಡ, ಈಚಲನ್ನು ಬಳಸುವಂತಿಲ್ಲ. ಹಾಗೂ ನಾಯಕರ ಮನೆಗಳಲ್ಲಿ ಊಟ ಮಾಡುವಂತೆ ಇರಲಿಲ್ಲ. ಆದರೆ ಇಂದು ಕೆಲವರು ಈ ಆಚರಣೆಗಳನ್ನು ಕೈಬಿಟ್ಟಿದ್ದಾರೆ. ಇಂದು ಉಪಪಂಗಡಗಳಲ್ಲಿ ವೈವಾಹಿಕ ಸಂಬಂಧವು ಏರ್ಪಟ್ಟಿದೆ. ಇಂಥ ನಿದರ್ಶನಗಳಿಂದ ಉಪಪಂಗಡಗಳು ತಮ್ಮ ಸಮುದಾಯದ ಕಟ್ಟುನಿಟ್ಟಾದ ನೀತಿ-ನಿಯಮಗಳನ್ನು ಸಡಿಲಿಸಿಕೊಂಡಿರುವುದು ಸ್ಪಷ್ಟವಾಗುತ್ತದೆ.

ಥರ್ಸ್ಟನ್ ಅವರ ಕೃತಿಗಿಂತ ಬೇಡ ಜನಾಂಗದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಅನಂತಕೃಷ್ಣ ಅಯ್ಯರ್, ಎಲ್. ಕೆ. ಅವರ ''MYSORE CASTES AN D TRIBES'' (Vol-2), 1988, pp. 197 - 237) ಪುಸ್ತಕವು ಒದಗಿಸುತ್ತದೆ. ಥರ್ಸ್ಟನ್‌ರವರ ಕೃತಿಯು ಇಡೀ ದಕ್ಷಿಣ ಭಾರತವನ್ನು ಒಳಗೊಂಡಿದೆ. ಇದರ ವ್ಯಾಪ್ತಿ ವಿಶಾಲವಾಗಿದೆ. ಆದರೆ ಅನಂತಕೃಷ್ಣ ಅಯ್ಯರ್, ಎಲ್.ಕೆ. ಅವರ ಕೃತಿಯು ಅಂದಿನ ಮೈಸೂರು ರಾಜ್ಯಕ್ಕೆ ಮಾತ್ರ ಸೀಮಿತಗೊಂಡಿದೆ (ಬಳ್ಳಾರಿ ಜಿಲ್ಲೆ ಮದ್ರಾಸ್ ಅಧಿಪತ್ಯಕ್ಕೆ ಸೇರಿತ್ತು). ಕಾರಣ ಮೈಸೂರು ರಾಜ್ಯದಲ್ಲಿರುವ ಜಾತಿ ಮತ್ತು ಬುಡಕಟ್ಟುಗಳ ಸಂಸ್ಕೃತಿಯನ್ನು ವಿವರಣಾತ್ಮಕವಾಗಿ ಅಧ್ಯಯನ ಮಾಡಲು ಸಾಧ್ಯವಾಗಿದೆ. ಇದರಲ್ಲಿ ಬೇಡರು ಬೇಟೆ ಮತ್ತು ಕೃಷಿಯನ್ನು ಮಾಡಿಕೊಂಡಿದ್ದ ಸಮುದಾಯ ಎಂದು ಹೇಳಿದೆ. ಈ ಜನವರ್ಗ ಮದ್ರಾಸ್ ಅಧಿಪತ್ಯಕ್ಕೆ ಒಳಪಟ್ಟ ಬಳ್ಳಾರಿ, ಕರ್ನೂಲು ಮತ್ತು ಅನಂತಪುರ ಜಿಲ್ಲೆ, ನಿಜಾಂ ಆಡಳಿತಕ್ಕೆ ಒಳಪಟ್ಟ ಬೆಳಗಾವ್, ಬಿಜಾಪುರ, ಧಾರವಾಡ, ದಕ್ಷಿಣ ಮರಾಠಿ ಜಿಲ್ಲೆಗಳಲ್ಲಿ, ದಖ್ಖನ್ ಮತ್ತು ಕೊಂಕಣ ಪ್ರದೇಶದಲ್ಲಿ ನೆಲಸಿರುವರು ಎಂದು ಹೇಳಿರುವರು. ಅಲ್ಲದೆ ೧೯೩೧ರ ಮೈಸೂರು ಜನಸಂಖ್ಯಾ ವರದಿಯ ಸಹಾಯದಿಂದ ಬೆಂಗಳೂರು, ಕೋಲಾರ, ತುಮಕೂರು, ಮೈಸೂರು, ಚಿತ್ರದುರ್ಗ, ಹಾಸನ, ಕಡೂರು, ಶಿವಮೊಗ್ಗ ಜಿಲ್ಲೆಯಲ್ಲಿ

ಬೇಡರ ಜನಸಂಖ್ಯೆಯನ್ನು ದಾಖಲಿಸಿದ್ದಾರೆ. ಬೇಡರ ಒಟ್ಟು ಸಂಖ್ಯೆ ೨,೭೧,೧೩೪ ರಲ್ಲಿ ೧,೩೮,೩೪೫ ಗಂಡಸರು, ೧,೩೨,೭೮೯ ಹೆಂಗಸರು. ಇದರಿಂದ ೧೯೨೧ ರಿಂದ ೧೯೯೧ರ ವರೆಗಿನ ಬೇಡರ ಜನಸಂಖ್ಯೆಯಲ್ಲಾದ ಹೆಚ್ಚಳವನ್ನು ಗುರುತಿಸುವುದು ಸುಲಭವಾಗಿದೆ.

ಇದರೊಂದಿಗೆ ಬೇಡರ ಪ್ರಮುಖ ಉಪಪಂಗಡಗಳಾದ ಊರ ಬೇಡ, ಮ್ಯಾಸ ಬೇಡ, ಗುಡಿಸಲ ಬೇಡ ಇವರುಗಳ ವಿವರಣೆ ದೊರೆಯುತ್ತದೆ. ಅಲ್ಲದೆ ಬೆಡಗುಗಳ ವಿವರಣೆ ದೊರೆಯುತ್ತದೆ. ಇಲ್ಲಿ ೪೨ ಬೆಡಗುಗಳನ್ನು ಹೆಸರಿಸಿದ್ದಾರೆ (ಪು. ೨೦೪-೨೦೫). (ಅನುಬಂಧ-೧).

ಸ್ವತಂತ್ರದ ನಂತರದಲ್ಲಿ ಬುಡಕಟ್ಟುಗಳ ಅಧ್ಯಯನದ ಮಾದರಿಯಲ್ಲಿ ಬದಲಾವಣೆ ಉಂಟಾಯಿತು. ಬುಡಕಟ್ಟುಗಳ ಸಮಗ್ರ ಅಧ್ಯಯನಕ್ಕಿಂತ ಪ್ರತ್ಯೇಕ ಅಧ್ಯಯನಗಳಿಗೆ ಮಾನ್ಯತೆ ದೊರೆಯಿತು. ಲಂಬಾಣಿಗಳ, ಕುರುಬರ, ಗೊಲ್ಲರ, ಬೇಡರ ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಬೇಡರ ಕುರಿತು ನಡೆದ ಅಧ್ಯಯನಗಳಲ್ಲಿ ೧೯೪೮ರ ಹೆಚ್. ವಿ. ವೀರನಾಯಕರ ಕೃತಿ 'ಕ್ಷಾತ್ರಾಂಶ ಪ್ರಬೋಧ' ವು ಬೇಡ ಜನಾಂಗದ ಪೌರಾಣಿಕ, ಐತಿಹಾಸಿಕ ಮೂಲದ ಬಗ್ಗೆ ಮಾಹಿತಿ ನೀಡುತ್ತದೆ.

ಆರ್. ರಾಜಣ್ಣರ 'ನಾಯಕ ಜನಾಂಗದ ಇತಿಹಾಸ' (೧೯೮೨)ವು ಬೇಡರ ಕುರಿತು ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಬೇಡರ ಮೂಲವನ್ನು ಹಾಗೂ ಮೂಲ ಪುರುಷರ, ಐತಿಹಾಸಿಕ ಪುರುಷರ ಕತೆಗಳನ್ನು ಹೇಳುತ್ತದೆ. ಇಲ್ಲಿ ಸಮಾಜ, ಸಂಸ್ಕೃತಿ, ಆಚಾರ - ವಿಚಾರಗಳನ್ನು ತಿಳಿಸಿ ಕೊಡುವುದಿಲ್ಲ. ಆದರೆ ಕೃತಿಯ ಆರಂಭದಲ್ಲಿ ನಾಯಕರನ್ನು ಯಾವ ರೀತಿ ಗುರುತಿಸಬೇಕು ? ಎಂದು ವಿವರಿಸುವಾಗ ಬೇಡರ ದೈಹಿಕ ಲಕ್ಷಣ, ಅವರ ಉಡುಗೆ - ತೊಡುಗೆ, ಆಚಾರ-ವಿಚಾರ, ಧಾರ್ಮಿಕತೆ ಇತ್ಯಾದಿಗಳನ್ನು ಸ್ಥೂಲವಾಗಿ ಪರಿಚಯಿಸುತ್ತಾರೆ. ''ನಾಯಕರು ಸಾಲಿಗ್ರಾಮ ಮತ್ತು ಲಿಂಗವನ್ನು ಪ್ರತ್ಯೇಕ ಬಟ್ಟೆಯಲ್ಲಿ ಕಟ್ಟಿ ಬುಟ್ಟಿಗಳಲ್ಲಿಟ್ಟು, ಬುಟ್ಟಿಗಳನ್ನೇ ಪೂಜೆ ಮಾಡುತ್ತಾರೆ. ಈಬುಟ್ಟಿಗಳಲ್ಲಿರುವ ಸಾಲಿಗ್ರಾಮ ಮತ್ತು ಲಿಂಗವು ಕ್ರಮವಾಗಿ ವೈಷ್ಣವ ಮತ್ತು ಶೈವ ಪಂಥದವರ ದೈವಗಳು. ಭಕ್ತಾದಿಗಳಲ್ಲಿ ವೈಷ್ಣವ ಸಂಪ್ರದಾಯದವರು ಮತ್ತು ಶೈವ ಸಂಪ್ರದಾಯದವರೆಂದು ಎರಡು ಪಂಥಗಳೇ ಇವೆ. ವೈಷ್ಣವ ಹಾಗೂ ಶೈವ ಪಂಥದವರು ವಿಭೂತಿ ಧರಿಸುತ್ತಾರೆ. ಶೈವ ಪಂಥದವರು ನಾಮವನ್ನು ಮಾತ್ರ

ಭರಿಸುವುದಿಲ್ಲ'' (೧೯೮೮, ಪು. ೨-೩). ಇಂಥ ಅನೇಕ ಸ್ವಅನುಭವಗಳನ್ನು ಲೇಖಕರು ಕೃತಿಯಲ್ಲಿ ಪರಿಚಯಿಸಿ ಕೊಟ್ಟಿದ್ದಾರೆ. ಈ ವಿವರಣೆಯು ಮ್ಯಾಸ ಬೇಡರಿಗೆ ಮಾತ್ರ ಸಂಬಂಧಿಸಿದ್ದಾಗಿದೆ. ಇದು ಸಹ ''ಕ್ಷತ್ರಂಕ ಪ್ರಬೋಧ'' ದಂತೆ ಒಂದು ಜನಾಂಗದ ಶ್ರೇಷ್ಟತೆಯನ್ನು ಎತ್ತಿಹಿಡಿಯುವಂಥ ಕೃತಿ.

ಥಂಗ, ಡಿ.ಬಿ. ಅವರ 'ಜನಾಂಗ ಪರಿಚಯ' (೧೯೮೮)ದಲ್ಲಿ ಒಟ್ಟು ಎಂಟು ಜನಾಂಗಗಳ ಪರಿಚಯವನ್ನು ಮಾಡಿಕೊಡಲಾಗಿದೆ. ಮೊದಲ ಲೇಖನವೇ 'ನಾಯಕ ಜನಾಂಗ'ಕ್ಕೆ (ಪು. ೧-೭) ಸಂಬಂಧಪಟ್ಟಿದೆ. ನಾಯಕ ಜನಾಂಗವು ವೇದಗಳ ಕಾಲದಿಂದ ಅಸ್ತಿತ್ವದಲ್ಲಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಬೇಡರು ಪಶುಪಾಲನ ವಲಸೆ ದ್ರಾವಿಡ ಮೂಲದವರು(ಹಿರೇಮಠ, ಎಸ್.ಎಸ್. ೧೯೯೪, ಪು.೧). ಚಿತ್ರಲಿಂಗಯ್ಯ ಅವರು ತಮ್ಮ 'ನಾಯಕ ಜನಾಂಗದ ನಿಷ್ಪತ್ತಿ'(ಇತಿಹಾಸ ಚಂದ್ರಿಕೆ)ಯ ಕುರಿತು ಚರ್ಚೆ ಮಾಡುತ್ತಾ ನಾಯಕ ಎಂಬ ಪದ ೯ ನೆಯ ಶತಮಾನದಿಂದ ಕಂಡು ಬರುತ್ತದೆ ಎಂದು ಹೇಳಿರುವರು. ಮಹಾಕಾವ್ಯಗಳಲ್ಲಿ, ಪುರಾಣಗಳಲ್ಲಿ ಬೇಡರ ಕತೆಗಳು ಬರುವುದರಿಂದ ಥಂಗ ಅವರು ನಾಯಕರು ವೇದಗಳ ಕಾಲದಲ್ಲಿ ಇದ್ದಂತ ಜನ ಎಂದು ನಂಬಿರ ಬೇಕು.

ಥಂಗ ಅವರು ಬೇಡ, ನಾಯಕ, ತಳವಾರ, ವಾಲ್ಮೀಕಿ, ವಾಲ್ಮೀಕಿ ಮಕ್ಕಳು, ಕನ್ನಯ್ಯನ ಮಕ್ಕಳು ಇತ್ಯಾದಿ ಹೆಸರುಗಳ ಹಿಂದಿನ ಕಥೆಗಳನ್ನು ಕೊಟ್ಟಿದ್ದಾರೆ. ಇಂಥ ಕಾರಣಕ್ಕಾಗಿ ಈ ಹೆಸರು ಬಂದಿತು ಎಂದು ವಿವರಿಸಿರಿಸಿದ್ದಾರೆ. ಆದರೆ ಬೇಡರ ಸಮಾಜ, ಸಂಸ್ಕೃತಿಯ ಪ್ರಸ್ತಾಪವನ್ನೇ ಮಾಡಿಲ್ಲ. ಹೆಸರೇ ಹೇಳುವಂತೆ ಇದು ಕೇವಲ ಜನಾಂಗದ ಪರಿಚಯವನ್ನು ಮಾತ್ರ ಮಾಡಿಕೊಡುತ್ತದೆ.

ಇವುಗಳಲ್ಲದೆ ಬೇಡರ ಪ್ರಮುಖ ಉಪಪಂಗಡವಾದ ಮ್ಯಾಸಬೇಡರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಯನಗಳೂ ನಡೆದಿವೆ. ಅವುಗಳಲ್ಲಿ ಎಂ. ಜಿ. ಈಶ್ವರಪ್ಪ ಅವರ 'ಮ್ಯಾಸ ಬೇಡರು' (೧೯೮೨), ಕೃಷ್ಣಮೂರ್ತಿ ಹನೂರು ಅವರ 'ಮ್ಯಾಸ ಬೇಡರ ಸಂಸ್ಕೃತಿ' (೧೯೯೩) ಮತ್ತು ರುದ್ರಪ್ಪ, ಕೆ. ಅವರ 'ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ' (೧೯೯೫) ಎಂಬ ಪುಸ್ತಕಗಳು ಪ್ರಮುಖವಾಗಿವೆ. ಬ್ರಿಟೀಷ್ ಮತ್ತು ಬ್ರಿಟೀಷ್ ನಂತರದ ಎರಡು ಮೂರು ದಶಕಗಳಲ್ಲಿ ಹಲವು ಬುಡಕಟ್ಟುಗಳ ಸ್ಥೂಲ ಅಧ್ಯಯನಗಳು ನಡೆದವು. ಆಳವಾದ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ಇರಲಿಲ್ಲ. ಈ ಹಂತದಲ್ಲಿ ಕೇವಲ

ಸಂಗ್ರಹಣೆಗೆ ಮಹತ್ವ ನೀಡಿದ್ದರು. ನಂತರದ ದಶಕಗಳಲ್ಲಿ ಒಂದೇ ಜಾತಿ ಅಥವಾ ಸಮುದಾಯವನ್ನು ತೆಗೆದು ಕೊಂಡು ಆಳವಾದ, ವಿವರಣಾತ್ಮಕವಾದ ಅಧ್ಯಯನಗಳು ನಡೆದವು. ಇಂದು ಒಂದೇ ಬುಡಕಟ್ಟಿನ ಉಪಪಂಗಡಗಳನ್ನು ಕುರಿತು ಪ್ರತ್ಯೇಕವಾಗಿ, ವಿವರಣಾತ್ಮಕ ಮತ್ತು ವಿಶ್ಲೇಷಣಾತ್ಮಕವಾಗಿ ಅಧ್ಯಯನಗಳು ನಡೆಯುತ್ತಿವೆ.

ಈಶ್ವರಪ್ಪ, ಎಂ. ಜಿ. ಅವರು ತಮ್ಮ ಕೃತಿಯಲ್ಲಿ ನಾಯಕರ ಉಪಪಂಗಡಗಳ ಬಗ್ಗೆ ತಿಳಿಸಿ, ನಂತರ ಮ್ಯಾಸನಾಯಕ ಎಂಬ ಹೆಸರು ಬರಲು ಕಾರಣ, ಅದಕ್ಕೆ ಸಂಬಂಧಿಸಿದ ಕಥೆಗಳನ್ನು ನೀಡಿದ್ದಾರೆ. ''ವಿಜಯನಗರ ಸಾಮ್ರಾಜ್ಯದಲ್ಲಿ ಮೀಸಲು ಪಡೆಯ ನಾಯಕರಾಗಿದ್ದುದರಿಂದ ಮೀಸಲು ನಾಯಕರು ಮ್ಯಾಸನಾಯಕರು ಎಂದಾಗಿದೆ'' ಎನ್ನುತ್ತಾರೆ (೧೯೮೩. ಪು. ೬) ಮ್ಯಾಸ ಬೇಡರ ಮೂಲ ವೃತ್ತಿ ಪಶುಪಾಲನೆಯಾಗಿತ್ತು ಎಂಬುದು ಇವರ ಅಭಿಪ್ರಾಯ. ನಾಯಕರಲ್ಲಿ ತಳವಾರ, ಊರನಾಯಕ, ಮ್ಯಾಸನಾಯಕ ಎಂಬ ಉಪಪಂಗಡಗಳಿರುವಂತೆ ಮ್ಯಾಸ ಬೇಡರಲ್ಲಿಯೂ ಊರಮ್ಯಾಸ, ಅಡವಿಮ್ಯಾಸ, ಕಳ್ಳಮ್ಯಾಸ ಮತ್ತು ಮುಂಜ ಮ್ಯಾಸ ಎಂಬ ನಾಲ್ಕು ಭೇದಗಳನ್ನು ಗುರುತಿಸಿದ್ದಾರೆ. ಆದರೆ ಇವುಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿಲ್ಲ. ಈ ಕೃತಿಯಲ್ಲಿ ಮ್ಯಾಸಬೇಡರ ವಸತಿ, ಸಮಾಜ, ಸಂಪ್ರದಾಯಗಳ ಸಂಕ್ಷಿಪ್ತ ಚಿತ್ರ ದೊರೆಯುತ್ತದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ನೇತೃತ್ವದಲ್ಲಿ ೧೯೯೩ರಲ್ಲಿ ಉಪಸಂಸ್ಕೃತಿಗಳ ಅಧ್ಯಯನ ಎಂಬ ಪುಸ್ತಕ ಮಾಲೆಯಲ್ಲಿ ಬುಡಕಟ್ಟು ಸಂಸ್ಕೃತಿಗಳನ್ನು ಅಧ್ಯಯನ ಮಾಡಲಾಯಿತು. ಈ ಸರಣಿಯಲ್ಲಿ ಕೃಷ್ಣಮೂರ್ತಿ ಹನೂರು ಅವರು ''ಮ್ಯಾಸ ಬೇಡರ ಸಂಸ್ಕೃತಿ'' ಎಂಬ ಕೃತಿಯನ್ನು ರಚಿಸಿದ್ದಾರೆ. ಇದು ಚಿತ್ರದುರ್ಗ ಜಿಲ್ಲೆಯನ್ನೇ ಕೇಂದ್ರವನ್ನಾಗಿಟ್ಟುಕೊಂಡು ಮಾಡಿದ ಅಧ್ಯಯನ. ಇದುವರೆಗಿನ ಬೇಡರ ಕುರಿತು ಬಂದ ಕೃತಿಗಳಿಗಿಂತ ವಿವರಣಾತ್ಮಕ ಮಾಹಿತಿಯನ್ನು ಇದು ಒಳಗೊಂಡಿದೆ. ಮ್ಯಾಸ ಎಂಬ ಪದದ ನಿಷ್ಪತ್ತಿ, ಜನಾಂಗದ ಹಿನ್ನೆಲೆ, ಜೀವನ ವಿಧಾನ, ಆಚರಣೆ, ಸಂಸ್ಕಾರ, ಕಲೆ, ಸಾಹಿತ್ಯ, ಪ್ರದರ್ಶನ ಕಲೆ ಇತ್ಯಾದಿ ಹೆಚ್ಚುವರಿ ವಿಷಯಗಳನ್ನು ಹೊಂದಿದೆ. ಅನುಬಂಧದಲ್ಲಿ ಕಿಲಾರಿ, ದೇವರತ್ತು, ಬೇಡ ಕರಣರ ಕತೆ, ಬೇಡರು ಆಚರಿಸುವ ಹಬ್ಬ ಜಾತ್ರೆಗಳನ್ನು ಪರಿಚಯಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೯೯೫ರಲ್ಲಿ ಪ್ರಕಟಿತವಾದ ಇನ್ನೊಂದು ಗ್ರಂಥ ರುದ್ರಪ್ಪ, ಕೆ. ಅವರ 'ವ್ಯಾಸನಾಯಕರ ಒಂದು ಜನಾಂಗಿಕ ಅಧ್ಯಯನ' ವು ಹೆಚ್ಚಿನ ವಿವರಣೆಯನ್ನು ಹೊಂದಿದೆ. ಇದು ವ್ಯಾಸನಾಯಕರ ಕೌಟುಂಬಿಕ, ಸಾಮಾಜಿಕ ಜೀವನ, ಕಥೆ, ಹಾಡು, ಲಾವಣಿ, ನಾಯಕ ಜನಾಂಗಕ್ಕೆ ಸಂಬಂಧಿಸಿದ ಪೌರಾಣಿಕ, ಐತಿಹಾಸಿ, ಧಾರ್ಮಿಕ ಪುರುಷರ ವಿಷಯಗಳನ್ನು ಒಳಗೊಂಡಿದೆ. ಈ ಅಧ್ಯಯನವು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕು, ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರಿನ ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ವಾಸವಾಗಿರುವ ವ್ಯಾಸರ ಸಂಸ್ಕೃತಿಯ ಅಧ್ಯಯನವಾಗಿದೆ.

ಇಷ್ಟೇ ಅಲ್ಲದೇ ಅನೇಕ ಪುಸ್ತಕಗಳಲ್ಲಿ ಹಾಗೂ ಲೇಖನಗಳಲ್ಲಿ ಬೇಡರ ಕುರಿತು ಪರೋಕ್ಷ ಮಾಹಿತಿ ದೊರೆಯುತ್ತದೆ. 'ಪೆರಿಯ ಪುರಾಣ' ದಲ್ಲಿ ಕಾಳಹಸ್ತಿಯ ಕಾಡಿನಲ್ಲಿ ವಾಸವಾಗಿದ್ದ ಬೇಡರ ವಿವರಣೆ ಇದೆ. ಬೇಟೆಗಾರನಾದ ಬೇಡರ ಕಣ್ಣಪ್ಪನು ಶಿವಭಕ್ತನಾದ ಕಥೆ ಇಲ್ಲಿ ದೊರೆಯುತ್ತದೆ. ೧೯೨೪ರಲ್ಲಿ ಎಂ. ಎಸ್. ಪುಟ್ಟಣ್ಣನವರ ಪಾಳೆಯಗಾರರ ಚರಿತ್ರೆಯಲ್ಲಿ ಬೇಡರ ಆಳ್ವಿಕೆಯ ವಿವರಣೆಯಿದೆ. ಇವರ 'ಗುಮ್ಮ ನಾಯಕನಹಳ್ಳಿ ಪಾಳೆಯಗಾರ' ಎಂಬ ಕೃತಿಯಿಂದ ವಿಜಯನಗರ ಸೈನ್ಯಕ್ಕೆ ಬೇಡ ಸೈನಿಕರು ಬಂದ ಉಲ್ಲೇಖ ದೊರೆಯುತ್ತದೆ. ಮತ್ತು 'ಚಿತ್ರದುರ್ಗದ ಪಾಳೆಯಗಾರರು' ಎಂಬ ಗ್ರಂಥದಲ್ಲಿ ಬೇಡರು ಹಂಪೆಯ ಮೂಲಕ ಚಿತ್ರದುರ್ಗಕ್ಕೆ ಬಂದ ಕಥೆ ದೊರೆಯುತ್ತದೆ. ಕಪಟರಾಳ ಕೃಷ್ಣರಾವ್ ಅವರ 'ಸುರಪುರ ಸಂಸ್ಥಾನದ ಇತಿಹಾಸ' ದಲ್ಲಿ ಅರಸರು ದಕ್ಷಿಣದಿಂದ ಬಂದ ಕತೆಯನ್ನು ಕೊಟ್ಟಿದ್ದಾರೆ.

ವೆಂಕಟರತ್ನಮ್ಮ, ಎ.ವಿ. ಅವರ 'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ' ಎಂಬ ಗ್ರಂಥದಲ್ಲಿ ವಿಜಯನಗರದ ಆಳ್ವಿಕೆಯ ಸಮಯದಲ್ಲಿ ಬೇಡರ ಸ್ಥಳೀಯ ಆಡಳಿತದ ದಾಖಲೆ ದೊರೆಯುತ್ತದೆ. ಹಾಗೂ ಫ್ಲೀಟ್ ರವರು ಸಂಗ್ರಹಿಸಿದ ಐದು ಲಾವಣಿಗಳಲ್ಲಿ 'ಹಲಗಲಿ ಬೇಡರ' ಲಾವಣಿಯು ಇವರ ಸಾಹಸ, ಧೈರ್ಯ ಮುಂತಾದವುಗಳನ್ನು ಪರಿಚಯಿಸುತ್ತವೆ. ಚಿತ್ರಲಿಂಗಯ್ಯ, ಎಂ.ವಿ. ಅವರ ಲೇಖನಗಳು ನಾಯಕ ಜನಾಂಗದ, ಅವರ ಬೆಡಗಿನ, ಅವರ ಸಪ್ತಮಾತೃಕೆ ಮತ್ತು ಪೋತರಾಜನ ಆರಾಧನೆ ಇತ್ಯಾದಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಇವರ 'ವಾಲ್ಮೀಕಿ ಸಂದೇಶ' ಎಂಬ ಮಾಸ ಪತ್ರಿಕೆಯಲ್ಲಿ ಪ್ರಕಟಿತವಾದ 'ನಾಯಕನ ಹಟ್ಟಿ ಬಖೈರು - ಕೆಲವು ಟಿಪ್ಪಣಿಗಳು' ಬಹು ಮುಖ್ಯವಾದ ಆಧಾರ ಗ್ರಂಥವಾಗಿದೆ. ಹಾಗೆಯೇ ಲಕ್ಷ್ಮಣ್ ತೆಲಗಾವಿಯವರ ಚಂದ್ರವಳ್ಳಿ ಮತ್ತು ಇತಿಹಾಸ ದರ್ಶನಗಳಲ್ಲಿ

ಪ್ರಕಟಿತವಾದ ಚಿತ್ರದುರ್ಗದ ಪಾಳೆಯಗಾರರಿಗೆ ಸಂಬಂಧಿಸಿದ ಲೇಖನಗಳು ಈ ಜನಾಂಗದ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ. ಜತೆಗೆ ಸರ್ಕಾರ ಮೀಸಲಾತಿ ಸೌಲಭ್ಯಕ್ಕೆ ಹೊರತಂದ ಹಾವನೂರು, ವೆಂಕಟಸ್ವಾಮಿ ವರದಿ ಮತ್ತು ಚಿನ್ನಪ್ಪರೆಡ್ಡಿ ಆಯೋಗದ ವರದಿಗಳು, ಗ್ಯಾಝೆಟಿಯರ್‌ಗಳು, ಜನಸಂಖ್ಯಾ ವರದಿಗಳು ಹಾಗೂ ಅಖಿಲ ಕರ್ನಾಟಕ ನಾಯಕ ಸಂಘವು ಹೊರತಂದ ಹೊತ್ತಿಗೆಗಳು ಬೇಡರ ಜನಸಂಖ್ಯೆ, ಅವರ ಆರ್ಥಿಕ ಮಟ್ಟ, ಸಾಮಾಜಿಕ ಸ್ಥಾನಮಾನ, ಅವರು ಪಡೆಯುತ್ತಿರುವ ಸೌಲಭ್ಯ ಇತ್ಯಾದಿಗಳ ವಿವರಣೆಗಳನ್ನು ನೀಡಿವೆ. ಇವುಗಳ ಸಹಾಯದಿಂದ ಸಮಕಾಲೀನ ಇತಿಹಾಸವನ್ನು ಅಧ್ಯಯನ ಮಾಡಬಹುದಾಗಿದೆ.

ಇಷ್ಟೆಲ್ಲ ಅಧ್ಯಯನಗಳು ನಡೆದಿದ್ದರೂ ಆಳವಾದ ಅಧ್ಯಯನದ ಅವಶ್ಯಕತೆ ಇದೆ. ಒಂದೇ ಪಂಗಡದ ಉಪಪಂಗಡಗಳನ್ನು ಒಟ್ಟಾಗಿ ಅಥವಾ ಪ್ರತ್ಯೇಕವಾಗಿ ಅಧ್ಯಯನಗಳನ್ನು ಮಾಡಲಾಗಿದೆ. ಆದರೆ ಇವೆರಡರ ಅಂದರೆ ಊರನಾಯಕರ ಮತ್ತು ಮ್ಯಾಸನಾಯಕರ ನಡುವಿನ ವೈವಿಧ್ಯತೆ, ವೈಶಿಷ್ಟ್ಯತೆ, ಸಾಮ್ಯತೆಗಳನ್ನು ತೌಲನಿಕವಾಗಿ ಯಾರೂ ಅಧ್ಯಯನ ಕೈಗೊಂಡಿಲ್ಲ. ಇವರ ಸಂಸ್ಕೃತಿಯನ್ನು ಜನಪದ ಸಾಹಿತ್ಯ, ಕಲೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ್ದಾರೆ. ಆದರೆ ಭೌತಿಕ ಸಂಸ್ಕೃತಿಯ ಅದರಲ್ಲಿಯೂ ಅವರ ಮನೆಗಳನ್ನು ಕೇಂದ್ರವಾಗಿಟ್ಟುಕೊಂಡು ಅಧ್ಯಯನ ನಡೆಸಿಲ್ಲ. ವಾಸ್ತುಶಿಲ್ಪದ ಅಧ್ಯಯನಗಳಲ್ಲಿಯೂ ಸಹ ಅಲೌಕಿಕ ಹಾಗೂ ರಾಜರ ಶ್ರೀಮಂತರ ಕಟ್ಟಡಗಳನ್ನು ಅಭ್ಯಾಸಿಸಿದ್ದಾರೆ. ಜನಸಾಮಾನ್ಯರ ಮನೆಗಳ ಮೂಲಕ ಸಮಾಜ, ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಬೆರಳೆಣಿಕೆಯಷ್ಟು ಮಾತ್ರ. ಇಂಥ ಪ್ರಯತ್ನಗಳಲ್ಲಿ ಈ ಪ್ರಬಂಧವು ಒಂದು.

೧.೩ ಜನಾಂಗದ ಹಿನ್ನೆಲೆ

'ಬೇಡ' ಎಂಬ ಪದವು 'ವ್ಯಾಧ' ಎಂಬ ಸಂಸ್ಕೃತ ಪದದ ಸಮನಾರ್ಥವಾಗಿದೆ. ಬೇಡ ಅಥವಾ ವ್ಯಾಧ ಎಂದರೆ ಬೇಟೆಗಾರ ಎಂದು ಅರ್ಥ. ಕರ್ನಾಟಕದಲ್ಲಿ ನಾಯಕ ಎಂಬ ಪದಕ್ಕೆ ೧೭ ಪರ್ಯಾಯವಾದ ಪದಗಳಿವೆ ಅವುಗಳಲ್ಲಿ ಬೇಡ, ಬೇಡರ, ತಳವಾರ, ಕಿರಾತಕ, ಶಬರ, ಪುಳಿಂದ, ವಾಲ್ಮೀಕಿ, ವಾಲ್ಮೀಕಿ ಮಕ್ಕಳು, ಬಾರ್ ಕಿ, ವೇದನ, ಕನ್ನಯ್ಯ ಕುಲ, ಪಾಳೆಯಗಾರರು ಮುಂತಾದವುಗಳು. ಈ ಹೆಸರುಗಳಿಗೆ ಸಂಬಂಧಿಸಿದಂತೆ ಒಂದೊಂದು ಕತೆಗಳಿವೆ (ಅನುಬಂಧ - ೨). ಥಂಗ, ಡಿ.ಬಿ. ಅವರ 'ಜನಾಂಗ ಪರಿಚಯ' (೧೯೮೮. ಪು. ೧-೭)ದಲ್ಲಿ ಇವರಿಗೆ ಸಂಬಂಧಿಸಿದ ಕತೆಗಳನ್ನು ಕೊಟ್ಟಿದ್ದಾರೆ.

'ಬೇಡರ' ಎಂಬುದು ಉರ್ದು ಪದ. ''೧೬೭೦ರಲ್ಲಿ ಆದಿಲ್ ಶಾಹಿಯ ಬಳಿ ಬೇಡರು ತಮ್ಮ ಅಲ್ಪ ಪ್ರಮಾಣದ ಸೈನ್ಯದಿಂದ ಮೊಗಲ್ ಸೈನ್ಯವನ್ನು ಧೈರ್ಯದಿಂದ, ಸಾಹಸದಿಂದ ಎದುರಿಸಿದ್ದನ್ನು ಕಂಡು ಔರಂಗಜೇಬನು 'ಏಕಿಸಿಸೆ ನಹಿ ಡರನೇ ವಾಲೆ ಲೋಗ್ ''ಬೇಡರ'' ಲೋಗ್' ಎಂದು ನುಡಿದನು (ಅದೇ. ೧೯೮೮, ಪು. ೧). ಆದಕಾರಣ ಉರ್ದುವಿನಲ್ಲಿ 'ಬೇಡರ' ಎಂದೇ ಇವರನ್ನು ಕರೆಯುತ್ತಾರೆ.

ರಾಮಾಯಣವನ್ನು ರಚಿಸಿದ ಆದಿಕವಿ ವಾಲ್ಮೀಕಿಯು ಬೇಡರವನೇ ಆದ್ದರಿಂದ ಇವರು ತಮ್ಮನ್ನು 'ವಾಲ್ಮೀಕಿ' ಅಥವಾ 'ವಾಲ್ಮೀಕಿ ಮಕ್ಕಳು' ಎಂದು ಕರೆದುಕೊಳ್ಳುತ್ತಾರೆ. ಅಂತೆಯೇ ೬೩ ಶಿವ ಭಕ್ತರಲ್ಲಿ ಒಬ್ಬನಾದ ಬೇಡರ ಕಣ್ಣಪ್ಪನನ್ನು ತಮ್ಮ ಜಾತಿಯವನೇ ಎಂದು ಅವನ ಹೆಸರನ್ನೇ ತಮ್ಮ ಕುಲಕ್ಕಿಟ್ಟುಕೊಂಡು 'ಕನ್ನಯ್ಯ ಮಕ್ಕಳು' ಎಂದು ಕರೆದುಕೊಳ್ಳುತ್ತಾರೆ.

ಸದಾಸುಸಜ್ಜಿತ ಸೈನ್ಯವನ್ನು ಹೊಂದಿ ದಂಡಿನೊಡನೆ ಪಾಳವನ್ನು ಹಾಕಿ ಇಳಿದು ಕೊಂಡು ಕದನಕ್ಕೆ ಸಿದ್ಧವಾಗಿರ ತಕ್ಕವರಿಗೆ ಪಾಳೆಯಗಾರರೆಂದು (ಪುಟ್ಟಣ್ಣ, ಎಂ. ಎಸ್., ೧೯೨೪, ಪು.೧) ಕರೆಯುತ್ತಾರೆ. ಪಾಳೆಯಗಾರರಲ್ಲಿ ಬೇಡರ ಸಂಖ್ಯೆ ಹೆಚ್ಚಾಗಿರುವ ಕಾರಣ ಇವರು ತಮ್ಮನ್ನು 'ಪಾಳೆಯಗಾರರು' ಎಂದು ಕರೆದುಕೊಂಡಿರ ಬೇಕು. ವಿಜಯನಗರ ಸಾಮ್ರಾಜ್ಯಕ್ಕಿಂತ ಹಿಂದೆಯೇ

ಪಾಳೆಯಗಾರರ ಮನೆತನಗಳಿದ್ದರೂ ಈ ಕಾಲದಲ್ಲಿಯೇ ಇವರು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡರು. ರಕ್ಕಸ - ತಂಗಡಿ ಕದನದ ನಂತರ ಸ್ವತಂತ್ರವಾಗಿ ಪಾಳೆಯಪಟ್ಟುಗಳಲ್ಲಿ ಆಳ್ವಿಕೆ ನಡೆಸಿದರು. ಬ್ರಿಟಿಷರ ಆಗಮನದಿಂದ ಇವರ ಅಧಿಕಾರ ಮೊಟಕಾಯಿತು.

'ನಾಯಕ' ಎಂಬ ಪದವನ್ನು ಕುರಿತು ಚಿತ್ರಲಿಂಗಯ್ಯ, ಎಂ.ವಿ. ಅವರು ವಿವರಣಾತ್ಮಕವಾದ ಮಾಹಿತಿ ಒದಗಿಸಿದ್ದಾರೆ (ಇತಿಹಾಸ ಚಂದ್ರಿಕೆ, ಪು. ೮) 'ನಾಯಕಾಚಾರ್ಯ', 'ಶ್ರೀಮನ್ಮಹಾನಾಯಕಾಚಾರ್ಯ', 'ನಾಯಕ ಶಿರೋಮಣಿ', 'ನಾಯಕ ನಾರಾಯಣ', 'ನಾಯಕ ಶಿಖಾಮಣಿ', 'ನಾಯಕಮಣಿ' ಮುಂತಾದ ಬಿರುದುಗಳನ್ನು ಪಡೆದುಕೊಂಡಿದ್ದ ಬೇಡ ಜನಾಂಗದ ಪಾಳೆಯಗಾರರು ತಮ್ಮನ್ನು 'ನಾಯಕ' ಜಾತಿಯವರು ಎಂದು ಅರ್ಥ ಬರುವಂತೆ ಕರೆದುಕೊಂಡಿದ್ದಾರೆ. ಕ್ರಿ. ಶ. ೯ನೆಯ ಶತಮಾನದಲ್ಲಿ ಮೊಟ್ಟ ಮೊದಲು ಕಾಣಿಸಿಕೊಳ್ಳುವ 'ನಾಯಕ' ಎಂಬ ಪದ ಜಾತಿಸೂಚಕವಲ್ಲ, ಗೌರವ ಸೂಚಕ ಅಥವಾ ಅಧಿಕಾರ ಸೂಚಕ ಪದ. ನಂತರ ಕನ್ನಡನಾಡಿನ ಚರಿತ್ರೆಯಲ್ಲಿ ಬೇಡರ ನಿರಂತರ ಪ್ರಸಿದ್ಧಿಯಿಂದಾಗಿ ಅವರ ಪಾಲಿಗೆ 'ನಾಯಕ' ಪದವು ಜಾತಿಸೂಚಕ (ಅದೇ, ಪು.೮) ಶಬ್ದವಾಗಿದೆ. 'ನಾಯಕ' ಎಂಬ ಉಪನಾಮವು ಬೇಡರ ಹೆಸರಿನ ಕೊನೆಯಲ್ಲಿ ಬರುವುದಕ್ಕಿಂತ ಪೂರ್ವದಲ್ಲಿ 'ಬೋವ/ಬೋಯ/ಬೋಯಿ' ಎಂಬ ಉಪನಾಮಗಳು ಬಳಕೆಯಲ್ಲಿದ್ದುವು (ಅದೇ, ಪು. ೧-೨). ತೆಲುಗಿನಲ್ಲಿ ಇಂದಿಗೂ ಬೇಡರನ್ನು 'ಬಾಯೊಡ/ಬಾಯೊಳ್ಳು' ಎಂದು ಕರೆಯುತ್ತಾರೆ.

ಮಹಾಕಾವ್ಯಗಳಲ್ಲಿ ಮತ್ತು ಪುರಾಣಗಳಲ್ಲಿ ವಾಲ್ಮೀಕಿ, ಬೇಡರ ಕಣ್ಣಪ್ಪ, ಶಬರ, ಶಬರಿ, ಏಕಲವ್ಯ, ಕಿರಾತ, ಧರ್ಮವ್ಯಾಧ, ಮೂಗನಾಯಕ ಇವರೆಲ್ಲ ಬೇಡ ಜನಾಂಗಕ್ಕೆ ಸೇರಿದವರು ಎಂದು ಹೇಳುವ ಕಥೆಗಳು ದೊರೆಯುತ್ತವೆ. ಕರ್ನಾಟಕದ ಇತಿಹಾಸದ ಉದ್ದಕ್ಕೂ ಬೇಡರ ಧೈರ್ಯ, ಸಾಹಸದ ವರ್ಣನೆ ಕಂಡು ಬರುತ್ತದೆ. Buchannan ಅವರು ತಮ್ಮ ಕೃತಿಯಲ್ಲಿ ಬನವಾಸಿಯ ಕದಂಬರು ಬೇಡರ ಜಾತಿಗೆ ಸೇರಿದವರು ಎಂದು ಅಭಿಪ್ರಾಯ ಪಟ್ಟಿದ್ದಾರೆ (ಉದ್ಧೃತ: ಅನಂತಕೃಷ್ಣ, ಎಲ್.ಕೆ., ೧೯೮೮, ಪು. ೨೦೦).

ಅರಣ್ಯದಲ್ಲಿ ತಮ್ಮದೇ ಆದ ಸ್ವತಂತ್ರ ಗಣರಾಜ್ಯಗಳನ್ನು ಕಟ್ಟಿಕೊಂಡು ಆಳ್ವಿಕೆ ನಡೆಸುತ್ತಿದ್ದ ಬೇಡರು ಯುದ್ಧಕಾಲದಲ್ಲಿ ಮಾತ್ರ ರಾಜರಿಗೆ ಸೈನಿಕ ಸಹಾಯವನ್ನು ನೀಡುತ್ತಿದ್ದ ಉಲ್ಲೇಖ ದೊರೆಯುತ್ತದೆ. ಕರ್ನಾಟಕ ಚರಿತ್ರೆಯಲ್ಲಿ 'ಕರ್ನಾಟಕ ಸೈನ್ಯ' ಎಂದು ಕರೆಸಿಕೊಳ್ಳುತ್ತಿದ್ದ ಸೈನ್ಯದಲ್ಲಿ ಬೇಡರೇ ಹೆಚ್ಚು ಸಂಖ್ಯೆಯಲ್ಲಿದ್ದರು.

ವಿಜಯನಗರ ಸಾಮ್ರಾಜ್ಯ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದ ಕಂಪಿಲರಾಯ ಮತ್ತು ಕುಮಾರರಾಮ ಬೇಡರ ಜಾತಿಯವರು. ಪಾಂಚಾಳಗಂಗನ ಚೆನ್ನರಾಮನ ಸಾಂಗತ್ಯದಲ್ಲಿ ಇವರು ಬೇಡರೇ ಎಂಬುದು ಸ್ಪಷ್ಟವಾಗುತ್ತದೆ. ಕುಮಾರರಾಮನ ತಾತನಾದ ಪೂವಾಲಿ ಕುಲದ ಮುಮ್ಮಡಿ ಸಿಂಗನು ಒಬ್ಬ ಶಬರ ನಾಯಕನೆಂದೂ ಹೇಳಿದೆ (ವರದರಾಜರಾವ್, ಜಿ., ೧೯೭೭, ಪು. ೯೫, i, ೧೩-೧೮). ಕುಮಾರ ರಾಮನ ತಾಯಿ ಹರಿಯಲದೇವಿಯು ಗುಜ್ಜಲ ವಂಶದ ರಾಜಕುಮಾರಿ ಎಂದು ಹೇಳಲಾಗಿದೆ. ಊರ ನಾಯಕರಲ್ಲಿ ಇಂದಿಗೂ ಗುಜ್ಜಲರು ಎಂಬ ಬೆಡಗಿದೆ ಮತ್ತು ಮ್ಯಾಸನಾಯಕರಲ್ಲಿಯೂ ಪೂವ್ವಲರು ಎಂಬ ಬೆಡಗು ಇದೆ.

ವಿಜಯನಗರ ಕಾಲದಲ್ಲಿ ಬೇಡರು ಸೈನಿಕ ವ್ಯವಸ್ಥೆಯಲ್ಲಿ ಬಹು ಮುಖ್ಯ ಪಾತ್ರ ನಿರ್ವಹಿಸಿದ್ದರು. ವಿಜಯನಗರದ ದೊರೆಗಳು ತಮ್ಮ ಸೈನ್ಯದಲ್ಲಿ ಹೆಚ್ಚಾಗಿ ಬೇಡರನ್ನೇ ನೇಮಿಸಿಕೊಳ್ಳುತ್ತಿದ್ದರು. ಆಯಕಟ್ಟಿನ ಸ್ಥಳಗಳಲ್ಲಿ ಪಾಳೆಯಗಾರರನ್ನಾಗಿ ನೇಮಿಸಿ ಪಾಳಯ ಪಟ್ಟುಗಳನ್ನು ನೀಡಿ ಅವರಿಂದ ವರ್ಷಕ್ಕೆ ಇಂತಿಷ್ಟು ಎಂದು ಹಣವನ್ನು ಅಥವಾ ಸೈನಿಕ ಸಹಾಯವನ್ನು ಪಡೆದುಕೊಳ್ಳುತ್ತಿದ್ದರು. ವಿಜಯನಗರದ ಅವನತಿಯ ನಂತರ ಜರಿಮಲೆ ದುರ್ಗ, ಗುಡೇಕೋಟೆ, ಹರಪನಹಳ್ಳಿ, ಚಿತ್ರದುರ್ಗದ ಪಾಳೆಯಗಾರರು ತಮ್ಮ ಸ್ವತಂತ್ರವನ್ನು ಘೋಷಿಸಿಕೊಂಡರು.

ಹೈದರ ಮತ್ತು ಟಿಪ್ಪುಸುಲ್ತಾನರು ಸಹ ತಮ್ಮ ಸೈನ್ಯದಲ್ಲಿ ಬೇಡರನ್ನು ನೇಮಿಸಿ ಕೊಂಡಿದ್ದರು. 'ಕಪ್ಪಲ ದುರ್ಗದ ಉತ್ತರದ ಗುಡ್ಡಗಾಡಿನಲ್ಲಿ ಸಾಗುವಳಿಯಾದ ಅನೇಕ ಹೊಲಗಳಿವೆ. ಟಿಪ್ಪು ಸುಲ್ತಾನು ತನ್ನ ಆಳ್ವಿಕೆಯ ಕಾಲದಲ್ಲಿ ಬೇಡರನ್ನು ಈ ಹೊಲಗಳಲ್ಲಿ ನೆಲೆಗೊಳಿಸಿದ್ದ ಅವರಿಗೆ ಹನ್ನೆರಡು ಪಗೋಡಾ ಸಂಬಳವನ್ನು ಕೊಡುತ್ತಿದ್ದ. ಬೇಕಾದಾಗ ಈ ಬೇಡರನ್ನು ತನ್ನ ಸೈನ್ಯದಲ್ಲಿ ಯುದ್ಧಕ್ಕಾಗಿ ಸೇರಿಸಿಕೊಳ್ಳುತ್ತಿದ್ದ. ಇವರು ಸುಸಜ್ಜಿತವಾದ ಫೌಜಿನಲ್ಲಿ ಸೇರುತ್ತಿದ್ದರು' (ಕಪಟರಾಳ ಕೃಷ್ಣರಾವ್,

೧೯೭೭, ಪು. ೨೩೬). ಇವರ ಸೈನ್ಯದ ಸಹಾಯದಿಂದಲೇ ಬೇಡ ಜಾತಿಯ ಪಾಳೆಯಗಾರರನ್ನು ಸೋಲಿಸುತ್ತಿದ್ದ ದಾಖಲೆಗಳಿವೆ. ಹೈದರ ಮತ್ತು ಟಿಪ್ಪು ಬಹಳ ಬುದ್ಧಿವಂತಿಕೆಯಿಂದ ಬೇಡರನ್ನು ಬೇಡರ ವಿರುದ್ಧವೇ ಎತ್ತಿಕಟ್ಟುತ್ತಿದ್ದರು. ಇದೇ ಕಾಲದಲ್ಲಿ ಬೇಡರು ದರೋಡೆ, ಕೊಳ್ಳೆಗಳನ್ನು ಹೊಡೆಯುತ್ತಿದ್ದ ವಿವರಣೆ ದೊರೆಯುತ್ತದೆ.

ಮದರಾಸು ಸರ್ಕಾರದ ಕಂದಾಯ ಸಂಗ್ರಹಣ ಮುಖ್ಯಾಧಿಕಾರಿಯಾಗಿದ್ದ ಥಾಮಸ ಮನ್ರೋ ಕ್ರಿ.ಶ. ೧೮೦೦ರಲ್ಲಿ ಒಟ್ಟು ಎಂಬತ್ತು ಮಂದಿ ಪಾಳೆಯಗಾರರ ಯಾದಿಯನ್ನು ಸಿದ್ಧಪಡಿಸಿದ್ದನು. (ಉದ್ಧೃತ : ಲಕ್ಷ್ಮಣ್ ತೆಲಗಾವಿ. ೧೯೮೮, ಪು. ೨೩೨). ಶಸ್ತ್ರಾಸ್ತ್ರಗಳನ್ನು ಹೊಂದಿರುವ ಜನಗಳಿಂದ ಮುಂದೆ ತಮಗೆ ಅಪಾಯ ಉಂಟಾಗ ಬಹುದು ಎಂಬ ಭಯದಿಂದ ಬ್ರಿಟಿಷ ಸರ್ಕಾರ ೧೮೫೭ರಲ್ಲಿ ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದಾಗ ಮೊಟ್ಟಮೊದಲು ಬೇಡರಿಂದ ವಿರೋಧವನ್ನು ಎದುರಿಸ ಬೇಕಾಯಿತು. ಹಲಗಲಿಯ ಬೇಡರ ಹೋರಾಟವನ್ನು ಲಾವಣಿಕಾರರು ತುಂಬ ಸೊಗಸಾಗಿ ಚಿತ್ರಿಸಿದ್ದಾರೆ (ಕ್ಯಾತನ ಹಳ್ಳಿ ರಾಮಣ್ಣ (ಸಂ.), ೧೯೭೨, ಪು. ೫೯). ಅಲ್ಲದೇ ಪಾಳೆಯಗಾರರು ಸರ್ಕಾರದ ನಿಯಂತ್ರಣಕ್ಕೆ ಒಳಪಡಲಿಲ್ಲವೆಂದು, ಇವರ ಪಾಳೆಗಳನ್ನು ಕಸಿದುಕೊಳ್ಳಲಾಯಿತು. ಅಂದಿನಿಂದ ಇವರು ಬೇಸಾಯದಲ್ಲಿ ತೊಡಗಿದರು (ಕಪಟರಾಳ ಕೃಷ್ಣರಾವ್, ೧೯೭೭, ಪು. ೨೩೬).

ಕ್ರಿ. ಶ. ೧೮ ನೆಯ ಶತಮಾನದಿಂದೀಚೆಗೆ ಪಾಳೆಯ ಪಟ್ಟುಗಳನ್ನು ಕಳೆದು ಕೊಂಡು, ಸೈನಿಕವೃತ್ತಿಯೂ ಇಲ್ಲದಂತಾಗಿ ಅರಣ್ಯವು ನಾಶವಾಗಿ ಸರ್ಕಾರದ ಅರಣ್ಯನೀತಿಯಿಂದ ಬೇಟೆಯ ವೃತ್ತಿಯನ್ನು ಕೈ ಬಿಟ್ಟು ವ್ಯವಸಾಯದಲ್ಲಿ, ಸರ್ಕಾರಿ ನೌಕರಿಯಲ್ಲಿ ತೊಡಗಿಕೊಂಡಿದ್ದಾರೆ. ಇಂದು ವ್ಯವಸಾಯವೇ ಜೀವನಾಧಾರವಾಗಿದೆ. ಕ್ರಿ.ಶ. ೧೯೭೬ (The Scheduled Caste and Scheduled Tribesorders (Amendment) Act. 1976)ರಲ್ಲಿ ಪರಿಶಿಷ್ಟ ಬುಡಕಟ್ಟಿಗೆ ಸೇರಿದ ನಾಯಕ ಜನಾಂಗವು ಇಂದು ಸರ್ಕಾರದ ವಿಶೇಷ ಮೀಸಲಾತಿ ಸೌಲಭ್ಯವನ್ನು ಪಡೆದುಕೊಳ್ಳುತ್ತಿದೆ.

೧.೩.೧ ಬೇಡರ ಉಪಪಂಗಡಗಳು

ಬೇಡರಲ್ಲಿ ಹಲವು ಉಪಪಂಗಡಗಳಿವೆ. ಅವುಗಳಲ್ಲಿ ಮುಖ್ಯವಾದವುಗಳು ೧. ಊರನಾಯಕರು (ಚಿನ್ನಬೋಯಿ), ೨. ಮ್ಯಾಸ ಬೇಡ (ಪೆದ್ದ ಬೋಯಿ), ೩. ಗುಡ್ಲ ಬೇಡ (ಗುಡಿಸಲು ಬೇಡ), ೪. ಮತ್ಯಲಮ್ಮ ಅಥವಾ ಉರಮಿ ಬೇಡ ಮತ್ತು ಸದರ ಬೇಡ, ೫. ಹಾಲು ಬೇಡ ಮತ್ತು ೬. ಮೊಂಡ ಬೇಡ ಎಂಬ ಪ್ರಮುಖ ಉಪಪಂಗಡಗಳನ್ನು ಕಾಣಬಹುದು. (ಅನಂತಕೃಷ್ಣ, ಎಲ್.ಕೆ., ೧೯೮೮, ಪು. ೨೦೫). ಒಂದೇ ಕುಲಕ್ಕೆ ಅಥವಾ ಪಂಗಡಕ್ಕೆ ಸೇರಿದ್ದರೂ ಈ ಉಪಪಂಗಡಗಳ ನಡುವೆ ವೈವಾಹಿಕ ಸಂಬಂಧಕ್ಕೆ ಅವಕಾಶವಿಲ್ಲ. ಅಲ್ಲದೇ ಉಪಪಂಗಡಗಳಲ್ಲಿಯೇ ಅನೇಕ ಬೆಡಗುಗಳಿವೆ. ಸ್ವಬೆಡಗಿನಲ್ಲಿ ವೈವಾಹಿಕ ಸಂಬಂಧವಿಲ್ಲ. ಒಂದೇ ಬೆಡಗಿನವರು ಅಣ್ಣತಮ್ಮಂದಿರಾಗುವರು. ಮ್ಯಾಸಬೇಡರಲ್ಲಿ ಮಂದಲರು ಮತ್ತು ಮಲ್ಲನಾಯಕರು ಎಂದು ಎರಡು ಪ್ರಮುಖ ವಿಭಾಗಗಳಿವೆ. ಇವು ತಮ್ಮನ್ನು ಚಂದ್ರವಂಶ ಮತ್ತು ಸೂರ್ಯವಂಶಗಳಿಗೆ ಸೇರಿದವರು ಎಂದು ಕರೆದುಕೊಳ್ಳುತ್ತಾರೆ. ಮಂದಲರ ಗುಂಪಿನವರಿಗೆ ಮಲ್ಲನಾಯಕನ ಗುಂಪಿನ ಬೆಡಗಿನವರು ಬೀಗರಾಗುತ್ತಾರೆ. ಮಂದಲರ ಗುಂಪಿನ ಅಥವಾ ಮಲ್ಲನಾಯಕನ ಗುಂಪಿನಲ್ಲಿಯೇ ಬರುವ ಬೆಡಗುಗಳ ಅಣ್ಣತಮ್ಮಂದಿರಾಗುತ್ತಾರೆ. ಇವೆರಡು ಗುಂಪುಗಳಲ್ಲಿಯೂ ಸಂಬಂಧ ಬೆಳಸಿಕೊಂಡ ಬೆಡಗುಗಳೂ ಇವೆ. (ಅನುಬಂಧ-೧)

೧.೩.೨ ಊರ ಬೇಡರು ಮತ್ತು ಮ್ಯಾಸಬೇಡರು

ಹೊಸಪೇಟೆ ತಾಲ್ಲೂಕಿನಲ್ಲಿ ಊರನಾಯಕರು ಮತ್ತು ಮ್ಯಾಸನಾಯಕರು ಪ್ರಮುಖವಾಗಿ ಕಂಡು ಬರುವ ಉಪಪಂಗಡಗಳು. ಒಂದೇ ಕುಲದ ಈ ಎರಡು ಉಪಪಂಗಡಗಳ ಸಮಾಜ, ಸಂಸ್ಕೃತಿಯಲ್ಲಿ ವೈವಿಧ್ಯತೆ, ಸಾಮ್ಯತೆ ಮತ್ತು ವ್ಯತ್ಯಾಸಗಳು ಕಂಡು ಬರುತ್ತವೆ. ಇವರಲ್ಲಿರುವ ಬೆಡಗುಗಳು ಹೆಚ್ಚಿನ ಹೋಲಿಕೆಯನ್ನು ಗಮನಿಸಿದಾಗ ಹಿಂದೆ ಇವೆರಡು ಉಪಪಂಗಡಗಳು ಸೇರಿದ್ದು ನಂತರದಲ್ಲಿ ಬೇರ್ಪಟ್ಟವು ಎಂಬುದು ತಿಳಿಯುತ್ತದೆ. ಬೇಡರ ಎರಡು ಉಪಪಂಗಡವನ್ನು ಕುರಿತು ಥರ್ಸ್ಟನ್ ಅವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. ತೆಲುಗು ಮತ್ತು ಕನ್ನಡ ಮಾತನಾಡುವ ಬೇಡರಲ್ಲಿ ಊರ(or Village men) ಮತ್ತು ಮ್ಯಾಸ (or grass land men) ಬೇಡರು ಇದ್ದಾರೆ. ಇವರಲ್ಲಿಯೇ ಮತ್ತೆ ಕುಲದ (ಸ್ವಗೋತ್ರವಲ್ಲದ)

ಹೊರಗೆ ಮದುವೆಯಾಗುವ ಅನೇಕ ಬೆಡಗುಗಳಿವೆ. ಪ್ರತಿಯೊಂದು ಬೆಡಗುಗಳು ತಮ್ಮದೇ ಆದ ದೇವರುಗಳನ್ನು ಹೊಂದಿವೆ. ಬೋಯ ಮತ್ತು ಬೇಡರಲ್ಲಿ ಬೆಡಗುಗಳು ಒಂದೇ ರೀತಿಯ ಹೆಸರುಗಳನ್ನು ಹೊಂದಿವೆ. ಹಾಗೂ ಊರ ಮತ್ತು ಮ್ಯಾಸ ಬೇಡರಲ್ಲಿಯೂ ಬೆಡಗುಗಳ ಹೆಸರಿನಲ್ಲಿ ಹೋಲಿಕೆ ಇದೆ. ಇದರಿಂದ ಇವು ಒಂದು ಕಾಲದಲ್ಲಿ ಒಂದೇ ಪಂಗಡಕ್ಕೆ ಸೇರಿದ್ದು ನಂತರ ಬೇರ್ಪಟ್ಟವು ಎಂಬುದು ಸ್ಪಷ್ಟವಾಗುತ್ತದೆ. (೧೯೮೭, ಪು. ೧೮೪). ನಗರ ಸಂಸ್ಕೃತಿಯಲ್ಲಿ ಬೆರೆತು ಹೋದ ಊರ ಬೇಡರಿಗೂ, ಅಡವಿಯಲ್ಲಿಯೇ ವಾಸವಾಗಿದ್ದ ಮ್ಯಾಸ ಬೇಡರಿಗೂ ಸಂಸ್ಕೃತಿಯಲ್ಲಿ ವ್ಯತ್ಯಾಸವಿರುವುದು ಸಹಜ..

ಊರಬೇಡ ಮತ್ತು ಮ್ಯಾಸಬೇಡರು ಬೇರ್ಪಟ್ಟ ಕುರಿತು ಹಲವು ಕಥೆಗಳಿವೆ. ಬಹು ಹಿಂದೆ ಒಬ್ಬ ತಾಯಿಗೆ ಇಬ್ಬರು ಗಂಡು ಮಕ್ಕಳಿದ್ದರಂತೆ. ಹಿರಿಯ ಮಗ ಹೊಲದಲ್ಲಿ ಕೆಲಸ ಮಾಡುತ್ತಿದ್ದ, ಕಿರಿಯಮಗ ಮನೆಗೆ ಊಟಕ್ಕೆ ಬಂದ. ಊಟ ನೀಡುವಾಗ ತಾಯಿಯು ಬೇಧ ಭಾವ ತೋರಿ ತನಗೆ ಮಾಂಸದ ತುಂಡನ್ನು ನೀಡದೆ ಅಣ್ಣನಿಗೆ ತೆಗೆದಿಟ್ಟಿದ್ದಾಳೆ ಎಂಬ ಅನುಮಾನ ಬಂದು ಕೋಪದಿಂದ ತಾಯಿಯನ್ನು ಹೊಡೆದು ಕೊಂದು ನಂತರ ಮನೆಯಲ್ಲಿ ಹುಡುಕಾಡಿದಾಗ ಮಾಂಸದ ತುಂಡು ಸಿಗದೆ ತನ್ನ ಪಾಪ ಕೃತ್ಯಕ್ಕಾಗಿ ಪಶ್ಚಾತ್ತಾಪ ಗೊಂಡು ಕಾಡಿಗೆ ಹೋದನಂತೆ. ಕಾಡಿಗೆ ಹೋದವನೇ ಮ್ಯಾಸ ಬೇಡ ಎಂಬ ಕಥೆ ಇದೆ (Thurston.E., 1900, Vol. I, p. 187).

ಇನ್ನೊಂದು ಕಥೆಯಲ್ಲಿ ಶ್ರೀಶೈಲದ ಕಡೆಯಿಂದ ಕರ್ನಾಟಕಕ್ಕೆ ಪಶುಗಳನ್ನು ಮೇಯಿಸಿಕೊಂಡು ಬರುವಾಗ ಹಿಂದೆ ಒಬ್ಬ ಮುಂದೆ ಒಬ್ಬ ಇದ್ದರಂತೆ. ಹಿಂದಿನವ ಆಕಳ ಕರುವಿನಕಾಲನು ಮುರಿದು ತಿನ್ನಲಾರಂಭಿಸಿದನಂತೆ ಆಗ ಮುಂದಿನವ ''ನೀನು ಗೋಮಾಂಸ ತಿಂದೆ ನೀನು ಬ್ಯಾಡ'' ಎಂದು ಹೇಳಿ ಅವನನ್ನು ಬಿಟ್ಟು ಮುಂದೆ ಬಂದನಂತೆ, ಅವನೇ ಕಾಡುಗೊಲ್ಲ, ಹಿಂದೆ ಉಳಿದವ 'ಮ್ಯಾಸಬೇಡ' ಆದನಂತೆ. ಇನ್ನು ಕೆಲವರು ಕಾಡಿನಲ್ಲಿಯೇ ಉಳಿದ ಮ್ಯಾಸ ಬೇಡ, ಊರಿಗೆ ಬಂದವ ಊರಬೇಡನಾದ ಎಂದು ಹೇಳುತ್ತಾರೆ (ಈಶ್ವರಪ್ಪ, ಎಂ. ಜಿ., ೧೯೮೩, ಪು. ೬-೮). ಇಂದಿಗೂ ಊರಬೇಡ ದನದಮಾಂಸ ತಿನ್ನುವುದಿಲ್ಲ, ಮ್ಯಾಸಬೇಡರು ದನದ ಮಾಂಸತಿನ್ನುತ್ತಾರೆ ಎಂಬ ಹೇಳಿಕೆ ಗಮನಾರ್ಹವಾಗಿದೆ.

''ಇನ್ನೊಂದು ದಾಖಲೆಯ ಪ್ರಕಾರ ಮಂಡಲ ಗೋತ್ರದ ಕನಕದಾಸ ತಿರುಮಕೂಡಲ ವ್ಯಾಸರಾಯ ಸ್ವಾಮಿಗಳ ಇಷ್ಟದ ಶಿಷ್ಯನಾಗಿದ್ದನಂತೆ. 'ವ್ಯಾಸರಾಯ ಸಂಸೇವಿತಾಃ' ಎಂದು ಹೇಳಿಕೊಂಡಿದ್ದರಿಂದ ಅವನ ವಂಶಜರು ಮ್ಯಾಸ ಬೇಡರಾದರಂತೆ'' (ಅದೇ. ಪು. ೮).

ವಾಲ್ಮೀಕಿಯು ಒಮ್ಮೆ ಬೇಟೆಗೆ ಹೋಗಿದ್ದಾಗ ಕಾಡಿನಲ್ಲಿ ಸುಂದರವಾದ ಬೇಡತಿಯನ್ನು ಮೋಹಿಸಿದನಂತೆ. ಈ ಬೇಡತಿಗೆ ಅಡವಿಯಲ್ಲಿ ಹುಟ್ಟಿದ ಮಕ್ಕಳು ಮ್ಯಾಸರಂತೆ. ಊರಿನಲ್ಲಿ ವಾಲ್ಮೀಕಿ ಹೆಂಡತಿಗೆ ಹುಟ್ಟಿದ ಮಕ್ಕಳು ಊರನಾಯಕರಂತೆ ಮ್ಯಾಸ ಬೇಡರಲ್ಲಿ ಇಂದಿಗೂ ಅನೇಕ ಜನ ಈ ಕಥೆ ಹೇಳುತ್ತಾರೆ (ಒಂದೇ ತಂದೆಗೆ ಹೆಂಡತಿಯಲ್ಲಿ ಹುಟ್ಟಿದವರು ಊರ ಬೇಡರು, ಸೂಳೆಗೆ ಹುಟ್ಟಿದವರು ಮ್ಯಾಸಬೇಡರು). ಊರಿನ ಸಂಸ್ಕೃತಿಯ ಪ್ರಭಾವದಲ್ಲಿ ಬೆಳೆದ ಊರನಾಯಕರು ಹೆಂಡ ಕುಡಿಯುವುದು, ಕೋಳಿ ತಿನ್ನುವುದು, ಈಚಲ ಚಾಪೆ ಇತ್ಯಾದಿಗಳನ್ನು ಬಳಸುವುದು ಮುಂತಾದ ಚಟಗಳಿಗೆ ಬಲಿಯಾದರು. ಅಡವಿಯಲ್ಲಿ ವಾಸವಾಗಿದ್ದ ಮ್ಯಾಸರು ಹೆಂಡ ಕುಡಿಯುವುದಿಲ್ಲ, ಕೋಳಿ ತಿನ್ನುವುದಿಲ್ಲ, ಸಾಕುವುದೂ ಇಲ್ಲ, ಈಚಲನ್ನು ಬಳಸುವುದಿಲ್ಲ. ಮ್ಯಾಸರಲ್ಲಿ ಹಿಂದೆ ಕೋಳಿ ಕೂಗುವ ಹಳ್ಳಿಯಲ್ಲಿ ವಾಸ ಮಾಡಬಾರದು ಎಂಬ ನಂಬಿಕೆ ಇತ್ತು. ಇದು ಇವರ ವಲಸೆ ಪ್ರವೃತ್ತಿಯನ್ನು ತಿಳಿಸುತ್ತದೆ. ಕೃಷಿಕರಂತೆ ಒಂದು ನೆಲೆಯಲ್ಲಿ ನೆಲಸದೆ ತಮ್ಮ ಪಶುಗಳನ್ನು ಮೇಯಿಸಿಕೊಂಡು ಪ್ರದೇಶದಿಂದ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದುದು ಅಲೆಮಾರಿ ಜೀವನವನ್ನು ಸೂಚಿಸುತ್ತದೆ.

ಮ್ಯಾಸ ಬೇಡ ಎಂಬ ಪದವು ಪರಾಕ್ರಮಿಗಳು ಎಂಬ ಹಿನ್ನೆಲೆಯಿಂದ ಬಂದಿರಬೇಕು ಎಂಬ ವಾದವಿದೆ. ಕಂಪಿಲದ ಕುಮಾರರಾಮನ ಬಾಲ್ಯವನ್ನು ವರ್ಣಿಸುವಾಗ ನಂಜುಂಡಕವಿಯು 'ಮೀಸರ ಗಂಡ' ಎಂದು ಕರೆದಿದ್ದಾನೆ. 'ಮೀಸರು' ಎಂಬ ಪದ ಪರಾಕ್ರಮಿ ಎಂದು ಅರ್ಥಬರುವುದಾದರೆ ಮೀಸಬೇಡರು ಎಂದರೆ ಪರಾಕ್ರಮಿ ಬೇಡರು ಎಂದು, ಕೇಸರ > ಕ್ಯಾಸರ, ಬೇಸ > ಬ್ಯಾಸರ ಆದಂತೆ ಮೀಸರ > ಮ್ಯಾಸರು ಆಗಿದ್ದಿರಬಹುದು (ಕೃಷ್ಣಮೂರ್ತಿ ಹನೂರು, ೧೯೯೩, ಪು. ೪೨-೪೩).

ಹಿಂದೆ ಬೇಡರಲ್ಲಿ ಕೆಲವರು ನಗರದಲ್ಲಿ ಬಂದು ವಾಸವಾದ ಬಗ್ಗೆ ಧರ್ಮವ್ಯಾಧನ ಕಥೆಯಲ್ಲಿ ವಿವರಣೆಯಿದೆ. ದ್ವಾಪರಯುಗದಲ್ಲಿ ಕೌಶಿಕ ಮುನಿಯು ಧರ್ಮವ್ಯಾಧನ ಬಳಿಬಂದಾಗ ಇವನು ತನ್ನ ಕಾಯಕದ ಕುರಿತು ವಿವರಿಸುತ್ತಾನೆ - ''ಎಲೆ ಮುನಿವರ್ಯನೇ ಕೇಳು, ಬೇಡರ ಜಾತಿಗೆ ಸೇರಿದ ನಮ್ಮ ಸಂತತಿಯವರು ಕಾಡಿನಲ್ಲೇ ಹುಟ್ಟಿ, ಕಾಡಿನಲ್ಲೇ ಬೆಳೆದು, ಕಾಡಿನಲ್ಲೇ ಹೆಚ್ಚಾಗಿ ವಾಸಿಸುತ್ತಿರುವವರು. ಅವರಲ್ಲೂ ಸ್ವಲ್ಪ ಭಾಗದ ಜನರು ಪಟ್ಟಣಗಳಲ್ಲಿ ವಾಸಿಸಲು ಅನುವಾದರು ಅಂಥವರಲ್ಲಿ ನಾನೊಬ್ಬ ಹಿಂದಿನಿಂದಲೂ ಬೇಡರ ಕಸಬು ಬೇಟೆಯಾಡುವುದ್ದಾರಿಂದ, ನಾನೂ ನಾಗರಿಕ ಜೀವನದಲ್ಲಿದ್ದರೂ ನನ್ನ ಪೂರ್ವಿಕರ ಪದ್ಧತಿಯಂತೆಯೇ ಪ್ರಾಣಿಗಳನ್ನು ಕೊಯ್ದು ಅವುಗಳ ಮಾಂಸವನ್ನು ಮಾರಾಟ ಮಾಡಿ ಅದರಲ್ಲಿ ಉಳಿದ ಸ್ವಲ್ಪ ಭಾಗದ ಹಣದಿಂದಲೇ ನನ್ನ ಸಂಸಾರವನ್ನು ಸಲಹುತ್ತಿರುವೆನು. ...'' (ರಾಜಣ್ಣ, ಆರ್., ೧೯೮೨, ಪು. ೪೦-೪೧). ಕಥೆಯನ್ನು ಗಮನಿಸಿದಾಗ ಬೇಡರು ಊರಿಗೆ ಬಂದು ನೆಲೆಸಿದ ಬಗ್ಗೆ, ಅವರ ಕಾಯಕದ ಬಗ್ಗೆ ತಿಳಿಯುತ್ತದೆ. ಇಂಥ ಹಲವು ಗುಂಪುಗಳೇ ಮುಂದೆ ಹಿಂದೂ ಸಂಸ್ಕೃತಿಯ ಚೌಕಟ್ಟಿನಲ್ಲಿ ಸೇರಿಕೊಂಡು ಊರ ನಾಯಕರಾದರು ಎಂದು ಹೇಳಬಹುದು.

೧.೪ ಜನಾಂಗದ ವಲಸೆ

ದೇಶದ ವಿಭಜನೆ, ಭೌಗೋಳಿಕವಾಗಿ ನೆರೆ-ಬರ ಬಂದಾಗ, ಒಂದು ಸ್ಥಳದಲ್ಲಿ ವಾಸಿಸಲು ಅಸಾಧ್ಯ ಎಂದು ಕಂಡುಬಂದಾಗ ಅಥವಾ ಇನ್ನೊಂದು ಪ್ರದೇಶದಲ್ಲಿ ಉನ್ನತ ಮಟ್ಟದ ಜೀವನವನ್ನು ನಿರ್ವಹಿಸ ಬಹುದು ಎನಿಸಿದಾಗ ಮಾನವ ವಲಸೆ ಹೋಗುವುದು ಸಹಜ. ವಲಸೆಗೆ ಹಲವು ಪ್ರೇರಣೆಗಳಿವೆ. ಇತಿಹಾಸದ ಉದ್ದಕ್ಕೂ ಇಂಥ ವಲಸೆಗಳು ನಡೆದಿವೆ. ಮಾನವನು ಹುಟ್ಟಿನಿಂದಲೂ ಅವಶ್ಯಕ ವಸ್ತುಗಳಿಗಾಗಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಬಂದಿದ್ದಾನೆ. ವ್ಯಕ್ತಿ, ಕುಟುಂಬ ಅಥವಾ ಸಮುದಾಯ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆ ಹೋದರೆ ತನ್ನ ಹಿಂದಿನ ಜೀವನದಿಂದ ಹೊಸ ಜೀವನಕ್ಕೆ, ಪರಿಸರಕ್ಕೆ, ಸಾಮಾಜಿಕ ಪರಿಸ್ಥಿತಿಗೆ ಹೊಂದಿಕೊಳ್ಳಬೇಕು. ಇಂಥ ಸಂದರ್ಭದಲ್ಲಿ ಮಾನವ ಹೊಸದನ್ನು ಸಂಪೂರ್ಣ ಒಪ್ಪಿಕೊಳ್ಳುವುದಿಲ್ಲ ತಾನು ಬೆಳೆದುಬಂದ ಪರಿಸರವನ್ನು ಸ್ವಲ್ಪಮಟ್ಟಿಗೆ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಇಂದು ಹಲವು ಬುಡಕಟ್ಟುಗಳು ಅರಣ್ಯವಾಸದಿಂದ ಗ್ರಾಮ, ನಗರ ವಾಸಿಗಳಾಗಿದ್ದರೂ ತಮ್ಮ ಮೂಲದ ಕೆಲವು ವೈಶಿಷ್ಟ್ಯಗಳನ್ನು ಉಳಿಸಿಬೆಳಸಿಕೊಂಡು ಬಂದಿದ್ದಾರೆ. ವಲಸೆ ಕೇವಲ ಬುಡಕಟ್ಟುಗಳಲ್ಲಿ ಮಾತ್ರವಲ್ಲ ಎಲ್ಲಾ ಸಮುದಾಯಗಳಲ್ಲಿಯೂ ಈ ಪ್ರವೃತ್ತಿ ಕಂಡು ಬರುತ್ತದೆ. ಜೀವನದ ಅವಶ್ಯಕತೆಯ ಪೂರೈಕೆ, ಉನ್ನತಮಟ್ಟದ ಆಸೆಗಳ ಪೂರೈಕೆ ಮುಂತಾದ ಕಾರಣಗಳಿಗಾಗಿ ಇಂದಿಗೂ ಮಾನವ ವಲಸೆ ಕೈಗೊಳ್ಳುತ್ತಿದ್ದಾನೆ. ಆದರೆ ವಲಸೆಯು ಸ್ವರೂಪಗಳಲ್ಲಿ ಮಾರ್ಪಾಡಾಗಿದೆ.

ಬೇಡ ಜನಾಂಗವು ಬೇಟೆ ಮತ್ತು ಪಶುಪಾಲನೆಯ ವೃತ್ತಿಯಲ್ಲಿ ತೊಡಗಿ ಕೊಂಡಿದ್ದರಿಂದ ಇವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಆಹಾರ, ನೀರಿಗಾಗಿ ವಲಸೆ ಹೋಗುವುದು ಅವಶ್ಯಕವಾಗಿತ್ತು. ಅರಣ್ಯನಾಶ, ಅರಣ್ಯ ನೀತಿ, ಕೈಗಾರಿಕ ನೀತಿಯ ಕಾರಣವಾಗಿ ಮತ್ತು ವೃತ್ತಿಯ ಬದಲಾವಣೆಯುಂದಾಗಿ ಬೇಡರು ಇಂದು ಅರಣ್ಯವನ್ನು ತ್ಯಜಿಸಿ ಗ್ರಾಮ ಮತ್ತು ನಗರಗಳಿಗೆ ವಲಸೆ ಬಂದಿದ್ದಾರೆ. ಈ ಸಮುದಾಯದ ವಲಸೆಯು ಇತ್ತೀಚಿನದಲ್ಲ ತುಂಬ ಹಿಂದೆಯೇ ಇವರಲ್ಲಿ ವಲಸೆಯು ಪ್ರಕ್ರಿಯೆ ನಡೆದಿದೆ. ವಲಸೆಯ ಕಾರಣವಾಗಿಯೇ ಇವರಲ್ಲಿ ಎರಡು ಪ್ರಮುಖ ಉಪಪಂಗಡಗಳು ಸೃಷ್ಟಿಯಾಗಿವೆ. ಬಹು ಹಿಂದೆಯೇ ಅರಣ್ಯದಿಂದ ಊರಿನ ಕಡೆ ಬಂದು ಬೇಡರು ಹಿಂದೂ ಧರ್ಮದ

ಜಾತಿವ್ಯವಸ್ಥೆಯಲ್ಲಿ ಸೇರಿಕೊಂಡು ಸ್ಥಳೀಯ ದೇವರುಗಳನ್ನು ಆರಾಧಿಸುತ್ತಾ ಊರಿನವರಾಗಿ ಪರಿವರ್ತಿತರಾದವರೇ ಊರು ಬೇಡರು. ಅರಣ್ಯದಲ್ಲಿ ವಾಸವಾಗಿ ಕಾಲಕ್ರಮೇಣ ಹಳ್ಳಿ, ನಗರಗಳಿಗೆ ವಲಸೆ ಬಂದ ಮ್ಯಾಸ ಬೇಡರು ಇಂದಿಗೂ ಬುಡಕಟ್ಟಿನ ಹಲವು ಲಕ್ಷಣಗಳನ್ನು ಉಳಿಸಿ ಬೆಳಸಿಕೊಂಡು ಬಂದಿದ್ದಾರೆ./

ಹಲವಾರು ವಲಸೆಗಾರ ದ್ರಾವಿಡ ಮೂಲಕ್ಕೆ ಸೇರಿದ ಬೇಡ ಪಂಗಡವು ಆಂಧ್ರ, ಕರ್ನಾಟಕ, ತಮಿಳುನಾಡು (ದಖ್ಖನ್ ಪ್ರಸ್ಥಭೂಮಿ) ಗಳ ಗುಡ್ಡಗಾಡು, ಅರಣ್ಯ ಪ್ರದೇಶದಲ್ಲಿ ವಾಸವಾಗಿದ್ದರು. ಹೊಸಪೇಟೆ ತಾಲ್ಲೂಕಿನಲ್ಲಿಯೂ ಬೇಡರು ಕಾಡಿನ ಅಂಚಿನಲ್ಲಿ ಅಥವಾ ಗುಡ್ಡಗಾಡು ಪ್ರದೇಶದಲ್ಲಿ ಅಲ್ಲದೇ ನದಿ, ಕೆರೆಗಳ ಸಮೀಪ ವಾಸವಾಗಿರುವುದು ಕಂಡು ಬರುತ್ತದೆ. ಈ ತಾಲ್ಲೂಕಿನಲ್ಲಿ ಕನ್ನಡ ಮತ್ತು ತೆಲುಗು ಮಾತನಾಡುವ ಎರಡು ಪ್ರಮುಖ ಉಪಪಂಗಡಗಳಾದ ಊರಬೇಡರು ಮತ್ತು ಮ್ಯಾಸಬೇಡರು ನೆಲೆಸಿದ್ದಾರೆ. ತಾಲ್ಲೂಕಿನಲ್ಲಿ ಮ್ಯಾಸಬೇಡರಿಗಿಂತ ಊರಬೇಡರ ಸಂಖ್ಯೆ ಅಧಿಕವಾಗಿದೆ.

ಬೇಡರ ವಲಸೆಯನ್ನು ನಿರ್ದಿಷ್ಟ ಕಾಲಘಟ್ಟದಲ್ಲಿ ನಿರ್ಣಯಿಸಲು ಸಾಧ್ಯವಿಲ್ಲ. ಕಾಡಿನಿಂದ ನಗರದ ಕಡೆಗೆ ವಲಸೆ ಬರುವ ಪ್ರವೃತ್ತಿಯು ಮೊದಲಿನಿಂದಲೂ ನಡೆದುಬಂದಿದೆ. ಇವರ ಮೌಖಿಕ ಸಾಹಿತ್ಯದಲ್ಲಿ ಜನಾಂಗದ ಮತ್ತು ದೇವರ ವಲಸೆಯನ್ನು ತಿಳಿಸಿದರೂ ನಿರ್ದಿಷ್ಟಕಾಲ ತಿಳಿದುಬಂದಿಲ್ಲ. ಬೇಡರ ನಾಯಕ ಶಿವಭಕ್ತ ಕಣ್ಣಪ್ಪನ ಕಥೆಯಲ್ಲಿ ಇವರು ದಕ್ಷಿಣಕ್ಕೆ ಬಂದವರೆಂದು ತಿಳಿದು ಬರುತ್ತದೆ. ''ದಕ್ಷಿಣ ಭಾರತದ ದಂಡಕಾರಣ್ಯದಲ್ಲಿ ಬಂದು ನೆಲೆಸಿದ ಬೇಡರ ಪಾಳೆಗಳಲ್ಲೊಂದು, ಕಾಳಹಸ್ತಿ ಪರ್ವತದ ತಪ್ಪಲಿನಲ್ಲಿ ಹರಿಯುವ ಸ್ವರ್ಣಮುಖಿ ನದಿ ದಡದಲ್ಲಿ ವಾಸ ಮಾಡುತ್ತಿತ್ತು. ಇವರು ಬೇಟೆಯಾಡಿ ಪ್ರಾಣಿಗಳ ಮಾಂಸವನ್ನು ಸುಟ್ಟು ತಿನ್ನುತ್ತಿದ್ದುದರ ಜೊತೆಗೆ ಬಿದಿರನಕ್ಕಿ.... '' (ರಾಜಣ್ಣ, ಆರ್., ೧೯೮೨, ಪು. ೫೦). ಇವರು ಕಾಳಹಸ್ತಿಗೆ ಯಾವಪ್ರದೇಶದಿಂದ, ಯಾವ ಮಾರ್ಗದ ಮೂಲಕ ಬಂದು ನೆಲೆಸಿದರು ಎಂಬ ಮಾಹಿತಿ ತಿಳಿದುಬರುವುದಿಲ್ಲ. ಧರ್ಮವ್ಯಾಧನ ಕಥೆಯಲ್ಲಿಯೂ ಬೇಡರು ಅರಣ್ಯದಿಂದ ನಗರಕ್ಕೆ ವಲಸೆ ಬಂದ ವಿವರಣೆ ಇದೆ. ನಗರಕ್ಕೆ ವಲಸೆ ಬಂದ ಜನರಲ್ಲಿ ತಾನೂ ಒಬ್ಬ ಎಂದು ಧರ್ಮವ್ಯಾಧ ಹೇಳಿಕೊಳ್ಳುತ್ತಾನೆ.

ಪೌರಾಣಿಕ ಕಥೆಗಳಲ್ಲದೆ ಕೆಲವು ಐತಿಹಾಸಿಕ ದಾಖಲೆಗಳಲ್ಲಿ ಸಹ ಇವರ ವಲಸೆಯನ್ನು ಉಲ್ಲೇಖಿಸಲಾಗಿದೆ. ವಿಜಯನಗರ ಸಾಮ್ರಾಜ್ಯದಲ್ಲಿ ಬೇಡರಿಗೆ ರಾಜಕೀಯ ಮತ್ತು ಸೈನಿಕ ಮಾನ್ಯತೆ ದೊರೆತ ಕಾರಣ ಇವರು ವಿಜಯನಗರಕ್ಕೆ ವಲಸೆ ಬಂದರು. ಮತ್ತು ವಿಜಯನಗರದ ನಂತರ ಈ ಪ್ರದೇಶದಲ್ಲಿ ಕೇಂದ್ರೀಕೃತವಾಗಿದ್ದ ಈ ಸಮುದಾಯದ ಜನರು ಸಾಮ್ರಾಜ್ಯದ ವಿವಿಧ ಪ್ರದೇಶಗಳಿಗೆ ವಲಸೆ ಹೋದರು. ಮುಸ್ಲಿಂ ದಾಳಿಯ ಕಾರಣ ಆಂಧ್ರದಿಂದ ಕರ್ನಾಟಕಕ್ಕೆ ಬಂದ ಬೇಡರು ಮುಸ್ಲಿಂ ಆಳ್ವಿಕೆಯ ವಿರುದ್ಧ ವಿಜಯನಗರದ ಅರಸರಿಗೆ ಸೈನಿಕ ಸಹಾಯ ನೀಡಿದರು ಎಂದರೆ ತಪ್ಪಾಗಲಾರದು. ರಕ್ಕಸ - ತಂಗಡಿ ಯುದ್ಧದ ನಂತರ ಪಾಳೆಯಗಾರರು ಸ್ವತಂತ್ರರಾದರು. ಈ ಪಾಳೆಯಗಾರರ ದಾಖಲೆಗಳನ್ನು ಗಮನಿಸಿದರೆ ಅವರ ಮೂಲ ನಿವಾಸದ ವಿವರಗಳ ದೊರೆಯುತ್ತದೆ.

ಊರನಾಯಕರ ವಲಸೆಯ ಕಾಲ ಅಥವಾ ಅವರ ಮೂಲ ಸ್ಥಳ ಇತ್ಯಾದಿಗಳನ್ನು ತಿಳಿದುಕೊಳ್ಳುವುದು ಕಷ್ಟ. ಇವರು ಆಂಧ್ರ, ಕರ್ನಾಟಕಗಳಲ್ಲಿ ವಾಸವಾಗಿದ್ದು ಆಂಧ್ರದಲ್ಲಿ ತೆಲುಗು ಕರ್ನಾಟಕದಲ್ಲಿ ಕನ್ನಡ ಮಾತನಾಡುತ್ತಾರೆ. ಮ್ಯಾಸನಾಯಕರ ಭಾಷೆ ಮನೆ ದೇವರ ಆಧಾರದಿಂದ ಇವರು ಆಂಧ್ರದ ಶ್ರೀಶೈಲ, ಕದರಿ, ತಿರುಪತಿಗಳಿಂದ ವಲಸೆ ಬಂದವರು ಎಂದು ತಿಳಿದು ಬರುತ್ತದೆ. ಹೀಗೆ ವಲಸೆ ಬಂದ ಗುಂಪುಗಳಲ್ಲಿ ಶೈವ ಮತ್ತು ವೈಷ್ಣವ ಸಂಪ್ರದಾಯದವರು ಇದ್ದಾರೆ. ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಬಖೈರಿನಲ್ಲಿ ಶ್ರೀಶೈಲದಿಂದ ಬಂದ ನಾಯಕರ ವಿವರಗಳ ಹೀಗಿದೆ. ''. . . . ಗುರು ಗುಹೇಶ್ವರನ ಬೆಟ್ಟಕ್ಕೆ ಪೂರ್ವಭಾಗಯೊಳ್ ಜಂಬ್ಯೇಜನ್ನಿಗೆ ಹಳ್ಳನಿಯವಗಳ್ ಮಧ್ಯದಲ್ಲೂಯೀ ಕಂಪಳಕ್ಕೆ ಹಟ್ಟಿಯಿಟ್ಟುಕೊಂಡು ಹನ್ನೆರಡು ಪೆಟ್ಟಿಗೆಯ ದೇವರುಗಳು ಸಹ ಇದ್ದರು . . . .'' (ಕೃಷ್ಣಮೂರ್ತಿ ಹನೂರು, ೧೯೯೩, ಪು. ೩೫). ಬಖೈರಿನ ಪ್ರಕಾರ ಆಂಧ್ರದ ಶ್ರೀಶೈಲದಿಂದ ಬಂದ ಒಂದು ತಂಡ ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲ್ಲೂಕಿನ ಬಿಳಿಯ ಜನಿಗೇನ ಹಳ್ಳಿಯಲ್ಲಿ ನೆಲೆಸಿತ್ತು ಈ ಗುಂಪಿನ ಯಜಮಾನ ಕಾಟಮಲ್ಲಪ್ಪನಾಯಕ. ಈ ವಲಸೆ ಸುಮಾರು ಕ್ರಿ.ಶ. ೫೦೦ ರಲ್ಲಿ ನಡೆದಿರಬೇಕು.

ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು ವಿಜಯನಗರಕ್ಕಿಂತ ಪೂರ್ವದಲ್ಲಿಯೇ ಪಾಳೆಪಟ್ಟನ್ನು ಹೊಂದಿ ಆಳ್ವಿಕೆ ನಡೆಸುತ್ತಿದ್ದರು. ವಿಜಯನಗರದ ಅರಸರು ಅನೇಕ ಪ್ರದೇಶಗಳನ್ನು

ವಶಪಡಿಸಿಕೊಂಡಾಗ ಗುಮ್ಮನಾಯಕ ಪಾಳ್ಯವು ಈ ಸಾಮ್ರಾಜ್ಯಕ್ಕೆ ಸೇರಿಕೊಂಡಿತು. ಯುದ್ಧದಲ್ಲಿ ಸೋತಪಾಳೆಯಗಾರರು ವಿಜಯನಗರದ ಅರಸರೊಂದಿಗೆ ಒಪ್ಪಂದ ಮಾಡಿಕೊಂಡು ವರ್ಷಕ್ಕೆ ಇಂತಿಷ್ಟು ಹಣ ನೀಡುವುದಾಗಿ ಹಾಗೂ ವಿಜಯನಗರಕ್ಕೆ ಇನ್ನೂರು ಮಂದಿಯನ್ನು ಅರಸರ ಚಾಕರಿಗೆ ಕಳಿಸಿ ಕೊಡುವುದಾಗಿ ಒಪ್ಪಿಕೊಂಡರು. ಇಂಥ ಒಪ್ಪಂದ ಹೈದರ್ ಟಿಪ್ಪುವಿನ ಆಕ್ರಮಣದವರೆಗೂ ಮುಂದುವರೆಯಿತು. ನಂತರ ಗುಮ್ಮನಾಯಕ ಪಾಳ್ಯ ಮೈಸೂರು ಅರಸರ ಆಳ್ವಿಕೆಗೆ ಸೇರಿಕೊಂಡಿತು. ಸೈನಿಕರಾಗಿ, ಸೇವಕರಾಗಿ ಹಿಂದೂಪುರ ಮತ್ತು ಕದರಿ ತಾಲ್ಲೂಕಿನಿಂದ ಬಂದ ಬೇಡರು ಕರ್ನಾಟಕದಲ್ಲಿಯೇ ನಿಂತರು ಎಂಬುದರಲ್ಲಿ ಅನುಮಾನವಿಲ್ಲ.

೧೮೭೯ರಲ್ಲಿ ಷೇರಿಂಗ್, ಎಂ.ಎ. ರವರು ಬರೆದಿರುವ ಹಿಂದೂ ಗಿರಿಜನರು ಜಾತಿಗಳು ಎಂಬ ಕೃತಿಯಲ್ಲಿ ಬೇಡರು ಪಂಜಾಬಿನ ಗಿರಿಶಿಖರಗಳಿಂದ ಬಂದವರೆಂದು, ಇವರಿಗೆ ''ಭಿಲ್ಲರು''ನಾಯಕರು ಮತ್ತು ''ಬೇರಾರ್'' ಎಂದು ಕರೆಯುತ್ತಿದ್ದರೆಂದು ಮಧ್ಯಪ್ರದೇಶದಲ್ಲಿರುವ ನಾಯಕರು ಬೊಂಬಾಯಿ, ಸಿಂಧೂದೇಶ, ಗುಜರಾತ್, ಮಹಾರಾಷ್ಟ್ರಗಳಲ್ಲಿರುವ ಬೇಡರು, ಕಾಮೋಶಿಗಳು ಹಾಗೂ ಡೆಕ್ಕನ್ ಭೂಮಿ ಮತ್ತು ಉತ್ತರ ಇಂಡಿಯದಲ್ಲಿರುವ ''ಬಾಲ್ ಮೀಕಿ'' ನಾಯಕರು ಒಂದೇ ಎಂದು ಕರೆದಿದ್ದಾರೆ (ಅಖಿಲ ಭಾರತ ನಾಯಕರ ಕಲ್ಯಾಣ ಸಂಘ, ಪು. ೨).

ಚಿತ್ರದುರ್ಗದ ಪಾಳೆಯಗಾರರು ತಾವು ಉತ್ತರದ ದೆಹಲಿಯಿಂದ ಬಂದವರೆಂದು ಹೇಳಿಕೊಳ್ಳುತ್ತಾರೆ. ''ಉತ್ತರ ದೇಶದಲ್ಲಿ ಜಡಕಲ್ಲುದುರ್ಗದಿಂದ ದಿಳ್ಳೀನಾಡ ತಳವಾರರಾದ ವಾಲ್ಮೀಕಿ ಗೋತ್ರದವರೆಂದು ಹೇಳಲ್ಪಡುವ ಕಾಮಗೇತಿ ವಂಶದ ಸಬ್ಬಗದಿ ಓಬನಾಯಕ, ಜಡವಿನಾಯಕ, ಬುಳ್ಳನಾಯಕ ಈ ಮೂವರು ಅಣ್ಣ ತಮ್ಮಂದಿರು ಉತ್ತರ ದೇಶದ ಅವಾಂತರದಿಂದ ತಮ್ಮ ಮನೆ ದೇವರು ಅಹೋಬಲ ನರಸಿಂಹ ಮೂರ್ತಿಯ ಪೆಟ್ಟಿಗೆ, ತುರು, ಕುರಿ, ಕಿಲ್ಲಾರಿ, ಮುಂತಾದ ಕಂಪಳವನ್ನು ತೆರಳಿಸಿಕೊಂಡು ದಕ್ಷಿಣದೇಶಕ್ಕೆ ಬಂದರು'' (ಪುಟ್ಟಣ್ಣ, ಎಂ. ಎಸ್., ೧೯೨೨, ಪು. ೪). ಇವರು ದಾರಿಯಲ್ಲಿ ಹಂಪೆಯ ವಿರೂಪಾಕ್ಷೇಶ್ವರನ ದರ್ಶನ ಮಾಡಿಕೊಂಡು ಮುಂದುವರೆದು ಬಿಳಿಚೋಡಿನಲ್ಲಿ ನೆಲೆಸಿದರು. ವಾಸ್ತವದಲ್ಲಿ ಇವರು ದೆಹಲಿಯಿಂದ ಬಂದವರಲ್ಲ. ಆಂಧ್ರದಿಂದ ಮುಸ್ಲಿಂರ ದಾಳಿಯನ್ನು ಸಹಿಸದೆ

ಕರ್ನಾಟಕಕ್ಕೆ ಬಂದವರು. ಇವರು ಬಂದ ಜಡಕಲ್ಲುದುರ್ಗ, ಕರಮಲೆ ಮತ್ತು ರಾಮದುರ್ಗಗಳು ಕರ್ನೂಲು ಜಿಲ್ಲೆಯಲ್ಲಿವೆ ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇವರ ಮೂಲ ಮನೆಯದೇವರಾದ ಅಹೋಬಲ ನರಸಿಂಹ ದೇವರ ನೆಲೆ ಕರ್ನೂಲು ಜಿಲ್ಲೆಯ ಅಲ್ಲಗಡ್ಡ ತಾಲ್ಲೂಕಿನಲ್ಲಿರುವ ನವನರಸಿಂಹ ಕ್ಷೇತ್ರವೇ ಆಗಿದೆ (ಲಕ್ಷ್ಮಣ್ ತೆಲಗಾವಿ, ೧೯೮೮, ಪು. ೨).

ಸುರಪುರದ ಅರಸ ಕಲ್ಲಪ್ಪನಾಯಕನು ನಾರಂಗ ಕೊಳದಿಂದ ತುಂಬಳಕ್ಕೆ ಬಂದು ತುಂಬಳದಿಂದ ಕಂಪಿಲಿ, ಗಂಗಾವತಿ, ತಾವರಗೇರಿಯ ಮಾರ್ಗಹಿಡಿದು ಮುದುಗಲ್ಲಿಗೆ ಬಂದನು (ಕಪಟರಾಳ್ ಕೃಷ್ಣಮೂರ್ತಿ, ೧೯೭೭, ಪು. ೧) ಎಂದು ಹೇಳಲಾಗಿದೆ.

ಅಧ್ಯಾಯ - ೧

ಗ್ರಾಮ ದರ್ಶನ / ೧೯ - ೪೮

ಗ್ರಾಮ ದರ್ಶನ

೨.೧ ಆಯ್ಕೆ ಮತ್ತು ಸಮರ್ಥನೆ

ಬೇಡರ ಸಮಾಜ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಹೊಸಪೇಟೆ ತಾಲ್ಲೂಕಿನ ಕಮಲಾಪುರ ಹಾಗೂ ತಿಮ್ಮಲಾಪುರವನ್ನು ಆಯ್ಕೆ ಮಾಡಲಾಗಿದೆ. ಈ ಊರುಗಳ ಆಯ್ಕೆಗೆ ಅನೇಕ ಕಾರಣಗಳಿವೆ. ಈ ಊರುಗಳಲ್ಲಿ ಬೇಡರ ಜನಸಾಂದ್ರತೆ ಅಧಿಕ. ಭೌಗೋಳಿಕವಾಗಿಯೂ ಇವೆರಡು ಊರುಗಳ ನಡುವೆ ವೈವಿಧ್ಯತೆಯನ್ನು ಕಾಣಬಹುದು. ಒಂದು ಗುಡ್ಡಗಾಡು ಪ್ರದೇಶ ಮತ್ತು ಒಣ ಭೂಮಿ, ಇನ್ನೊಂದು ಬಯಲು ಪ್ರದೇಶ ಹಾಗೂ ನೀರಾವರಿ ಭೂಮಿ. ನೀರಾವರಿಯ ಕಾರಣ ಒಂದು ಪ್ರದೇಶ ಆರ್ಥಿಕ ಅಭಿವೃದ್ಧಿ ಪಡೆದಿದ್ದರೆ ಇನ್ನೊಂದು ಪ್ರದೇಶ ಯಾವುದೇ ಅಭಿವೃದ್ಧಿಯು ಇಲ್ಲದೆ ಬಡತನದ ರೇಖೆಗಿಂತ ಕೆಳಮಟ್ಟದ ಜೀವನವನ್ನು ನಡೆಸುತ್ತಿವೆ. ಇವುಗಳಿಗಿಂತ ಮುಖ್ಯವಾದ ಅಂಶವೆಂದರೆ ಒಂದೇ ಪಂಗಡಕ್ಕೆ ಸೇರಿದ ಎರಡು ಉಪಪಂಗಡಗಳಾದ ಮ್ಯಾಸಬೇಡರು ಕಮಲಾಪುರದಲ್ಲಿ ಮತ್ತು ಊರಬೇಡರು ತಿಮ್ಮಲಾಪುರದಲ್ಲಿ ನೆಲೆಸಿದ್ದಾರೆ. ಮೊದಲೆ ಹೇಳಿದಂತೆ ಮ್ಯಾಸಬೇಡರು ತಮ್ಮ ಬುಡಕಟ್ಟು ಲಕ್ಷಣಗಳನ್ನು ಉಳಿಸಿಕೊಂಡು ಬಂದಿದ್ದಾರೆ. ಆದರೆ ಊರನಾಯಕರು ಸ್ಥಳೀಯರಾಗಿ ಮಾರ್ಪಟ್ಟಿದ್ದಾರೆ. ಇವೆರಡು ಉಪಪಂಗಡಗಳಲ್ಲಿ ಭಾಷಿಕ, ಸಾಮಾಜಿಕ, ಸಾಂಸ್ಕೃತಿಕ ಭಿನ್ನತೆಗಳು ಕಂಡು ಬರುತ್ತವೆ. ಈ ವಿಭಿನ್ನತೆಯ ಕಾರಣವಾಗಿ ಇವರ ಮನೆಗಳಲ್ಲಿ ವೈವಿಧ್ಯತೆ ಕಂಡು ಬರುತ್ತದೆ.

[illegible]

[illegible]

ಮತ್ತೊಂದು ಮುಖ್ಯಾಂಶವೆಂದರೆ ಹಲವು ದಾಖಲೆಗಳಲ್ಲಿ ವ್ಯಾಸರು ಆಂಧ್ರದಿಂದ ಕರ್ನಾಟಕಕ್ಕೆ ವಲಸೆ ಬಂದ ಮಾರ್ಗವನ್ನು ಸೂಚಿಸುವಾಗ ಹಂಪಿಯ ಉಲ್ಲೇಖ ಬರುತ್ತದೆ. ಕಮಲಾಪುರದಲ್ಲಿ ಹೆಚ್ಚಿನ ಸಂಖ್ಯೆಯ ಬೇಡರು ನೆಲೆಸಿರುವುದನ್ನು ನೋಡಿದರೆ, ಕಮಲಾಪುರ ವಲಸೆಯ ಕೇಂದ್ರವಾಗಿರಬೇಕು. ಈ ಸ್ಥಳದ ಮೂಲಕವೇ ಉತ್ತರ ಮತ್ತು ದಕ್ಷಿಣ ಕರ್ನಾಟಕಕ್ಕೆ ವಲಸೆ ಜನಾಂಗ ಹಾದು ಹೋಗಿರಬೇಕು.

ಇದೇ ರೀತಿ ತಿಮ್ಮಲಾಪುರದ ಆಯ್ಕೆಗೆ ಮುಖ್ಯ ಕಾರಣ, ಅವರು ಒಂದು ವ್ಯವಸ್ಥಿತ ಹಳ್ಳಿಯಿಂದ ಈ ಪ್ರದೇಶಕ್ಕೆ ವಲಸೆ ಬಂದಿರುವವರು. ಇವರು ಈ ಪ್ರದೇಶಕ್ಕೆ ವಲಸೆ ಬಂದು ಐವತ್ತು ವರ್ಷಗಳೂ ಆಗಿಲ್ಲ. ಇಂಥ ಸಂದರ್ಭದಲ್ಲಿ ಇವರು ತಮ್ಮ ಬದುಕನ್ನು, ಸಮಾಜವನ್ನು ಹೇಗೆ ರೂಪಿಸಿಕೊಂಡಿದ್ದಾರೆ ಎಂಬುದನ್ನು ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಈ ಅಧ್ಯಯನಕ್ಕಿಂತ ಮುಂಚೆ ಇವೆರಡು ಊರಿನ ಭೌಗೋಳಿಕ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ವಿವರಗಳನ್ನು ತಿಳಿಯುವುದು ಅವಶ್ಯಕ. ಇದರಿಂದ ಈ ಪ್ರಬಂಧದಲ್ಲಿ ಇವೆರಡು ಊರುಗಳನ್ನು ಆಯ್ಕೆ ಮಾಡಿಕೊಳ್ಳಲು ಕಾರಣವಾದ ಅಂಶಗಳಿಗೆ ಸಮರ್ಥನೆ ದೊರೆಯುತ್ತದೆ.

೨.೧ ಕಮಲಾಪುರ

ತಾಲ್ಲೂಕಿನ ಕೇಂದ್ರವಾಗಿರುವ ಹೊಸಪೇಟೆ ನಗರದಿಂದ ೧೨ ಕಿ.ಮೀ. ದೂರದಲ್ಲಿದೆ ಕಮಲಾಪುರ. ಈ ಊರು ಪುರಸಭೆಗೆ ಸೇರಿದ್ದು ಇದರ ವಿಸ್ತೀರ್ಣ ೧೪ ಚ.ಕಿ.ಮೀ.ಗಳು. ಈ ಊರು ಹೊಸಪೇಟೆಯಿಂದ ಕಂಪ್ಲಿಗೆ ಹೋಗುವ ಮಾರ್ಗದಲ್ಲಿದೆ. ಊರಿನ ದಕ್ಷಿಣಕ್ಕೆ ಪ್ರಸಿದ್ಧವಾದ ಕಮಲಾಪುರದ ಕೆರೆಯಿದೆ.

ಕಮಲಾಪುರವು ಹಿಂದೆ ವಿಜಯನಗರ ಪಟ್ಟಣದ ಒಂದು ಭಾಗವಾಗಿತ್ತು. ವಿಜಯನಗರ ಸಾಮ್ರಾಜ್ಯದ ಐದಾರು ಶಾಸನಗಳು ಇಲ್ಲಿ ದೊರೆತಿವೆ. ಕ್ರಿ.ಶ. ೧೫೩೧ರ ಶಾಸನದಲ್ಲಿ ಇಲ್ಲಿನ ಕೊಂಡಮರಸಯ್ಯನವರ ಪಾಳೆಯದಲ್ಲಿನ ಶ್ರೀ ನರಸಿಂಹ ದೇವರನ್ನು ಉಲ್ಲೇಖಿಸುತ್ತದೆ. ಒಂದು ಐತಿಹ್ಯದ ಪ್ರಕಾರ ಪ್ರೌಢ ದೇವರಾಯನ ಪತ್ನಿ ಕಮಲಾದೇವಿಯ ಊರು ಇದಾಗಿದ್ದು ಅವಳ ಹೆಸರೇ ಊರಿಗೆ ಬಂದಿದೆ ಎಂದು ಹೇಳಲಾಗಿದೆ.

ಇಂದಿಗೂ ಊರಿನ ಒಳಗೆ ವಿಜಯನಗರ ಕಾಲದ ಕೋಟೆ, ಉಡೆವು ಮತ್ತು ದೇವಾಲಯಗಳ ಅವಶೇಷಗಳು ಕಂಡು ಬರುತ್ತವೆ. ಅವುಗಳಲ್ಲಿ ಪಟ್ಟಾಭಿರಾಮ ಹಾಗೂ ವಿಷ್ಣುದೇವಾಲಯಗಳು ಪ್ರಮುಖವಾಗಿವೆ. ಹೆಚ್.ಪಿ.ಸಿ.ಗೆ ಹೋಗುವ ರಸ್ತೆಯಲ್ಲಿ ಪಟ್ಟಾಭಿರಾಮನ ದೇವಾಲಯ ಬರುತ್ತದೆ. ಹಂಪಿಗೆ ಹೋಗುವ ರಸ್ತೆಯಲ್ಲಿ ವಿಷ್ಣುದೇವಾಲಯವಿದೆ. ಈ ದೇವಾಲಯವನ್ನು ಕಲೆಕ್ಟರ್ ಒಬ್ಬರು ವಾಸದ ನಿಲಯವಾಗಿ ಪರಿವರ್ತಿಸಿದರಂತೆ. ಇವುಗಳಲ್ಲದೆ ನಗರೇಶ್ವರ ಸ್ವಾಮಿ, ಕೂರನಹಳ್ಳಿ ಆಂಜನೇಯ, ಗಾರೆ ಬಾವಿ ಹನುಮಂತರಾಯ ಮುಂತಾದ ಸಣ್ಣಪುಟ್ಟ ದೇವಾಲಯಗಳು ಇವೆ.

೧೯೯೧ರ ಜನಗಣತಿಯ ವರದಿ ಪ್ರಕಾರ ಇಲ್ಲಿನ ಒಟ್ಟು ಜನಸಂಖ್ಯೆ ೨೦,೪೬೦ ಅದರಲ್ಲಿ ೧೦,೩೮೮ ಹೆಂಗಸರಾದರೆ, ೧೦,೦೭೨ ಗಂಡಸರಿದ್ದಾರೆ. ಈ ಗಣತಿಯ ಪ್ರಕಾರ ೩,೮೯೪ ವಾಸದ ಮನೆಗಳಿವೆ. ಇಲ್ಲಿ ನಾಯಕರ ಸಂಖ್ಯೆ ಅಧಿಕ. ೧೯೮೧ರ ಜನಗಣತಿಯ ಪ್ರಕಾರ ಇವರ ಒಟ್ಟು ಜನಸಂಖ್ಯೆ ೩೧೩೪ ಆಗಿದ್ದು ೧,೫೬೭ ಗಂಡಸರು ಮತ್ತು ೧,೫೬೭ ಹೆಂಗಸರಿದ್ದಾರೆ (೧೯೯೧ರ ಜನಗಣತಿಯಲ್ಲಿ ಪರಿಶಿಷ್ಟ ವರ್ಗದ ಜನಸಂಖ್ಯೆಯ ದಾಖಲೆ ದೊರೆಯದ ಕಾರಣ ೧೯೮೧ರ ದಾಖಲೆಯನ್ನು ನೀಡಲಾಗಿದೆ). ಬೇಡರಲ್ಲದೆ ಈ ಊರಿನಲ್ಲಿ ಬ್ರಾಹ್ಮಣ, ಮುಸಲ್ಮಾನ, ಕ್ರಿಶ್ಚಿಯನ್ನ, ಲಿಂಗಾಯತ, ವೈಶ್ಯ, ಉಪ್ಪಾರ, ಕುರುಬ, ಕಮ್ಮಾರ, ಕುಂಬಾರ, ಬಡಗಿ, ಅಕ್ಕಸಾಲಿಗ ಮುಂತಾದ ಜಾತಿಯವರು ಇದ್ದಾರೆ. ಮುಸ್ಲಿಂ, ಹರಿಜನ, ಕುರುಬರ ಜನಸಂಖ್ಯೆಯೂ ಹೆಚ್ಚಾಗಿದೆ. ಇಲ್ಲಿಯ ನಿವಾಸಿಗಳು ಹೊಲ, ಗದ್ದೆ, ದನಕರುಗಳಿಗೆ, ದೈನಂದಿನ ಕೆಲಸಕಾರ್ಯಗಳಿಗೆ ಕಮಲಾಪುರದ ಕೆರೆಯಿಂದ ನೀರು ಬಳಸಿಕೊಳ್ಳುತ್ತಾರೆ. ಕೆರೆಯ ನೀರಲ್ಲದೆ ಹೆಚ್.ಪಿ.ಸಿ. ಗೆ ಹೋಗುವ ಕಾಲುವೆಯ ನೀರನ್ನು ದೈನಂದಿನ ಜೀವನಕ್ಕೆ ಬಳಸಿಕೊಳ್ಳುತ್ತಿದ್ದಾರೆ. ಈ ಊರಿನ ಜನ ಊರಿನಿಂದ ಸ್ವಲ್ಪ ದೂರದಲ್ಲಿರುವ ಅಳ್ಳಿಕೆರೆಯ ನೀರನ್ನು ಗದ್ದೆಗಳಿಗೆ ಬಳಸಿಕೊಳ್ಳುವರು. ನೀರಾವರಿ ಭೂಮಿಯ ಕಾರಣವಾಗಿ ವಾಣಿಜ್ಯಬೆಳೆಯಾದ ಕಬ್ಬು, ಭತ್ತ ಮತ್ತು ಬಾಳೆಯನ್ನು ಬೆಳೆಯುತ್ತಾರೆ. ಹಿಂದೆ ಭೂ ಒಡೆತನ ಮೇಲ್ವರ್ಗದವರ ಕೈಯಲ್ಲಿದ್ದು, ಭೂ-ಸುಧಾರಣ ಕಾಯಿದೆಯ ನಂತರ ಕೆಳವರ್ಗದವರಿಗೂ ಎರಡು ಮೂರು ಎಕರೆ ಭೂಮಿ ದೊರೆಯಿತು. ಆದರೆ ಈ ಭೂಮಿಯು ಒಣ ಭೂಮಿಯಾಗಿರುವ ಕಾರಣ ಇವರಲ್ಲಿ ಹೆಚ್ಚಿನ ಜನ ಕೂಲಿ

ಮಾಡಿಯೇ ಜೀವನ ನಡೆಸಬೇಕಾಗಿದೆ. ನೀರಾವರಿ ಭೂಮಿ ಇಂದಿಗೂ ಮೇಲ್ವರ್ಗದವರ ಕೈಯಲ್ಲಿಯೇ ಇದೆ. ಊರಿನ ಕೆಲವರಿಗೆ ಕೆರೆಯ ಮೀನುಗಳು ಜೀವನಾಧಾರವಾಗಿವೆ.

ಊರಿನ ಮಧ್ಯದಲ್ಲಿ ಬ್ರಾಹ್ಮಣರ, ಲಿಂಗಾಯತರ ಮನೆಗಳು ಬಂದರೆ ಊರ ಹೊರ ಭಾಗದಲ್ಲಿ ಹರಿಜನ, ಬೇಡರ, ಮುಸ್ಲಿಂ ಮನೆಗಳಿವೆ. ಧಾರ್ಮಿಕವಾಗಿ ಊರಿನಲ್ಲಿ ಹಿಂದೂ, ಮುಸ್ಲಿಂರ ಎಲ್ಲಾ ಹಬ್ಬಗಳನ್ನು ಆಚರಿಸಲಾಗುತ್ತದೆ. ಇವರಿಗೆ ಹಂಪಿ ಜಾತ್ರೆ ಮುಖ್ಯವಾದ ಜಾತ್ರೆಯಾಗಿದೆ. ನಗರೇಶ್ವರ ಜಾತ್ರೆಯನ್ನು ಊರಿನ ಜಾತ್ರೆಯಾಗಿ ಆಚರಿಸುತ್ತಾರೆ.

ಹಿಂದಿನಂತೆಯೇ ಸಮಾಜದಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನವಿಲ್ಲ. ಮನೆಯ ಕೆಲಸ ಕಾರ್ಯಗಳಲ್ಲಿ ಮಾತ್ರ ಅವಳು ತೊಡಗಿಕೊಂಡಿದ್ದಾಳೆ. ಆದರೂ ಊರಿನ ಕೆಲವು ಮಹಿಳೆಯರು ವಿದ್ಯಾವಂತರಾಗಿ ನೌಕರಿಯನ್ನು ಮಾಡುತ್ತಿದ್ದಾರೆ. ಕೆಳವರ್ಗದ (ದುಡಿಯುವ) ಹೆಣ್ಣು ಗಂಡುಗಳಲ್ಲಿ ಸಮಾನತೆಯಿದೆ. ಹರಿಜನ ಮತ್ತು ನಾಯಕರಲ್ಲಿ ದೇವದಾಸಿ ಪದ್ಧತಿ ಕಂಡು ಬರುತ್ತದೆ. ಈ ಪದ್ಧತಿ ಇಂದು ನಾಶವಾಗುತ್ತಿದೆ. ಅವಿಭಕ್ತ ಕುಟುಂಬ ವ್ಯವಸ್ಥೆಯೂ ನಾಶಹೊಂದುತ್ತಿದೆ. ದುಬಾರಿಯಾದ ಕಾಲದಲ್ಲಿ ಅವಿಭಕ್ತ ಕುಟುಂಬಗಳ ನಿರ್ವಹಣೆ ಕಷ್ಟವಾಗಿ ಪ್ರತ್ಯೇಕ ಕುಟುಂಬಗಳು ಹೆಚ್ಚಾಗುತ್ತಿವೆ.

ಕಮಲಾಪುರವು ಉತ್ತಮ ಸಾರಿಗೆ ಸಂಪರ್ಕವನ್ನು ಪಡೆದಿದೆ. ಹಂಪಿ, ಕಂಪ್ಲಿಗಳಿಗೆ ಹೋಗುವಾಗ ಈ ಊರಿನ ಮೂಲಕ ಹಾದು ಹೋಗಬೇಕು. ಹೊಸಪೇಟೆಯಿಂದ ಅರ್ಧಗಂಟೆಗೆ ಒಂದರಂತೆ ಬಸ್ಸುಗಳು ಬಂದು ಹೋಗುತ್ತವೆ. ಸರ್ಕಾರಿ ವಾಹನಗಳಲ್ಲದೆ ಖಾಸಗಿ ವಾಹನಗಳೂ ಓಡಾಡುತ್ತವೆ. ಊರಿನಲ್ಲಿ ಎರಡು ಬಸ್ಸ ನಿಲ್ದಾಣಗಳಿವೆ.

ಶೈಕ್ಷಣಿಕವಾಗಿ ಇಲ್ಲಿ ಹತ್ತು ಶಿಕ್ಷಣ ಸಂಸ್ಥೆಗಳಿವೆ. ಅದರಲ್ಲಿ ಒಂದು ಖಾಸಗಿ ಕಿರಿಯ ಪ್ರಾಥಮಿಕ ಶಾಲೆ ಇದೆ. ಅಲ್ಲದೇ ಶ್ರೀಕೃಷ್ಣದೇವರಾಯ ಸ್ವತಂತ್ರ ಪದವಿ ಪೂರ್ವ ವಿದ್ಯಾಲಯವು ಇದೆ. ೧೯೮೧ರ ಜನಗಣತಿಯ ಪ್ರಕಾರ ಇಲ್ಲಿ ೫೨೫೮ ಜನ ವಿದ್ಯಾವಂತರಿದ್ದು, ಅದರಲ್ಲಿ ೩೪೯೦ ಜನ ಗಂಡಸರು, ೧೭೬೮ ಹೆಂಗಸರು.

೧೯೯೩-೯೪ನೇ ಸಾಲಿನಲ್ಲಿ ಶ್ರೀಕೃಷ್ಣದೇವರಾಯ ಸ್ವತಂತ್ರ ಪದವಿ ಪೂರ್ವ ವಿದ್ಯಾಲಯದ ಕಲಾ ವಿಷಯವನ್ನು ಅಭ್ಯಾಸ ಮಾಡಿದವರ ಸಂಖ್ಯೆ ಹೀಗಿದೆ : ಗಂಡು-೫೪, ಹೆಣ್ಣು-೬, ಎಸ್.ಸಿ. ಗಂಡು- ೧೪, ಹೆಣ್ಣು- ೧೧, ಎಸ್.ಟಿ. ಗಂಡು- ೧೦, ಹೆಣ್ಣು- ೮ ಜನ. ಇಲ್ಲಿ ಒಂದು ವಾಣಿಜ್ಯ ಶಾಲೆಯೂ ಇದೆ. ಮನರಂಜನೆಗಾಗಿ ಎರಡು ಚಿತ್ರಮಂದಿರಗಳಿವೆ. ಹಣಕಾಸಿನ ಮತ್ತು ಅಂಚೆ ವ್ಯವಸ್ಥೆಗಾಗಿ ಬ್ಯಾಂಕು, ಅಂಚೆ ಕಛೇರಿಗಳಿವೆ. ದೂರವಾಣಿ ವ್ಯವಸ್ಥೆ ಇದ್ದು ಎಸ್.ಟಿ.ಡಿ. ಮತ್ತು ಐ.ಇಸ್.ಡಿ. ಅನುಕೂಲವೂ ಇದೆ. ಹೋಟೆಲ್ ವ್ಯವಸ್ಥೆಯೂ ಇದೆ. ಐತಿಹಾಸಿಕ ವಸ್ತುಗಳ ಸಂಗ್ರಹಣೆಗಾಗಿ ಪ್ರಮುಖವಾದ ವಸ್ತು ಸಂಗ್ರಹಾಲಯವೂ ಇಲ್ಲಿದೆ. ರೋಗ, ರುಜಿನಿಗಳಿಗೆ ಚಿಕಿತ್ಸೆ ಪಡೆಯಲು ಏಳು ಆಸ್ಪತ್ರೆಗಳಿವೆ. ಅದರಲ್ಲಿ ಒಂದು ಮಾತ್ರ ಸರ್ಕಾರಿ ಆಸ್ಪತ್ರೆ. ಒಂದು ಪೋಲಿಸ ಠಾಣೆ ಊರಿನಲ್ಲಿದೆ.

ಊರಿನ ಹೊರ ಅಂಚಿನಲ್ಲಿ, ಆಗ್ನೇಯ ದಿಕ್ಕಿಗೆ ವಾಸವಾಗಿರುವ ಬೇಡ ಸಮುದಾಯವನ್ನು ಗಮನಿಸುವ. ಈ ಊರಿನಲ್ಲಿ ಬೇಡರ ಪ್ರಮುಖ ಉಪಪಂಗಡಗಳಾದ ಊರಬೇಡರು ಮತ್ತು ಮ್ಯಾಸಬೇಡರು ಹೆಚ್ಚಾಗಿದ್ದರೂ ಮ್ಯಾಸಬೇಡರ ಸಂಖ್ಯೆಯೇ ಅಧಿಕವಾಗಿದೆ. ಇವರು ಕನ್ನಡ ಮಿಶ್ರಿತ ತೆಲುಗು ಭಾಷೆಯನ್ನಾಡುತ್ತಾರೆ. ಈ ಸಮುದಾಯವು ಹಿಂದೆ ವಿಜಯನಗರ ಸಾಮ್ರಾಜ್ಯದ ಸೈನ್ಯ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಿತ್ತು. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಕಮಲಾಪುರಕ್ಕೆ ಆಂಧ್ರದಿಂದ ವಲಸೆ ಬಂದವರು ಮ್ಯಾಸಬೇಡರು. ಇವರು ವಲಸೆ ಬಂದ ನಿರ್ದಿಷ್ಟ ಕಾಲಘಟ್ಟ ತಿಳಿದು ಬಂದಿಲ್ಲ. ಆದರೆ ಸಂಗಮ ವಂಶದ ಬುಕ್ಕರಾಯನ ಕಾಲದಲ್ಲಿಯೇ ಇವರು ಆಂಧ್ರದಿಂದ ಬಂದಿರಬೇಕು. ಏಕೆಂದರೆ ಬುಕ್ಕರಾಯನು ಗುಮ್ಮನಾಯಕನ ಪಾಳೆಯದ ಪಾಳೆಯಗಾರರನ್ನು ಸೋಲಿಸಿದಾಗ ಯುದ್ಧ ಒಪ್ಪಂದದಂತೆ ೨೦೦ ಜನರನ್ನು ರಾಜನ ಸೇವೆಗಾಗಿ ವಿಜಯನಗರಕ್ಕೆ ಕಳುಹಿಸಿದ ಮಾಹಿತಿ ದೊರೆಯುತ್ತದೆ.

ಕಮಲಾಪುರದ ಬಂಡೆಕೇರಿಯ ಗುರಿಕಾರ ಕಾಟಯ್ಯನ ಬಳಿ ಇರುವ ಅಪ್ರಕಟಿತ ಕಂಚಿನ ಪತ್ರದಲ್ಲಿ ಕ್ರಿ.ಶ.೧೬೯೨ರಲ್ಲಿ ಮ್ಯಾಸಬೇಡರು ಈ ಪ್ರದೇಶದಲ್ಲಿ ಬ್ಯಾದ್ಗಿ ಮಾಡುತ್ತಿದ್ದ ವಿವರಣೆಯಿದೆ.

ಕಂಚಿನ ಪತ್ರದ ಮೇಲ್ಭಾಗದಲ್ಲಿ ಸೂರ್ಯ, ಚಂದ್ರರನ್ನು ಕೊರೆಸಲಾಗಿದೆ. ಶಾಸನದಲ್ಲಿ ಒಟ್ಟು ಏಳು ಸಾಲುಗಳಿವೆ.

ಶಾಸನ : ೧. ಶ್ರೀರಾಮ

೨. ರಣಮಂಡ್ಲದಮಂ

೩. ದಯ್ಯ ಚಿತ್ತಯ್ಯಗೆ

೪. ಮ್ಯಾಸ ಬ್ಯಾಡ್ರಿಕನಾಯ

೫. ಕತನಾ ಕೊಟ್ಟ ಶಾಸನಾ

೬. ಶಕ ೧೬೧೪ ಮಾಘ ಶು

೭. ನಳನ.

ಊರಿನ ಹೊರಗೆ ಪೂರ್ವದಿಂದ ದಕ್ಷಿಣಕ್ಕೆ ಹರಡಿಕೊಂಡಿರುವ ಮ್ಯಾಸಮಂಡಲದಲ್ಲಿ ಏಳು ಕೇರಿಗಳಿದ್ದುವಂತೆ. ಇಂದು ಒಂದು ಕೇರಿ ಲೋಪವಾಗಿ ೬ ಕೇರಿಗಳು ಉಳಿದುಕೊಂಡಿವೆ. ಈ ಕೇರಿಗಳಲ್ಲಿ ಮ್ಯಾಸಬೇಡರೇ ವಾಸವಾಗಿದ್ದು ಊರಬೇಡರು ಮತ್ತು ಕುರುಬರ ಕೆಲವು ಮನೆಗಳಿವೆ. ಹಿರೇಕೇರಿ, ಬಂಡಿಕೇರಿ, ಗೋನಾಳಕೇರಿ, ತಿಮ್ಲಪ್ಪನ (ತಿಮ್ಮನಾಥನ) ಕೇರಿ, ಮನ್ಮಥನಕೇರಿ, ಚಾವಡಿ ಕೇರಿಗಳಲ್ಲಿ ಆರು ಚಾವಡಿಗಳಿವೆ. ಮ್ಯಾಸಮಂಡಲದ ಪ್ರತಿ ಕೇರಿಯ ಜಗಳ, ಮಾತುಕತೆಯ ನಿರ್ಣಯವಾಗುವುದು ಈ ಚಾವಡಿಯ ಮೇಲೆಯೇ. ಇದು ಪಂಚಾಯತಿ ಕಟ್ಟೆಯ ರೀತಿ ಕಾರ್ಯ ನಿರ್ವಹಿಸುತ್ತದೆ. ಮ್ಯಾಸ ಮಂಡಲದಲ್ಲಿ ಇವರದೇ ಆದ ಆರು ದೇವಾಲಯಗಳಿವೆ. ಗುರುನಾಥ ಮುತ್ತಯ್ಯ, ಗಾದ್ರಿಪಾಲಯ್ಯ, ನಲಜರಲ ಓಬಯ್ಯ, ಕಾಮಗೇತಿಯರ ಇನ್ನೊಂದು ದೇವರು, ಕಂಪಳರಾಯ ಮತ್ತು ಸೂರಲದೇವರ ಒಟ್ಟು ಆರು ಪೌಳಿಗಳಿವೆ. ಮತ್ತು ಹೆಣ್ಣುದೇವತೆಯಾದ ಮಾರಮ್ಮನ ಒಂದು ಪೌಳಿಯೂ ಇದೆ.

ಮ್ಯಾಸಮಂಡಲದಲ್ಲಿ ಸುಮಾರು ಹತ್ತು ಬೆಡಗಿನವರು ವಾಸವಾಗಿದ್ದಾರೆ. ಎಲ್ಲರಿಗೂ ತಮ್ಮದೇ ಆದ ದೇವರ ಪೌಳಿಗಳಿಲ್ಲ. ಪಾಮ್ಮುಕ್ಲರು, ಕಾಮಗೇತಿಯುರು, ಎಮ್ಮಲ್ಲರುಗಳಿಗೆ ಮಾತ್ರ ಪೌಳಿಗಳಿವೆ. ಪೌಳಿಗಳಲ್ಲಿರುವ ದೇವರುಗಳು ಪೂಜಾರಹಳ್ಳಿ, ಕಾಮಗೇತಿ ಹಟ್ಟಿ, ಕಂಪಳದೇವರ ಹಟ್ಟಿ ಮುಂತಾದ

ಊರುಗಳಿಂದ ಬಂದಿವೆ. ದೇವರನ್ನು ಇವರು ಬುಟ್ಟಿದೇವರು ಮತ್ತು ಚಿತ್ತದ ದೇವರು ಎಂದು ಕರೆಯುತ್ತಾರೆ. ಕೆಲವರು ಬುಟ್ಟಿಯಲ್ಲಿ ದೇವರಿಟ್ಟಿದ್ದರೆ ಇನ್ನು ಕೆಲವರು ಚಿತ್ತಕ್ಕೆ ದೇವರ ಮುಖಗಳನ್ನಿಟ್ಟು ಅಲಂಕಾರ ಮಾಡಿ ಪೂಜೆಮಾಡುತ್ತಾರೆ. ದೇವರುಗಳನ್ನು ವಿಶೇಷವಾಗಿ ಬರತ ಹುಣ್ಣಿಮೆಯಲ್ಲಿ ಪೂಜಿಸಲಾಗುತ್ತದೆ. ದೇವರುಗಳಿಗೆ ಮಾಂಸದ ಎಡೆ (ನೈವೇದ್ಯ) ಮಾಡುವಂತಿಲ್ಲ. ಬರತ ಹುಣ್ಣಿಮೆಯಲ್ಲಿ ಗುಗ್ಗರಿಯನ್ನು, ಅನ್ನವನ್ನು ಮಾಡಿ ಎಲ್ಲರು ಸೇರಿ ಊಟ ಮಾಡುವರು. ಇದಕ್ಕೆ ಇವರು 'ಗುಗ್ಗರಿ ಹಬ್ಬ' ಎಂದು ಕರೆಯುತ್ತಾರೆ. ಮಾರನೆಯ ದಿನ ತಮ್ಮ ಹೊರ ದೇವರಾದ ಈರಣ್ಣ, ಮಾರಮ್ಮ ಇವರುಗಳಿಗೆ ಬಲಿಕೊಟ್ಟು ಎಲ್ಲಾರು ಮಾಂಸದ ಅಡುಗೆ ಮಾಡಿ ಊಟ ಮಾಡುವರು. ದೇವರ ಪೂಜೆಯು ಮೂರು ಅಥವಾ ಐದು ವರ್ಷಕ್ಕೆ ಒಮ್ಮೆ ನಡೆಯುವುದು. ಪೌಳಿಯನ್ನು ಮಾಡಿಕೊಳ್ಳದೆ ಇರುವ ಬೆಡಗಿನ ಜನರು ತಮ್ಮ ಮನೆಯಲ್ಲಿಯೇ ಗುಗ್ಗರಿ ಹಬ್ಬ ಮಾಡಿಕೊಳ್ಳುವರು. ಮನೆಯಿಂದ ಒಬ್ಬರು ದೇವರಿರುವ ಊರಿಗೆ ಹೋಗಿ ಗುಗ್ಗರಿ ಪೂಜೆ, ಬಿಸಲು, ಹಾಗೂ ಕಾಸು ಒಪ್ಪಿಸಿ ಬರುವರು.

ಕಮಲಾಪುರದಲ್ಲಿರುವ ಪೌಳಿಗಳು ವೃತ್ತಕಾರವಾಗಿದ್ದು, ಹುಲ್ಲಿನ ಮೇಲ್ಛಾವಣಿಯನ್ನು ಒಳಗೊಂಡಿವೆ. ವೃತ್ತಾಕಾರಾದ ಗೋಡೆಗಳಿಗೆ ಮಣ್ಣು, ಕಲ್ಲು, ಇಟ್ಟಿಗೆಗಳನ್ನು ಬಳಸಿಕೊಂಡಿದ್ದಾರೆ. ಕೆಲವು ಪೌಳಿಗಳಿಗೆ ಸುಣ್ಣವನ್ನು ಬಳಸಿಲ್ಲ. ಕೆಮ್ಮಣ್ಣನ್ನು ಬಳಸಿದ್ದಾರೆ. ಪೌಳಿಗಳು ವೃತ್ತಾಕಾರದ, ಎತ್ತರವಾದ ಜಗಲಿಗಳ (ಕಟ್ಟೆಗಳ) ಮೇಲೆ ನಿರ್ಮಿತವಾಗಿವೆ. ಕೆಲವು ಪೌಳಿಗಳಲ್ಲಿ ಹೆಂಗಸರಿಗೆ ಪ್ರವೇಶವಿಲ್ಲ. ಪೌಳಿಗಳ ಸುತ್ತಲೂ ತಮ್ಮ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ. ಮ್ಯಾಸಬೇಡರು ಶೈವ ಮತ್ತು ವೈಷ್ಣವ ಸಂಪ್ರದಾಯಕ್ಕೆ ಸೇರಿದ್ದಾರೆ.

೨.೨.೧ ಸಾಮಾಜಿಕ ಶ್ರೇಣಿ

ಅರಸ :

ಮ್ಯಾಸಮಂಡಲದವರು ಹಿಂದಿನಿಂದಲೂ ವಿಜಯನಗರದ ಅರಸರಿಗೆ ಗೌರವ ನೀಡುತ್ತಾ ಬಂದಿದ್ದಾರೆ. ಇವತ್ತಿಗೂ ಆನೆಗೊಂದಿಯ ರಾಜರಿಗೆ ಗೌರವ ನೀಡುವರು. ಯುಗಾದಿಯ ಸಂದರ್ಭದಲ್ಲಿ ರಾಜನನ್ನು ಊರಿಗೆ ಆಹ್ವಾನಿಸುವರು. ಅರಸ ಬಂದರೆ ಹಿರೇಕೇರಿಯಲ್ಲಿರುವ ಸಿಂಹಾಸನದ ಕಟ್ಟೆಯ

ಮೇಲೆ ಕುಳಿತುಕೊಳ್ಳುವರು. ಅರಸ ನ್ಯಾಯ ತೀರ್ಮಾನ ಮಾಡುವ ಸ್ಥಳ ಇದೆ. ಸಿಂಹಾಸನದ ಕಟ್ಟೆಯ ಮೇಲೆ ಕಳಸವನ್ನಿಟ್ಟಿದ್ದಾರೆ. ಇದನ್ನು ಮಾರಮ್ಮ ಎಂದು ಕರೆಯುತ್ತಾರೆ. ಆದರೆ ಈ ಸಿಂಹಾಸನ ಕಟ್ಟೆಯ ಮೇಲೆ ಮಹಿಳೆಯರು ಹತ್ತುವಂತಿಲ್ಲ.

ಹೋಳಿ ಹಬ್ಬದಂದು ಆನೆಗೊಂದಿಯ ಅರಸರು ಹಣ ಅಥವಾ ಬಣ್ಣವನ್ನು ಕಳುಹಿಸಿ ಕೊಡಬೇಕು. ಇಲ್ಲದಿದ್ದರೆ ಬಣ್ಣವಾಡುವಂತಿಲ್ಲ ಎಂದು ಹಿರಿಯರು ಹೇಳುತ್ತಾರೆ. ತಮ್ಮ ವಂಶಕ್ಕೆ ಸಂಬಂಧಿಸಿದ ದಾಖಲೆಪತ್ರಗಳು ಅರಸರ ಬಳಿ ಇವೆ ಎಂದು ನಂಬಿದ್ದಾರೆ. ಬಂಡೆಕೇರಿಯ ಗುರಿಕಾರನ ಬಳಿ ಇದ್ದ ಕಂಚಿನ ಪತ್ರದ ಛಾಯಚಿತ್ರ ತೆಗೆದು ಕೊಳ್ಳಲು ಕೇಳಿದಾಗ ನಾವು ನಮ್ಮ ಆನಗೊಂದಿ ಅರಸರ ಒಪ್ಪಿಗೆ ಇಲ್ಲದೆ ಕೊಡುವುದಿಲ್ಲ ಎಂದು ಹೇಳಿದ. ಹಿರಿಯಲ್ಲಿ ಇಂದಿಗೂ ಅರಸರಬಗ್ಗೆ ಅಪಾರ ಗೌರವ, ಭಯ, ಭಕ್ತಿ ಉಂಟು.

ಯಜಮಾನ :

ಸ್ಥಳೀಯವಾಗಿ ಆರು ಕೇರಿಗಳಲ್ಲಿ ತಮ್ಮದೇ ಆದ ಆಡಳಿತ ವ್ಯವಸ್ಥೆಯನ್ನು ಮಾಡಿಕೊಂಡು, ಒಂದೊಂದು ಕೇರಿಗೆ ಇಬ್ಬರು ಯಜಮಾನರು, ಗುರಿಕಾರ, ತಳವಾರರನ್ನು ನೇಮಿಸಿಕೊಳ್ಳುತ್ತಿದ್ದರು. ಯಜಮಾನರಿಗೆ ಸಲಹೆ, ಸೂಚಕರಾಗಿ ಐದು ಜನ ಹಿರಿಯರನ್ನು ನೇಮಿಸಿಕೊಳ್ಳುತ್ತಿದ್ದರಂತೆ. ಆರು ಕೇರಿಗಳಿಗೂ ಸಂಬಂಧಿಸಿದ ವಿಷಯವಾದರೆ ಕೇರಿಯ ಯಜಮಾನರುಒಟ್ಟಿಗೆ ಸೇರುತ್ತಿದ್ದರಂತೆ. ಜಾತ್ರೆ, ಹಬ್ಬ, ಮದುವೆ ಮುಂತಾದ ಸಂದರ್ಭದಲ್ಲಿ ಇವರು ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರು. ಆದರೆ ಇಂದು ಯಜಮಾನರ ಮಹತ್ವ ಮೊದಲಿನಷ್ಟಿಲ್ಲ. ಇವರ ಅಧಿಕಾರ ಕಡಿಮೆಯಾಗಿದೆ. ಸರ್ಕಾರಿ ಕೋರ್ಟು, ಕಛೇರಿಗಳು ಜನರ ಸಮಸ್ಯೆಗಳನ್ನು ಪರಿಹರಿಸುತ್ತಿವೆ. ಯುಗಾದಿ ಹಬ್ಬದಲ್ಲಿ ಮಾತ್ರ ಈ ಯಜಮಾನರ ನೇತೃತ್ವದಲ್ಲಿ ಜನ ಬೇಟೆಗೆ ಹೋಗುತ್ತಾರೆ.

ಪೂಜಾರಿಗಳು :

ಪ್ರತಿಯೊಂದು ಪೌಳಿಗೂ ಒಬ್ಬ ಪೂಜಾರಿಗಳಿರುತ್ತಾರೆ. ಇವರು ಕೇರಿಗಳಲ್ಲಿ ಪ್ರಮುಖ ವ್ಯಕ್ತಿಗಳಾಗಿರುತ್ತಾರೆ. ತಮ್ಮ ಮನೆ ದೇವರ ಪೂಜೆಗಾಗಿ ಸಣ್ಣ ಬಾಲಕನಿಗೆ ಮುದ್ರೆಯನ್ನು ಹಾಕುತ್ತಾರೆ. ಇವರು ಬೇರೆಮನೆಗಳಲ್ಲಿ ಊಟ ಮಾಡುವಂತಿಲ್ಲ, ಮಾಂಸ ತಿನ್ನುವಂತಿಲ್ಲ. ಗುಗ್ಗರಿ ಹಬ್ಬ ಇತ್ಯಾದಿಗಳನ್ನು ಮಾಡಿದಾಗ ದೇವರನ್ನು ಹೊಳೆಗೆ ತೆಗೆದುಕೊಂಡು ಹೋಗಿ ತೊಳೆಯುವುದು, ದೇವರಿಗೆ ಅಲಂಕಾರ ಮಾಡುವುದು, ವಾರ ವಾರ ದೇವರ ಪೂಜೆ ಮಾಡುವುದು ಇವರ ಕೆಲಸ. ಇಂದು ಕೆಲವುಜನರು ಮಾತ್ರ ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸುತ್ತಿದ್ದಾರೆ. ಉಳಿದವರು ದೇವರ ವಾರದಂದು ಮಾತ್ರ ಮಾಂಸ ತಿನ್ನುವುದಿಲ್ಲ.

೨.೨.೨ ಸಾಮಾಜಿಕ ವ್ಯವಸ್ಥೆ

ಮ್ಯಾಸ ಬೇಡರು ಹಿಂದೂಧರ್ಮದ ಚತುರ್ವರ್ಣ ವ್ಯವಸ್ಥೆಯಿಂದ ಹೊರಗಿದ್ದಾರೆ. ಇಂದಿಗೂ ಇವರು ಜಾತಿ ವ್ಯವಸ್ಥೆಯ ಚೌಕಟ್ಟಿಗೆ ಸೇರಿಲ್ಲ. ತಮ್ಮ ರಕ್ತ ಸಂಬಂಧಿಗಳೊಂದಿಗೆ ಕೋಟೆಯ ಹೊರ ಭಾಗದಲ್ಲಿ(ಊರಿನ ಹೊರ ಭಾಗದಲ್ಲಿ)ಯೇ ಉಳಿದಿದ್ದಾರೆ. ಹಿಂದಿನಿಂದಲೂ ಬ್ರಾಹ್ಮಣರ ಹೊಲ, ಗದ್ದೆಗಳಲ್ಲಿ ಕೂಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಭೂ ಸುಧಾರಣೆಯಿಂದಾಗಿ ಭೂಮಿಯ ಮೇಲೆ ಒಡೆತನ ಸಿಕ್ಕಿದೆ. ಆದರೂ ಇವರ ಜೀವನ ಸುಧಾರಿಸಿಲ್ಲ. ಇವರಲ್ಲಿ ಹೆಚ್ಚಿನ ಜನ ಕೂಲಿ ಕೆಲಸವನ್ನೇ ಮಾಡುತ್ತಿದ್ದಾರೆ.

ಇವರಲ್ಲಿ ಅವಿಭಕ್ತ ಕುಟುಂಬಕ್ಕಿಂತ ವಿಭಕ್ತ ಕುಟುಂಬಗಳೇ ಹೆಚ್ಚು. ದುಬಾರಿ ಕಾಲದಲ್ಲಿ ದೊಡ್ಡ ಕುಟುಂಬದ ನಿರ್ವಹಣೆ ಅಸಾಧ್ಯ. ಅಲ್ಲದೆ ನವಪೀಳಿಗೆಗೆ ವೈಯಕ್ತಿಕ ಸ್ವತಂತ್ರ, ಪ್ರತ್ಯೇಕ ಜೀವನ ನಡೆಸುವುದರಲ್ಲಿ ಹೆಚ್ಚಿನ ಆಸಕ್ತಿ. ಆದ್ದರಿಂದಲೇ ವಿಭಕ್ತ ಕುಟುಂಬ ವ್ಯವಸ್ಥೆಗಳು ಕಂಡು ಬರುತ್ತಿವೆ. ಆದರೂ ಅವಿಭಕ್ತ ಕುಟುಂಬ ವ್ಯವಸ್ಥೆ ಸಂಪೂರ್ಣವಾಗಿ ಕಣ್ಮರೆಯಾಗಿಲ್ಲ. ಇನ್ನೂ ಕೆಲವು

ಕುಟುಂಬಗಳು ಒಂದೇ ಸೂರಿನಡಿ ವಾಸವಾಗಿದ್ದರು ಅಡುಗೆ, ಹಣಕಾಸಿನ ವ್ಯವಹಾರ ಮುಂತಾದವುಗಳು ಪ್ರತ್ಯೇಕವಾಗಿರುತ್ತವೆ. ಒಂದೇ ಮನೆಯಲ್ಲಿ ಎರಡೆರಡು ಕಡೆ ಒಲೆಗಳು, ಬಾಗಿಲುಗಳು ಕಂಡು ಬರುತ್ತವೆ.

ಮ್ಯಾಸಬೇಡರ ಸಮಾಜ ಪುರುಷ ಪ್ರಧಾನ ಸಮಾಜ. ಪಿತೃ ಪ್ರಧಾನ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಮನೆಯ ಯಜಮಾನಿಕೆ ಗಂಡಸಿನ ಕೈಯಲ್ಲಿಯೇ. ತಂದೆಯ ನಂತರ ಹಿರಿಯ ಮಗನಿಗೆ ಅಧಿಕಾರ ಹಸ್ತಾಂತರಗೊಳ್ಳುತ್ತದೆ. ಹೆಣ್ಣು ಮಕ್ಕಳಿಗೆ ಯಾವುದೇ ಅಧಿಕಾರವಿಲ್ಲ ಹಾಗೂ ಇವರಿಗೆ ಆಸ್ತಿಯಲ್ಲಿ ಪಾಲಿಲ್ಲ. ಒಂದು ವೇಳೆ ಗಂಡು ಮಕ್ಕಳಿಲ್ಲದಿದ್ದರೆ ಮನೆ ಮಗಳನ್ನು ದೇವರಿಗೆ (ದೇವದಾಸಿ (ಲೇಸಿ)) ಬಿಡುವ ಪದ್ಧತಿಯಿದೆ. ಇಲ್ಲವೇ ಮದುವೆ ಮಾಡಿ ಮನೆ ಅಳಿಯನನ್ನಾಗಿ ಮಾಡಿಕೊಳ್ಳುವರು. ಮಗಳನ್ನು ಬೇರೆ ಮನೆಗೆ ಕಳುಹಿಸಿ ಕೊಡುವುದಿಲ್ಲ. ಈ ಸಂದರ್ಭಗಳಲ್ಲಿ ಮಾತ್ರ ಹೆಣ್ಣು ಮಕ್ಕಳಿಗೆ ಆಸ್ತಿ ದೊರೆಯುತ್ತದೆ. ಇವಳ ಮಕ್ಕಳು ತಂದೆಯ ಹೆಸರನ್ನಿಟ್ಟುಕೊಳ್ಳದೆ, ತಾಯಿಯ ಹೆಸರನ್ನ (ಬೆಡಗಿನ ಹೆಸರನ್ನಿ)ಟ್ಟುಕೊಳ್ಳುತ್ತಾರೆ. , ಸರ್ಕಾರದ ಕಾನೂನಿನಂತೆ ದೇವದಾಸಿಯನ್ನು ಬಿಡುವಂತಿಲ್ಲ. ಈ ಸಮಾಜದ ಗಣ್ಯವ್ಯಕ್ತಿಗಳು ದೇವದಾಸಿಯನ್ನು ಬಿಟ್ಟರೆ ದಂಡ ವಿಧಿಸಿದ್ದಾರೆ. ಕದ್ದು ಮುಚ್ಚಿ ಕೆಲವು ಹೆಣ್ಣುಗಳನ್ನು ಲೇಸಿಯಾಗಿ ಮಾಡಿದ್ದಾರೆ. ಆದರೆ ಲೇಸಿಗಳ ಸಂಖ್ಯೆ ಕಡಿಮೆಯಾಗಿದೆ. ರಕ್ಕಸ - ತಂಗಡಿಯ ಯುದ್ಧದ ನಂತರ ಈ ಪದ್ಧತಿ ಬೇಡರಲ್ಲಿ ಬೆಳೆಯಿತು ಎಂದು ಹೇಳುತ್ತಾರೆ.

ಲೇಸಿ ಬಿಡಲು ಹಲವು ಕಾರಣಗಳಿವೆ. ಧಾರ್ಮಿಕ ಆಚರಣೆಗಾಗಿ, ಒಬ್ಬಳೇ ಮಗಳನ್ನು ಮದುವೆಮಾಡಿ ಗಂಡನ ಮನೆಗೆ ಕಳುಹಿಸಲು ಇಷ್ಟವಿಲ್ಲದೆ, ಕುಲವನ್ನು ಬೆಳೆಸಲು, ಗಂಡುಮಕ್ಕಳಿಲ್ಲದೆ ಆಸ್ತಿಯು ಪರರ ಪಾಲಾಗಬಾರದು ಎಂದು ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡುವರು. ದೇವದಾಸಿಯರಿಗೆ ಇಂದು ಹೆಚ್ಚಿನ ಗೌರವವಿಲ್ಲ ನಿಜ. ಆದರೆ ಸಾಂಪ್ರದಾಯಿಕ ಆಚರಣೆಗಳಲ್ಲಿ ದೇವದಾಸಿಯರಿಗೆ ಹೆಚ್ಚಿನ ಸ್ಥಾನಮಾನವಿದೆ. ಈ ಸಮುದಾಯದಲ್ಲಿ ದೇವದಾಸಿಯ ಮಕ್ಕಳನ್ನು ಮದುವೆಮಾಡಿಕೊಳ್ಳುತ್ತಾರೆ. ಕೆಲವು ಉನ್ನತ ಮನೆತನಗಳಲ್ಲಿ ಮಾತ್ರ ದೇವದಾಸಿ ಮನೆಯಿಂದ ಹೆಣ್ಣು ತರುವುದಿಲ್ಲ ಹಾಗೂ ಕೊಡುವುದಿಲ್ಲ. ಕೆಳವರ್ಗದಲ್ಲಿ ಈ ನಿರ್ಭಂಧವಿಲ್ಲ. ಇವರ ಸಮಾಜದಲ್ಲಿ ಸೋದರಮಾವ ಅಥವಾ ಸೋದರ ಮಾವನ ಮಗ/ಮಗಳನ್ನು ಮದುವೆಯಾಗುವುದು ರೂಢಿಯಲ್ಲಿದೆ. ಆದರೆ ದೇವದಾಸಿಯ ಮಗ ಅಥವಾ ಮಗಳು ಸೋದರ ಮಾವನ ಮಗ/ಮಗಳನ್ನು

ಮದುವೆಯಾಗುವಂತಿಲ್ಲ. ಮಗಳು ಲೇಸಿಯಾದ ನಂತರ ಗಂಡು ಮಗನಂತೆ ಮನೆಯ ಮಗಳಾಗಿ ತಂದೆಯ ಆಸ್ತಿ ಮತ್ತು ಬೆಡಗನ್ನು ಹೊಂದಿರುತ್ತಾಳೆ. ಲೇಸಿಯ ಮಗ ಮತ್ತು ಇವಳ ಅಣ್ಣನ ಮಗಳು ಅಣ್ಣ ತಂಗಿಯರಾಗುತ್ತಾರೆ. ಅಲ್ಲದೇ ಇಬ್ಬರು ಒಂದೇ ಬೆಡಗಿನವರಾಗುವುದರಿಂದ ಇವರಲ್ಲಿ ಸ್ವಬೆಡಗಿ ವಿವಾಹ ನಿಷಿದ್ಧ. ಇಲ್ಲಿ ಸಂಬಂಧ ಬದಲಾಗುತ್ತದೆ. ಸೋದರತ್ತೆ ಚಿಕ್ಕಮ್ಮ ಆಗುತ್ತಾಳೆ. ಸೋದರ ಮಾವ ಚಿಕ್ಕಪ್ಪನಾಗುತ್ತಾನೆ.

ಮ್ಯಾಸಬೇಡರ ಜೀವನದಲ್ಲಿ ಆಧುನಿಕತೆ ಪ್ರವೇಶಿಸುತ್ತಿದೆ. ಹೆಂಗಸರು-ಗಂಡಸರು ಆಧುನಿಕ ಉಡುಪುಗಳನ್ನು ತೊಡುತ್ತಿದ್ದಾರೆ. ಆರ್ಥಿಕವಾಗಿ ಕೆಳಮಟ್ಟದಲ್ಲಿರುವವರು ಮಾತ್ರ ನೆರಿಕೆ ಅಥವಾ ಮಣ್ಣಿನ ಗೋಡೆಗಳಿಂದ ನಿರ್ಮಿತವಾದ ಗುಡಿಸಿಲಿನಲ್ಲಿ ಜೀವಿಸುತ್ತಿದ್ದಾರೆ. ಕೆಲವರು ಮಾಳಿಗೆ, ಕಡಪಕಲ್ಲಿನ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮನೆ ಕಟ್ಟುವಿಕೆಯಲ್ಲಿ ಹಿಂದೂ ಧರ್ಮದ ಸಂಪ್ರದಾಯಗಳು ಮತ್ತು ಆಧುನಿಕ ತಂತ್ರಜ್ಞಾನವು ಸೇರಿಕೊಂಡಿದೆ. ಆದರೂ ತಮ್ಮ ಸಂಪ್ರದಾಯಗಳ ಉಳಿವಿಗೆ ಒಂದೇ ಪ್ರದೇಶದಲ್ಲಿ ಗುಂಪು, ಗುಂಪಾಗಿ ವಾಸವಾಗಿದ್ದಾರೆ. ಅಣ್ಣ ತಮ್ಮಂದಿರು, ಒಂದು ಬೆಡಗಿಗೆ ಸೇರಿದವರು ಪಕ್ಕ ಪಕ್ಕದಲ್ಲಿಯೇ ಮನೆಗಳನ್ನು ಕಟ್ಟಿಕೊಂಡು ಒಟ್ಟಿಗೆ ವಾಸಿಸುತ್ತಿದ್ದಾರೆ. ಮ್ಯಾಸರ ಏಳುಕೇರಿಗಳಲ್ಲಿ ಇಂದು ಒಂದು ಕೇರಿ ಲೋಪವಾಗಿದೆ. ಅಂದರೆ ಮ್ಯಾಸಕೇರಿಯಲ್ಲಿ ಬೇರೆ ಜಾತಿಯ ಜನಮನೆ ಕಟ್ಟಿಕೊಂಡು ಮ್ಯಾಸರು ಉಳಿದ ಆರು ಕೇರಿಗೆ ಬಂದು ಸೇರಿಕೊಂಡಿದ್ದಾರೆ.

೨.೩ ತಿಮ್ಮಲಾಪುರ

ಹೊಸಪೇಟೆಯಿಂದ ಕೂಡ್ಲಿಗಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿ ೧೩ರ ಬಲಪಕ್ಕದಲ್ಲಿ ತಿಮ್ಮಲಾಪುರ ಬರುತ್ತದೆ. ಇದು ಹೊಸಪೇಟೆಯಿಂದ ೨೬ ಕಿ.ಮೀ. ದೂರದಲ್ಲಿದೆ. ಈ ಊರು ಮರಿಯಮ್ಮನ ಹಳ್ಳಿ ಹೋಬಳಿಗೆ ಸೇರಿದ್ದು, ಬಲಕನಹಟ್ಟಿ ಮಂಡಲಪಂಚಾಯಿತಿಗೆ ಸೇರಿರುವದು. ೧೯೯೧ರ ಜನಗಣತಿಯ ಪ್ರಕಾರ ಹಳ್ಳಿಯ ಜನಸಂಖ್ಯೆ ೨,೪೯೮. ಅದರಲ್ಲಿ ೧,೨೫೨ ಗಂಡಸರು, ೧,೨೪೬ ಹೆಂಗಸರು ಇದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ ೮೦೬ ಜನ ಬೇಡರು ಇದ್ದಾರೆ. ೪೦೨ ಗಂಡಸರು, ೪೦೪ ಹೆಂಗಸರು. ಊರಿನ ಒಟ್ಟು ವಿದ್ಯಾವಂತರ ಸಂಖ್ಯೆ ೪೬೬. ಅದರಲ್ಲಿ ೩೪೩ ಗಂಡಸರು ಮತ್ತು ೧೨೩ ಹೆಂಗಸರು ವಿದ್ಯಾವಂತರು.

ತಿಮ್ಮಲಾಪುರದ ದಕ್ಷಿಣದಲ್ಲಿ ಬಿದ್ದು ಮಟ್ಟಿ, ಗೆದ್ದಗುಡ್ಡ, ಕೋಡಿಗುಡ್ಡ ಮೊದಲಾದ ಬೆಟ್ಟಗಳಿವೆ. ನಡುವಿನ ಕೆರೆ, ಜಂಬಯ್ಯನ ಕೆರೆ, ಡಪ್ಪದೋಣಿ ಕೆರೆ, ಬಡಕ ಕೆರೆ ಮೊದಲಾದ ಹಳ್ಳಗಳು ಹರಿಯುತ್ತವೆ. ಜಂಬಯ್ಯನ ಕೆರೆ, ಫೊತಲ ಕಟ್ಟೆ ಕೆರೆ, ನಡುವಲ ಕೆರೆ ಮುಂತಾದ ಕೆರೆಗಳು ಕಂಡು ಬರುತ್ತವೆ. ಸುತ್ತಲು ಇರುವ ಗೆದ್ದಿಗುಡ್ಡ, ಬಿದ್ದುಮಟ್ಟಿ, ಕೋಡಿಗುಡ್ಡಗಳಲ್ಲಿ ಗವಿಗಳಿವೆ.

ತಿಮ್ಮಲಾಪುರದಲ್ಲಿ ಲಿಂಗಾಯಿತ, ಶೆಟ್ಟಿ, ಬ್ರಾಹ್ಮಣ, ಜೈನ, ವಡ್ಡ, ಕುಂಬಾರ, ಹರಿಜನ, ಬಾರಿಕ ಮುಂತಾದ ಜಾತಿಯವರಿದ್ದರೂ ಊರ ಬೇಡರು ಬಹು ಸಂಖ್ಯಾತರಾಗಿದ್ದಾರೆ. ಊರ ನಾಯಕರ ಮಾತೃ ಭಾಷೆ ಕನ್ನಡವಾಗಿದೆ. ಊರಿನಲ್ಲಿ ಒಂದು ಅಂಗನವಾಡಿ ಶಾಲೆ ಎರಡು ಹೋಟೆಲ್, ಎರಡು ಮೂರು ದಿನಸಿ ಅಂಗಡಿಗಳು ಇವೆ. ಪ್ರಾಥಮಿಕ ಶಾಲೆ ಇದ್ದು, ಪ್ರೌಢಶಾಲೆಗೆ ತೆಲುಗು ಬಾಳಕ್ಕೆ ಹೋಗಬೇಕು. ಕಾಲೇಜಿಗಾಗಿ ಮರಿಯಮ್ಮನ ಹಳ್ಳಿ ಅಥವಾ ಹೊಸಪೇಟೆಗೆ ಬರಬೇಕು. ಆಸ್ಪತ್ರೆ, ಬ್ಯಾಂಕು ಸೌಲಭ್ಯವಿಲ್ಲ. ಬಸ್ಸ್ ನಿಲ್ದಾಣ ಸಹ ಇಲ್ಲ. ಮುಖ್ಯ ರಸ್ತೆಯಲ್ಲಿ ಕೂಡ್ಲಿಗಿ -ಹೊಸಪೇಟೆಗೆ ಹೋಗುವ ಬಸ್ಸುಗಳು ನಿಂತು ಹೋಗುತ್ತವೆ. ಒಂದು ಎರಡು ಬಸ್ಸುಗಳು ಮಾತ್ರ ಇಲ್ಲಿ ನಿಲ್ಲುತ್ತವೆ.

ವಿಜಯನಗರದ ಕಾಲದಲ್ಲಿ ಈ ಊರು ಕಟ್ಟಲ್ಪಟ್ಟಿತೆಂದು, ತಿಮ್ಮರಸಯ್ಯನು ತನ್ನ ಹೆಂಡತಿ ತಿರುಮಲಾದೇವಿಯ ನೆನಪಿಗಾಗಿ ಕಟ್ಟಿಸಿದ ತಿರುಮಲಾಪುರ ತಿಮ್ಮಲಾಪುರವಾಗಿದೆ ಎಂದು ವಿಶ್ವಸಿದೆ. ಆದರೆ ಗೋಪಿನಾಥ ದೇವಾಲಯವು ಕ್ರಿ.ಶ. ೧೫೩೯ ರ ಶಾಸನವನ್ನು ನಿರ್ಮಿಸಿದ ಬಯಕಾರ ರಾಮಪ್ಪಯ್ಯನ ತಂದೆಯ ಹೆಸರು ಪಿರಿಯ ತಿಮ್ಮರಸಯ್ಯ, ತಾಯಿಯ ಹೆಸರು ಪಿರಿಯ ಲಕ್ಕಲಿಸಮ್ಮ ಎಂದು ಉಲ್ಲೇಖಿತಗೊಂಡಿದೆ. ತಿಮ್ಮರಸಯ್ಯನ ಹೆಂಡತಿ ಲಕ್ಕಲಿಸಮ್ಮವಾಗಿದ್ದು ತಿರುಮಲಾಂಬೆ ಅಲ್ಲ. ತಿಮ್ಮಾಪುರವು ಕಾಲಕ್ರಮೇಣ ತಿಮ್ಮಲಾಪುರವಾಗಿರ ಬೇಕು. ತಿಮ್ಮಲಾಪುರವನ್ನು ಹಾಳ್ ತಿಮ್ಮಲಾಪುರ ಎಂದೂ ಕರೆಯುತ್ತಾರೆ.

ತಿಮ್ಮಲಾಪುರದಲ್ಲಿ ವಿಜಯನಗರ ಕಾಲದ ನಾಲ್ಕೈದು ಗುಡಿಗಳಿವೆ. ಅವುಗಳಲ್ಲಿ ಶಿವನ ಮತ್ತು ಗೋಪಾಲ ಕೃಷ್ಣನ ಗುಡಿ ಪ್ರಮುಖವಾಗಿವೆ. ವೀರಭದ್ರ, ಆಂಜನೇಯ ಮುಂತಾದ ಸಣ್ಣ ಗುಡಿಗಳಿವೆ. ಕೋಟೆಯ ಗೋಡೆ, ಅಗಸೆ ಮತ್ತು ಹಳೆಯ ಬಜಾರಿನ ಅವಶೇಷಗಳು ಉಳಿದಿವೆ. ಈ ಪ್ರದೇಶದಿಂದ ಸುಮಾರು ಒಂದುವರೆ ಕಿ.ಮೀ. ದೂರದಲ್ಲಿದೆ ಜನವಸತಿ ಇರುವ ತಿಮ್ಮಲಾಪುರ. ಇಲ್ಲಿ ೧೯೫೨ರ ನಂತರದಿಂದ ಜನವಸತಿ ಆರಂಭವಾಗಿದೆ. ೧೯೫೪ರಲ್ಲಿ ತುಂಗಭದ್ರ ಅಣೆಕಟ್ಟನ್ನು ನಿರ್ಮಿಸಿದಾಗ ಅನೇಕ ಹಳ್ಳಿಗಳು ಮುಳುಗಡೆಯಾಗುವ ಕಾರಣ ಸರ್ಕಾರ ಮುನ್ನೆಚ್ಚರಿಕೆವಹಿಸಿ ಈ ಹಳ್ಳಿಯ ನಿವಾಸಿಗಳಿಗೆ ಬೇರೆ ಕಡೆ ವಸತಿ ವ್ಯವಸ್ಥೆಮಾಡಿತು. ನಾರಾಯಣ ದೇವರ ಕೆರೆಯ ಪಕ್ಕದ ಹಳ್ಳಿಳ್ಳಿಯಿಂದ ಬಂದು ತಿಮ್ಮಲಾಪುರದ ಕಾಡಿನಲ್ಲಿ ವಸತಿ ಆರಂಭಿಸಿದರು. ಹೀಗೆ ಬಂದವರಲ್ಲಿ ಊರ ನಾಯಕರೇ ಹೆಚ್ಚಾಗಿದ್ದರು. ಶ್ರೀಮಂತರು, ಮೇಲ್ವರ್ಗದವರು ಹಗರಿಬೊಮ್ಮನ ಹಳ್ಳಿ, ಮರಿಯಮ್ಮನ ಹಳ್ಳಿ ಮತ್ತು ಹೊಸಪೇಟೆಗೆ ವಲಸೆ ಹೋದರು.

ತಿಮ್ಮಲಾಪುರಕ್ಕೆ ಬಂದ ಒಂದೊಂದು ಕುಟುಂಬಕ್ಕೆ ಐದು ಎಕರೆ ಜಮೀನು ಮತ್ತು ಮನೆ ಕಟ್ಟಿಕೊಳ್ಳಲು ಜಾಗ ಹಾಗೂ ಮರಗಳನ್ನು ಕಡೆದುಕೊಳ್ಳಲು ಅನುಮತಿ ನೀಡಿತು. ಆರಂಭದಲ್ಲಿ ಸುಮಾರು ೮೦ ಕುಟುಂಬಗಳು ಮಾತ್ರ ಇಲ್ಲಿಗೆ ಬಂದು ನೆಲಸಿದವಂತೆ ಇಂದು ಸುಮಾರು ೨೫೦ ರಿಂದ ೩೦೦ ಕುಟುಂಬಗಳು ವಾಸವಾಗಿವೆ. ಊರ ಬೇಡರ ಜತೆ ಎರಡು ಶೆಟ್ಟರ, ಒಂದು ಜಂಗಮರ, ಒಂದು ಲಿಂಗಾಯಿತರ, ಒಂದು ಬ್ರಾಹ್ಮಣರ ಕುಟುಂಬಗಳು ಬಂದು ನೆಲಸಿದವು. ನಂತರ ಒಂದು ಜೈನ ಕುಟುಂಬ

ಬಂದಿತು. ನಂತರ ದಿನಗಳಲ್ಲಿ ಹರಿಜನ ಬಂದು ಊರಿನ ಈಶಾನ್ಯ ದಿಕ್ಕಿನಲ್ಲಿ ವಾಸ ಮಾಡಲಾರಂಭಿಸಿದರು. ಊರಿನ ಮಧ್ಯ ಬ್ರಾಹ್ಮಣ, ಲಿಂಗಾಯಿತರ ಮನೆಗಳು ಬಂದು ಈ ಮನೆಗಳ ಸುತ್ತ ನಾಯಕರ ಮನೆಗಳಿವೆ. ಊರಿನ ಹೊರಭಾಗದಲ್ಲಿ ಹರಿಜನ ಇದ್ದಾರೆ. ವಾಯುವ್ಯ ಭಾಗದಲ್ಲಿ ಎಳೆಂಟು ಕುಂಬಾರರ ಮನೆಗಳಿವೆ. ಈ ಊರಿನಲ್ಲಿ ನಾಯಕರ ನಂತರ ಹರಿಜನ ಸಂಖ್ಯೆ ಹೆಚ್ಚಾಗಿದೆ. ಇದೀ ಊರಿಗೆ ಒಂದೇ ಬಾವಿಯಿದ್ದು ಇತ್ತೀಚೆಗೆ ಬೋರು, ಟ್ಯಾಂಕುಗಳು ಬಂದಿವೆ.

ಹಳ್ಳಳ್ಳಿಯಲ್ಲಿ ವಾಸವಾಗಿದ್ದಾಗ ಇವರಿಗೆ ಭೂಮಿಯ ಮೇಲೆ ಒಡೆತನವಿರಲಿಲ್ಲ. ಲಿಂಗಾಯಿತರ ಅಥವಾ ಬ್ರಾಹ್ಮಣರ ಭೂಮಿಯಲ್ಲಿ ದುಡಿಯುತ್ತಿದ್ದರು. ಇಲ್ಲಿಗೆ ಬಂದ ಮೇಲೆ ಭೂಮಿಯ ಮೇಲೆ ಒಡೆತನ ಸಿಕ್ಕಿತು. ಜನಸಂಖ್ಯೆ ಹೆಚ್ಚಿದಂತೆ ಕುಟುಂಬಗಳು ಭಾಗವಾದಂತೆ ಭೂಮಿಯು ಅಣ್ಣ ತಮ್ಮಂದಿರಲ್ಲಿ ಹಂಚಿಹೋಗಿದೆ. ಇವರ ಬಳಿ ಇರುವ ಭೂಮಿಯು ಒಂದು ಕುಟುಂಬದ ನಿರ್ವಹಣೆಗೆ ಸಾಕಾಗುವಷ್ಟು ಬೆಳೆಯನ್ನು ಬೆಳೆಯಲು ಅಸಮರ್ಥವಾಗಿವೆ. ಜತೆಗೆ ಹಿಂದೆ ಇದ್ದ ಕೆರೆಗಳು ವಿರಳ ಮಳೆಯ ಕಾರಣ ಬತ್ತಿಹೋಗಿವೆ. ಹಾಗಾಗಿ ವ್ಯವಸಾಯ ಕಷ್ಟವಾಗಿದೆ. ಇವರು ತಮ್ಮ ಹೊಲದ ಜತೆ ಬೇರೆಯವರ ಹೊಲಗಳಲ್ಲಿ ಕೂಲಿ ಕೆಲಸ ಮಾಡುವುದು ಅನಿವಾರ್ಯವಾಗಿದೆ. ಸುಗ್ಗಿಯ ಕಾಲ ಮುಗಿದ ನಂತರ ಜೋಳಗವನ್ನು ಹಗೇವುಗಳಲ್ಲಿ ಹಾಕಿ ನಾಲ್ಕೈದು ತಿಂಗಳು ಹೊಸಪೇಟೆ, ದಾವಣಗೆರೆ ಮುಂತಾದ ನಗರಗಳಿಗೆ ಜನದುಡಿಮೆಯುಹೋಗುತ್ತಾರೆ. ನದಿಯ ದಂಡೆಯಲ್ಲಿ ನೀರಾವರಿ ಭೂಮಿ ಪಡೆಯದೆ ಏಕೆ ಈ ಪ್ರದೇಶಕ್ಕೆ ಬಂದಿರುವಿರಿ ? ಎಂದರೆ, ತಮ್ಮ ಹಿರಿಯರು ದಿನದ ೨೪ಗಂಟೆ, ವರ್ಷವಿಡಿ ದುಡಿಯಲು ಇಷ್ಟ ಪಡದೆ ಈ ಊರನ್ನು ಆಯ್ಕೆ ಮಾಡಿಕೊಂಡರು ಎನ್ನುತ್ತಾರೆ.

ಈ ಪ್ರದೇಶದ ಆಯ್ಕೆಗೆ ಅನೇಕ ಕಾರಣಗಳು ಕಂಡು ಬರುತ್ತವೆ.

೧. ಅಂದು ಈ ಪ್ರದೇಶದ ಸುತ್ತಲು ಕೆರೆಗಳು ತುಂಬಿ ವ್ಯವಸಾಯಕ್ಕೆ ತೊಂದರೆಯಿರಲಿಲ್ಲ.

೨. ಕಾಡು ಸಮೃದ್ಧವಾಗಿತ್ತು. ಹಸು, ಕುರಿಗಳನ್ನು ಮೇಯಿಸಲು, ಬೇಟೆಯಾಡಲು, ಅನುಕೂಲವಾಗಿತ್ತು ಹಾಗೂ ಮರ, ಸೌದೆ ಇತ್ಯಾದಿಗಳು ಸುಲಭದಲ್ಲಿ ದೊರೆಯುತ್ತಿದ್ದವು.

೩. ಪ್ರದೇಶದ ಸುತ್ತ ಗುಡ್ಡಗಾಡು ಪ್ರದೇಶವಿದೆ.

೪. ನದಿ ಪ್ರವಾಹ ಬಂದಾಗ ಆಗುವಂತ ತೊಂದರೆ ಇಲ್ಲ.

ಬೇಡರು ಮೂಲತಃ ಅಡವಿ, ಗುಡ್ಡಗಾಡುಗಳಲ್ಲಿ ವಾಸಿಸುವ ಸಮುದಾಯ. ಕೃಷಿಗಿಂತ ಬೇಟೆ, ಪಶುಪಾಲನೆಯಲ್ಲಿ ಆಸಕ್ತಿ ಹೆಚ್ಚು. ಇವುಗಳ ಆಕರ್ಷಣೆಯಿಂದಲೇ ಈ ಜನಾಂಗ ಬಂದಿರ ಬೇಕು. ಆದರೆ ಇಂದು ಪರಿಸರದಲ್ಲಿ ತೀವ್ರ ಬದಲಾವಣೆ ಉಂಟಾಗಿದೆ. ಮಳೆ ಇಲ್ಲದೆ ಹಳ್ಳ, ಕೊಳ್ಳಗಳು ಬತ್ತಿವೆ. ಅರಣ್ಯ ನಾಶದಿಂದ ಪ್ರಾಣಿಗಳ ಸಂಖ್ಯೆ ಕಡಿಮೆಯಾಗಿದೆ. ಹೊಲದಲ್ಲಿ ವರ್ಷಕ್ಕೆ ಬೇಕಾದಷ್ಟು ಆಹಾರದ ಉತ್ಪಾದನೆಯಾಗುತ್ತಿಲ್ಲ. ಊರಿನ ಜನ ಬಡತನದ ರೇಖೆಗಿಂತ ಕೆಳಮಟ್ಟದ ಜೀವನ ನಡೆಸುತ್ತಿದ್ದಾರೆ.

ಇಲ್ಲಿ ಪ್ರಮುಖವಾಗಿ ಆಹಾರ ಬೆಳೆಗಳಾದ ಜೋಳ, ಮೆಕ್ಕೆಜೋಳ, ಸಜ್ಜೆ, ನವಣೆಯನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆ ಬೆಳೆಯುವುದಿಲ್ಲ. ಗುಡಿ ಕೈಗಾರಿಕೆಯೂ ಇಲ್ಲ. ಕುಂಬಾರರು ಮಾತ್ರ ಮಣ್ಣಿನ ತೈವುಗಳನ್ನು ಮಾಡಿ ಮಾರಾಟ ಮಾಡುತ್ತಾರೆ. ಆರ್ಥಿಕ ಅಭಿವೃದ್ಧಿಗೆ ನೈಸರ್ಗಿಕ ಸಂಪತ್ತಿನ ಕೊರತೆಯೂ ಇಲ್ಲದೆ.

ಊರನಾಯಕರು ಹೆಚ್ಚಾಗಿರುವ ಈ ಊರಿನಲ್ಲಿ ಜನರು ವ್ಯಾಸ ಬೇಡರಂತೆ ತಮ್ಮ ಸಮುದಾಯದ ಲಕ್ಷಣವನ್ನುಳಿಸಿ ಕೊಳ್ಳದೆ ಹಿಂದೂ ಧರ್ಮದಲ್ಲಿ ಸೇರಿಕೊಂಡಿದ್ದಾರೆ. ಹಿಂದೂ ಧರ್ಮದ ವಿಚಾರ, ಸಂಪ್ರದಾಯಗಳನ್ನು ಮೈಗೂಡಿಸಿಕೊಂಡಿದ್ದಾರೆ. ಮದುವೆ ಸಂದರ್ಭದಲ್ಲಿ ಮನೆ ಕಟ್ಟುವಾಗ ಬ್ರಾಹ್ಮಣರ ಅಥವಾ ಜಂಗಮರ ನೆರವನ್ನು ಪಡೆದುಕೊಳ್ಳುತ್ತಿದ್ದಾರೆ. ತಮ್ಮದೇ ಆದ ದೇವರು ಅಥವಾ ಭಾಷೆ ಇವರಿಗಿಲ್ಲ. ಇವರು ಕನ್ನಡವನ್ನೇ ಮಾತನಾಡುತ್ತಾರೆ. ಸ್ಥಳೀಯ ದೇವತೆಗಳಾದ ಹುಲಿಗವ್ವ ಮತ್ತು ಹನುಮಂತನನ್ನು ಮನೆ ದೇವರು ಎಂದು ಪೂಜಿಸುತ್ತಾರೆ. ಆದರೆ ಇವರಲ್ಲಿಯೂ ವ್ಯಾಸ ಬೇಡರಲ್ಲಿರುವಂತೆ ಬೆಡಗುಗಳಿವೆ. ಸ್ವಬೆಡಗಿನಲ್ಲಿ ವೈವಾಹಿಕ ಸಂಬಂಧವಿಲ್ಲ. ಈ ಸಮುದಾಯದಲ್ಲಿಯು ಅವಿಭಕ್ತ ಕುಟುಂಬ ವ್ಯವಸ್ಥೆ ಕಣ್ಮರೆಯಾಗುತ್ತಿದೆ. ಜೀವನ ನಿರ್ವಹಣೆಗಾಗಿ ಪ್ರತ್ಯೇಕ ಕುಟುಂಗಳು ಅಸ್ತಿತ್ವಕ್ಕೆ ಬಂದಿವೆ.

ಸಮಾಜದಲ್ಲಿ ದೇವದಾಸಿ ಪದ್ಧತಿ ಇಂದಿಗೂ ಉಳಿದುಕೊಂಡು ಬಂದಿದೆ. ಆರ್ಥಿಕ, ಸಾಮಾಜಿಕ ಕಾರಣದಿಂದಲೇ ಮಕ್ಕಳನ್ನು ದೇವದಾಸಿಗಳನ್ನಾಗಿ ಬಿಡುತ್ತಿದ್ದಾರೆ. ತಮ್ಮ ಹೆಣ್ಣು ಮಕ್ಕಳನ್ನು ಹನುಮಂತನ ಗುಡಿಗೆ ಕರೆದುಕೊಂಡು ಹೋಗಿ ಮುದ್ರೆ ಹಾಕಿಸುತ್ತಾರೆ. ಇಲ್ಲವೆ ಹುಲಿಗೆಗೆ ಕರೆದುಕೊಂಡು

ಹೋಗಿ ಕವಡಿ ಕಟ್ಟಿಸಿಕೊಂಡು ಬರುತ್ತಾರೆ. ಇವರು ಆಧಾರಿಸಿರುವ ಜನರೂ ಬಡವರೇ ಆಗಿರುವ ಕಾರಣ ಲೇಸಿಯ ಆರ್ಥಿಕ ಬದುಕೂ ಬೇರೆಯವರಿಗಿಂತ ಯಾವುದೇ ರೀತಿಯಲ್ಲಿ ಉನ್ನತವಾಗಿಲ್ಲ.

ಊರಿನ ಮತ್ತು ಮನೆಯ ಯಜಮಾನಿಕೆ ಗಂಡಸರ ಕೈಯಲ್ಲಿದೆ. ದೇವದಾಸಿಯರನ್ನು ಬಿಟ್ಟು ಬೇರೆ ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕಿಲ್ಲ. ಊರಿನ ಎಲ್ಲಾ ಜನ ದುಡಿಯುವ ವರ್ಗದವರೇ ಆಗಿರುವುದರಿಂದ ಹೆಣ್ಣು ಗಂಡುಗಳಲ್ಲಿ ಸಮಾನತೆ ಇದೆ. ಹೆಣ್ಣು ಮಕ್ಕಳಿಗೆ ದೇವರ ಗುಡಿಯಲ್ಲಿ ಪ್ರವೇಶವಿದೆ. ಹಾಗೂ ಹೆಂಗಸರು ದೇವರ ಪೂಜೆ ಮಾಡುತ್ತಾರೆ. ಇವರು ಮನೆಗಳಲ್ಲಿ ದೇವರಿಗೆ ಪ್ರತ್ಯೇಕ ಜಗಲಿಗಳನ್ನೇ ಕಟ್ಟಿಕೊಂಡಿದ್ದಾರೆ. ಇವರಲ್ಲಿ ಗಂಡಸರಿಗೆ ಮುದ್ರೆ ಹಾಕಿಸಿಕೊಳ್ಳದೆ ಮದುವೆ ಮಾಡುವಂತಿಲ್ಲ.

ಇಂದು ಊರ ಬೇಡರು ಸಂಪೂರ್ಣವಾಗಿ ಬೇಟೆಯನ್ನು ಕೈಬಿಟ್ಟಿದ್ದಾರೆ. ಇವರು ಕೃಷಿಕರಾಗಿ ಪರಿವರ್ತಿತರಾಗಿರುವರು. ಆಚರಣೆಯಲ್ಲಿ ಮಾತ್ರ ಬೇಟೆ ಉಳಿದುಕೊಂಡು ಬಂದಿದೆ. ಊರಿನ ಕರಿಯಮ್ಮನ ಜಾತ್ರೆಯಲ್ಲಿ ಬ್ಯಾಟಿ ಕೊಡುತ್ತಾರೆ. ಇದು ಮೂರು ವರ್ಷಕ್ಕೊಮ್ಮೆ ಅಥವಾ ಮಳೆ ಬೆಳೆ ಚೆನ್ನಾಗಿ ಆದಾಗ ಈ ಜಾತ್ರೆಯನ್ನು ಮಾಡುತ್ತಾರೆ. ಇವರು ಮನೆಯಲ್ಲಿ ಪ್ರತಿ ವರ್ಷ ಹುಲಿಗೆಮ್ಮನ ಪೂಜೆ ಮಾಡುತ್ತಾರೆ. ಆದರೆ ಹರಿಕೆ ಅಥವಾ ಮದುವೆ ಸಂದರ್ಭದಲ್ಲಿ ಮಾತ್ರ ಹುಲಿಗೆಮ್ಮನಿಗೆ ಬ್ಯಾಟಿ ಕಡಿಯುತ್ತಾರೆ. ಇವರು ಮಾಂಸಹಾರಿಗಳಾಗಿದ್ದರೂ ಮುಲ್ಲಾ ಚೂರಿ ಹಾಕದೆ ಯಾವುದೇ ಪ್ರಾಣಿಯ ಮಾಂಸವನ್ನು ತಿನ್ನುವುದಿಲ್ಲ. ಇವರಲ್ಲಿ ಕೋಳಿ, ಹೆಂಡ, ಈಚಲ ಬಳಕೆಯಿದೆ.

ಹಿಂದೆ ಇವರು ವಾಸವಾಗಿದ್ದ ಊರಿನಲ್ಲಿ (ಹಳ್ಳಳ್ಳಿಯಲ್ಲಿ) ಮೇಲ್ಮುದ್ದ ಮನೆಗಳಿದ್ದವಂತೆ. ಆದರೆ ಇಂದು ವಲಸೆ ಮತ್ತು ಆರ್ಥಿಕ ಕಾರಣದಿಂದಾಗಿ ನೆರಿಕೆ, ಮಣ್ಣಿನ ಗೋಡೆಯ ಚಪ್ಪರದ, ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಇದೇ ಊರಿನಲ್ಲಿಯೇ ಹತ್ತು ಅಥವಾ ಹದಿನೈದು ಮಾಳಿಗೆ ಮನೆಗಳನ್ನುಬಿಟ್ಟರೆ ಉಳಿದೆಲ್ಲಾ ಮನೆಗಳು ಹುಲ್ಲಿನ ಮನೆಗಳೇ.

ಮೊದಲೇ ಹೇಳಿದಂತೆ ಇಲ್ಲಿ ಒಂದೇ ಬುಡಕಟ್ಟು ಸಮುದಾಯಕ್ಕೆ ಸೇರಿದ ಎರಡು ಪ್ರಮುಖ ಉಪ ಪಂಗಡಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಎರಡು ಉಪಪಂಗಡಗಳ ಮನೆಗಳ ರಚನೆಯಲ್ಲಿ, ಮನೆ ಕಟ್ಟಲು ಬಳಸುವ ವಸ್ತುಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಕಮಲಾಪುರದ ಮನೆಗಳು ಸುಮಾರು ನೂರು ವರ್ಷಕ್ಕೂ ಹಿಂದಿನ ಮನೆಗಳಾಗಿವೆ. ಇವು ಮಾಳಿಗೆ ಮನೆಗಳಾಗಿದ್ದು ಚೌಕಾಕಾರದಲ್ಲಿವೆ. ಕೆಲವು ಆಯಾತಕಾರದಲ್ಲಿವೆ. ಆರ್ಥಿಕವಾಗಿ ಹಿಂದುಳಿದವರು ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಆದರೆ ತಿಮ್ಮಲಾಪುರದಲ್ಲಿ ಶೇಕಡ ೯೦ ರಷ್ಟು ಗುಡಿಸಲುಗಳಿವೆ. ಊರಿನ ಸುತ್ತಲೂ ಸಿಗುವ ಸಂಪನ್ಮೂಲಗಳಿಂದಲೇ ಈ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ತಾಂತ್ರಿಕ ಕಾರಣದಿಂದ ಮಾಳಿಗೆ ಮನೆಯು ಮೇಲ್ಛಾವಣೆಯೂ ಸಮತಟ್ಟಾಗಿಯೂ ಗುಡಿಸಲುಗಳ ಮೇಲ್ಛಾವಣೆಗಳು ಇಳಿಜಾರಾಗಿರುತ್ತವೆ.

ವ್ಯಾಸಬೇಡರು ಬುಡಕಟ್ಟಿನ ಸಾಮೂಹಿಕ ಜೀವನಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿರುವ ಕಾರಣ ಮತ್ತು ಬೇರೆಯವರ ಸಂಸ್ಕೃತಿಗಳನ್ನು, ನಡುವಳಿಕೆಗಳನ್ನು ವಿರೋಧಿಸುವುದರಿಂದ ಇವರ ಮನೆಯ ನಿರ್ಮಾಣದಲ್ಲಿ ದಿಕ್ಕುಗಳು ಪ್ರಮುಖ ಪಾತ್ರವನ್ನುವಹಿಸುವುದಿಲ್ಲ. ಆದರೆ ಊರ ನಾಯಕರು ಬ್ರಾಹ್ಮಣರ ಅಥವಾ ಜಂಗಮರ ಸಲಹೆಯ ಮೇರೆಗೆ ಮನೆಗಳನ್ನು ಕಟ್ಟುವುದರಿಂದ ದಿಕ್ಕುಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ತಿಮ್ಮಲಾಪುರದಲ್ಲಿ ನಾಯಕರ ಒಂದು ಮನೆಯೂ ಪೂರ್ವ ದಿಕ್ಕಿಗೆ ಮುಖ ಮಾಡಿಲ್ಲ. ದಕ್ಷಿಣಕ್ಕೆ ಕೆಲವು ಮನೆಗಳು ಬಾಗಿಲುಗಳಿದ್ದರೂ ಹೆಚ್ಚಿನ ಮನೆಗಳು ಉತ್ತರ ಮತ್ತು ಪೂರ್ವಕ್ಕೆ ಮುಖಮಾಡಿವೆ. ವಾಸ್ತುವಿನ ಪ್ರಕಾರ '' ಕಪ್ಪು ಜನ ದಕ್ಷಿಣಕ್ಕೆ ಬಾಗಿಲು ಮಾಡಬಾರದು '' . ದಕ್ಷಿಣ ಯಮನ ದಿಕ್ಕು . ' ಈ ದಿಕ್ಕಿನ ಬಾಗಿಲ ಮೂಲಕ ಮಾಂಸ ಮದ್ಯ ತಿನ್ನುವವರು ಓಡಾಡಬಾರದು ಎಂಬುದು ಜನರ ಅಭಿಪ್ರಾಯ. ಇವರು ಮಲಗುವಾಗಲೂ ದಕ್ಷಿಣ ಮತ್ತು ಪಶ್ಚಿಮಕ್ಕೆ ತಲೆ ಮಾಡಿ ಮಲಗುತ್ತಾರೆ. ಹೀಗೆ ಏಕೆ ಎಂದು ಪ್ರಶ್ನಿಸಿದರೆ ಈ ದಿಕ್ಕುಗಳಲ್ಲಿ ಕ್ಷುದ್ರ ದೇವತೆಗಳು ವಾಸವಾಗಿದ್ದಾರೆ ಆದ್ದರಿಂದ ಅವರಿಗೆ ಕಾಲು ಮಾಡಬಾರದು ಎಂದು ಹೇಳುವರು ಅದೇ ಕಾರಣ ಮನೆಯ ಬಾಗಿಲು ಈ ದಿಕ್ಕಿಗೆ ಇರುವುದಿಲ್ಲ. ಆದರೆ ಕಮಲಾಪುರದಲ್ಲಿ ಇಂತಹ ನಿಯಮವಿಲ್ಲ. ಎಲ್ಲಾ ದಿಕ್ಕುಗಳ ಕಡೆಗೆ ಬಾಗಿಲು ಮಾಡಿರುವ ಮನೆಗಳು ಕಂಡು ಬರುತ್ತವೆ.

ವ್ಯವಸಾಯಕರಲ್ಲಿ ದೇವರ ಕೋಣೆಯಾಗಲಿ ಅಥವಾ ಜಗಲಿಯಾಗಲಿ ಕಂಡು ಬರುವುದಿಲ್ಲ. ಒಂದುವೇಳೆ ದೇವರ ಜಗಲಿಯಿದ್ದರೆ ದೇವರ ಮೂರ್ತಿಗಳು ಇರುವುದಿಲ್ಲ. ಗೋಡೆಗೆ ಸೆಗಣಿ, ಅರಿಶಿಣ, ಕುಂಕುಮಗಳನ್ನಿಟ್ಟು ಪೂಜಿಸುತ್ತಾರೆ. ಇವರು ದೇವರ ಪೌಳಿಗೆ ಹೋಗುವರು. ಇಲ್ಲಿ ದಿನನಿತ್ಯ ದೇವರಪೂಜೆ ನಡೆಯುವುದಿಲ್ಲ. ದೇವರ ವಾರಕ್ಕೊಮ್ಮೆ (ಶನಿವಾರ ಅಥವಾ ಸೋಮವಾರ) ಪೂಜೆ ಮಾಡುತ್ತಾರೆ. ಯುಗಾದಿ ಅಥವಾ ದಸರಾದಲ್ಲಿ ಹಿರಿಯರನ್ನು ಪೂಜಿಸುವಾಗ ನಡುಮನೆಯಲ್ಲಿ ಕೊಡ ತುಂಬಿಟ್ಟು ಪೂಜೆ ಮಾಡುವರು. ತಿಮ್ಮಲಾಪುರದ ಪ್ರತಿಯೊಬ್ಬ ಬೇಡರ ಮನೆಯಲ್ಲಿ ದೇವರ ಮನೆ ಅಥವಾ ಜಗಲಿ ಇರುತ್ತದೆ. ಇವರು ಆಂಜನೇಯ, ಹುಲಿಗೆಮ್ಮನ ಫೋಟೋ ಇಟ್ಟು, ಗೋಪಾಳ, ಪಡ್ಲಿಗಿ, ಗಂಡುಗೊಡ್ಲಿ, ಬಲ್ಲೆವು, ಗರುಡಗಂಬ ಮುಂತಾದ ವಸ್ತುಗಳನ್ನು ಶನಿವಾರ ಅಥವಾ ಸೋಮವಾರ ಪೂಜೆ ಮಾಡುತ್ತಾರೆ. ಕೆಲವು ಮನೆಗಳಲ್ಲಿ ಹುಲಿಗೆಮ್ಮನ ಕಂಬವಿದೆ.

ಇವೆರಡೂ ಊರುಗಳ ಅಧ್ಯಯನ ಕೈಗೊಂಡಾಗ ಇಂಥ ಅನೇಕ ವಿಭಿನ್ನ, ವೈವಿಧ್ಯಮಯ, ವಿಶಿಷ್ಟ ಅಂಶಗಳು ಬೆಳಕಿಗೆ ಬಂದವು. ಈ ರೀತಿಯ ಹಳ್ಳಿಗಳ ತೌಲನಿಕ ಅಧ್ಯಯನಕ್ಕೆ ಇವೆರಡೂ ಊರುಗಳ ಆಯ್ಕೆ ಸರಿ ಎನಿಸಿದ ನಂತರವೇ ಈ ಊರುಗಳಲ್ಲಿ ಕ್ಷೇತ್ರಕಾರ್ಯ ನಡೆಸಲಾಯಿತು.

ಅಧ್ಯಾಯ- ೩

ಅಧ್ಯಯನ ವಿಧಾನ

೩.೧ ಸಾಹಿತ್ಯ ಮೂಲಾಧಾರ
೩.೨ ಕ್ಷೇತ್ರ ಕಾರ್ಯ
೩.೩ ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆ

೨

ಅಧ್ಯಯನ ವಿಧಾನ


ಬುಡಕಟ್ಟು ಸಂಸ್ಕೃತಿಗಳ ಅಧ್ಯಯನದ ಆರಂಭದಲ್ಲಿ ಕೇವಲ ಸಂಗ್ರಹಣೆ, ದಾಖಲಾತಿಗೆ ಗಮನ ನೀಡಲಾಗಿತ್ತು. ತಾವು ದಾಖಲಿಸದಿದ್ದರೆ ಆಧುನಿಕತೆಯ ಪ್ರಭಾವದಿಂದ ಬುಡಕಟ್ಟು ಸಂಸ್ಕೃತಿ ನಶಿಸಿ ಹೋಗುವುದು ಎಂಬ ಭಯಕ್ಕೆ ಹೆಚ್ಚು ಹೆಚ್ಚು ದಾಖಲೆಗಳ ಸಂಗ್ರಹಣ ಕಾರ್ಯ ನಡೆಯಿತು. ದಾಖಲಾದ ಮಾಹಿತಿಯನ್ನು ವಿಮರ್ಶೆ ಅಥವಾ ವಿಶ್ಲೇಷಣೆ ಮಾಡುವ ಪ್ರಯತ್ನವನ್ನು ಹೆಚ್ಚಾಗಿ ಕೈಗೊಳ್ಳಲಿಲ್ಲ. ಕಾಲಕ್ರಮೇಣ ಅಧ್ಯಯನದ ವಿಧಾನದಲ್ಲಿ ಮಾರ್ಪಾಡು ಕಂಡು ಬಂತು. ಕ್ಷೇತ್ರಕಾರ್ಯ, ವಿಶ್ಲೇಷಣೆ, ವ್ಯಾಖ್ಯಾನ ಮುಂತಾದ ವೈಜ್ಞಾನಿಕ ಅಧ್ಯಯನ ವಿಧಾನಗಳು ನಡೆಯಲಾರಂಭಿಸಿದವು.

ಪ್ರಸ್ತುತ ಬೇಡರ ಮನೆ, ಸಮಾಜ ಮತ್ತು ಸಂಸ್ಕೃತಿ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆ, ಸಂಗ್ರಹಿಸಿದ ಮಾಹಿತಿಯ ವಿವರಣೆ ಮತ್ತು ವಿಶ್ಲೇಷಣೆ ಅಥವಾ ವ್ಯಾಖ್ಯಾನಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಈ ಅಧ್ಯಯನದ ಮೂಲ ಆಕರ ಮಾನವ ಮತ್ತು ಮಾನವನಿರ್ಮಿತ ಮನೆಯಾಗಿದೆ. ಬುಡಕಟ್ಟು ಸಂಸ್ಕೃತಿಗಳ ಅಧ್ಯಯನದಲ್ಲಿ ಅಧಿಕೃತತೆ ಮತ್ತು ಪರಿಪೂರ್ಣತೆ ಅವಶ್ಯಕ ಅಲ್ಲದೆ ಕ್ಷೇತ್ರಕಾರ್ಯದ ಅವಶ್ಯಕತೆಯೂ ಇದೆ. ಆದರೆ ಒಮ್ಮೆ ಮಾಡಿದ ಕ್ಷೇತ್ರಕಾರ್ಯ ಇನ್ನೊಂದೆರಡು ವರ್ಷದಲ್ಲಿ ಮಾಡುವ ಕ್ಷೇತ್ರಕಾರ್ಯದ ಫಲಿತಾಂಶದಿಂದ ಬೇರೆಯೇ ಆಗಿರುತ್ತದೆ. ಇಂದು ಇರುವ ಗುಡಿಸಿಲಿನ ಮನೆ ನಾಳೆ ಮಣ್ಣಿನ ಮನೆಯಾಗಿ ಪರಿವರ್ತನೆಯಾಗಬಹುದು ಅಥವಾ ಒಂದು ಗ್ರಾಮದ ಜನ ಸಂಪೂರ್ಣ ಬೇರೆ ಪ್ರದೇಶಕ್ಕೆ ವಲಸೆಹೋಗಿ ಹೊಸ ಜನಾಂಗವೊಂದು ಬಂದು ಈ ಗ್ರಾಮದಲ್ಲಿ ನೆಲಸಬಹುದು. ಇಂಥ ಜನಾಂಗಗಳ ಅಧ್ಯಯನಕ್ಕೆ ಕ್ಷೇತ್ರಕಾರ್ಯ ಅವಶ್ಯಕ. ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಪಡೆದ ಮಾಹಿತಿಯನ್ನು ಸೇರಿಸಿ ದಾಖಲುಮಾಡಿಕೊಂಡು ಸಂಕಲಿಸಿ ನಂತರ ವ್ಯಾಖ್ಯಾನಿಸಲಾಗಿದೆ. ಈ ವ್ಯಾಖ್ಯಾನವನ್ನು ಬುಡಕಟ್ಟು

ಸಂಸ್ಕೃತಿಗಳ ಅಧ್ಯಯನದಲ್ಲಿ ಒಂದು ಪ್ರಮುಖ ಅಂಶವಾಗಿಟ್ಟುಕೊಂಡು ದಾಖಲಿಸಲಾಗಿದೆ.

ಆಧುನಿಕ ಜಗತ್ತಿನ ಪರಿವರ್ತನೆಗಳಿಗೆ ಪ್ರತಿಕ್ರಿಯಿಸುತ್ತಿರುವ ಬುಡಕಟ್ಟುಗಳ ವೈಜ್ಞಾನಿಕ ಅಧ್ಯಯನ ಪ್ರಸ್ತುತ ಅಗತ್ಯವಾಗಿದೆ. ಕ್ಷೇತ್ರಕಾರ್ಯವನ್ನು ಕೈಗೊಳ್ಳುವುದಕ್ಕಿಂತ ಮುಂಚೆ ನಾವು ಆಯ್ಕೆ ಮಾಡಿಕೊಂಡಿರುವ ಕ್ಷೇತ್ರದ ಬಗ್ಗೆ ಯಾರಾದರೂ ಅಧ್ಯಯನ ಮಾಡಿದ್ದಾರೆಯೇ ಒಂದು ವೇಳೆ ಮಾಡಿದ್ದರೆ ಅವರು ಯಾವ ಮಾರ್ಗದಲ್ಲಿ ಮುನ್ನಡೆದಿದ್ದಾರೆ ಎಂದು ತಿಳಿಯುವುದು ಅವಶ್ಯಕ. ನಾವು ಯಾರನ್ನು ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡಿದ್ದೇವೆಯೋ ಅವರ ಸಮಾಜ, ಸಂಸ್ಕೃತಿ, ಅವರು ವಾಸಿಸುತ್ತಿರುವ ಪ್ರದೇಶ, ಅವರ ಜನಸಂಖ್ಯೆ ಮುಂತಾದವುಗಳನ್ನು ಪೂರ್ವಭಾವಿಯಾಗಿ ಅಧ್ಯಯನಮಾಡುವುದು ಅವಶ್ಯಕ.

ಒಟ್ಟಾರೆ ಮೂರು ಹಂತಗಳಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಮೊದಲ ಹಂತದಲ್ಲಿ ಆನುಷಂಗಿಕ ದಾಖಲೆಗಳ ಅಧ್ಯಯನ, ಎರಡನೆ ಹಂತದಲ್ಲಿ ಕ್ಷೇತ್ರಕಾರ್ಯ, ನಂತರ ಮೂರನೇ ಹಂತದಲ್ಲಿ ಈ ಎರಡು ಹಂತಗಳಲ್ಲಿ ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿಯ ವಿಶ್ಲೇಷಣೆ. ಈ ಅಧ್ಯಯನದ ವಿಧಾನವನ್ನು ಕೆಳಗಿನ ಚಿತ್ರದಲ್ಲಿ ಹಂತ ಹಂತವಾಗಿ ತೋರಿಸಲಾಗಿದೆ.



೩.೧ ಸಾಹಿತ್ಯ ಮೂಲಾಧಾರ

ಸಾಹಿತ್ಯವನ್ನು ಆನುಷಂಗಿಕ ಆಧಾರವನ್ನಾಗಿ ಈ ಸಂಶೋಧನಾ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ. ಈ ವಿಷಯದಲ್ಲಿ ಲಿಖಿತ ಸಾಹಿತ್ಯವನ್ನಷ್ಟೇ ಅಲ್ಲದೆ ಮೌಖಿಕ ಸಾಹಿತ್ಯವನ್ನೂ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂಗ್ರಹಿಸಲಾಯಿತು. ಇಲ್ಲಿ ಲಿಖಿತ ಸಾಹಿತ್ಯದ ಆಧಾರಗಳನ್ನು ಮೂರು ಭಾಗವಾಗಿ ವಿಂಗಡಿಸಿ ಕೊಳ್ಳಲಾಗಿದೆ. ೧. ಪುಸ್ತಕಗಳು ಮತ್ತು ಲೇಖನಗಳು, ೨. ಸರ್ಕಾರಿ ದಾಖಲೆಗಳು ಹಾಗೂ ೩. ಖಾಸಗಿ ಸಂಸ್ಥೆಗಳು ಹೊರತಂದ ಕಿರುಹೊತ್ತಿಗೆಗಳು.

ಬೇಡರ ಸಮಾಜ, ಸಂಸ್ಕೃತಿ, ಆಚಾರ-ವಿಚಾರಗಳಿಗೆ ಸಂಬಂಧಿಸಿದಂತೆ ೧೯೦೦ ರಿಂದ ೧೯೯೫ರವರೆಗೆ ಅನೇಕ ಕೃತಿಗಳು ಮತ್ತು ಲೇಖನಗಳು ಪ್ರಕಟಗೊಂಡಿವೆ. ಇವುಗಳ ಅಧ್ಯಯನದಿಂದ ಕ್ಷೇತ್ರಕಾರ್ಯಕ್ಕೆ ಹೋಗುವ ಪೂರ್ವದಲ್ಲಿಯೇ ಈ ಸಮುದಾಯದ ಪರಿಚಯ ನಮಗುಂಟಾಗುತ್ತದೆ. ಹಾಗೂ ಇಲ್ಲಿಯವರೆಗೆ ಯಾವ ದೃಷ್ಟಿಕೋನದಿಂದ ಮತ್ತು ವಿಧಾನಗಳಿಂದ ಅಧ್ಯಯನಗಳು ನಡೆದಿವೆ ಎಂಬುದೂ ತಿಳಿಯುತ್ತದೆ. ಪೂರ್ವಭಾವಿಯಾಗಿ ಸಿದ್ಧತೆಮಾಡಿಕೊಳ್ಳುವುದರಿಂದ ಹೊಸ ದೃಷ್ಟಿಕೋನದಿಂದ ಅಧ್ಯಯನ ಕೈಗೊಳ್ಳಲು ಆಸಕ್ತಿ ಹುಟ್ಟುತ್ತದೆ. ಅಲ್ಲದೆ ಪುಸ್ತಕ ರಚಿತವಾದ ಕಾಲದಿಂದ ಇಂದಿನವರೆಗೆ ಸಮಾಜ, ಸಂಸ್ಕೃತಿಗಳಲ್ಲಿ ಉಂಟಾದ ಪರಿವರ್ತನೆಯನ್ನು ಗುರುತಿಸಲು ಸಹಾಯಕವಾಗುತ್ತದೆ. ಪುಸ್ತಕಗಳಷ್ಟೇ ಅಲ್ಲದೆ ಸರ್ಕಾರಿ ದಾಖಲೆಗಳು ಕಂದಾಯ, ನೀರಾವರಿ, ವಿವಿಧ ಯೋಜನೆಗಳು, ಜನಸಂಖ್ಯಾವರದಿ, ಮೀಸಲಾತಿ ಸೌಲಭ್ಯಕ್ಕಾಗಿ ಬಂದ ವರದಿ, ಗ್ಯಾಸೆಟಿಯರ್‌ಗಳು ಹಿಂದಿನ ಮತ್ತು ಸಮಕಾಲೀನ ಅಂಕಿ-ಅಂಶಗಳ ಮತ್ತು ನಿಖರ ದಾಖಲೆಗಳು ಇಂತಹ ಅಧ್ಯಯನಕ್ಕೆ ಅನುಕೂಲವಾಗಿವೆ. ಈ ದಾಖಲೆಗಳು ತಾಲ್ಲೂಕು ಆಫೀಸ್, ಪುರಸಭೆ, ನಾಡಕಚೇರಿ ಮುಂತಾದ ಸರ್ಕಾರಿ ಕಚೇರಿಗಳಲ್ಲಿ ದೊರೆಯುತ್ತದೆ. ಹಳ್ಳಿಯ ನಕ್ಷೆಯಿಂದ ನಿರ್ದಿಷ್ಟ ಜನಾಂಗವು ಹಳ್ಳಿಯ ಯಾವ ದಿಕ್ಕಿನಲ್ಲಿ ವಾಸವಾಗಿದ್ದಾರೆ ಏಕೆ ಎಂಬ ಪ್ರಶ್ನೆಗೆ ಉತ್ತರವನ್ನು ಕಂಡು ಕೊಳ್ಳುವಂತೆ ಪ್ರೇರೇಪಿಸುತ್ತದೆ. ಅಂತೆಯೇ ಜನಸಂಖ್ಯೆಯ ವರದಿಯು ವರ್ಷಕ್ಕೊಮ್ಮೆ ಒಂದುಜನಾಂಗದ ಅವನತಿ ಅಥವಾ ಅಭಿವೃದ್ಧಿಯನ್ನು ತಿಳಿಸುತ್ತದೆ. ಜನರ ಶೈಕ್ಷಣಿಕ, ಆರ್ಥಿಕ ಮುಂತಾದ ವಿಷಯಗಳ ಮೇಲೆ ಈ ವರದಿಗಳು ಬೆಳಕು ಚೆಲ್ಲುತ್ತವೆ. ಇವುಗಳ ಆಧಾರದಿಂದ ಜನಾಂಗದ ವಲಸೆ, ಅವರ ನೆಲೆ, ಮುಂತಾದ ವಿಷಯಗಳನ್ನು ಅಧ್ಯಯನ ಮಾಡಬಹುದಾಗಿದೆ. ಉಳಿದ

ಅಥವಾ ತಾಲ್ಲೂಕಿನ ನಕ್ಷೆ, ಅಂಕಿ - ಅಂಶಗಳು, ಕ್ಷೇತ್ರಕಾರ್ಯಕ್ಕೆ ಆರಿಸಿಕೊಳ್ಳಬೇಕಾದ ಹಳ್ಳಿ ಅಥವಾ ನಗರಗಳ ಆಯ್ಕೆಗೆ ಸಮರ್ಥನೆ ನೀಡುತ್ತವೆ. ಇವುಗಳಲ್ಲದೆ ಖಾಸಗಿ ಸಂಘ ಸಂಸ್ಥೆಗಳು ಅಂದರೆ ನಾಯಕ (ಬೇಡ) ಜನಾಂಗದ ಸಂಘ ಸಂಸ್ಥೆಗಳು ಹೊರತಂದ ಕಿರುಹೊತ್ತಿಗೆಗಳೂ ಈ ಅಧ್ಯಯನದಲ್ಲಿ ಪ್ರಮುಖವಾಗಿ ನೆರವಾಗುತ್ತವೆ. ಅಖಿಲ ಕರ್ನಾಟಕ ನಾಯಕ ಸಂಘದ ಹೊತ್ತಿಗೆಗಳು ತಮ್ಮ ಜನಾಂಗದ ಜನ ಯಾವ ಪ್ರದೇಶದಲ್ಲಿ ಹೆಚ್ಚಾಗಿದ್ದಾರೆ ಯಾವ ಪ್ರದೇಶದಲ್ಲಿ ಕಡಿಮೆ, ಅವರ ಒಟ್ಟು ಜನಸಂಖ್ಯೆ ಎಷ್ಟು, ಮುಂತಾದ ವಿವರಣೆಗಳನ್ನು ಹೊಂದಿವೆ. ಸರ್ಕಾರದ ನೀತಿಯಿಂದ ಇಂದು ಇವರು ಪಡೆದಿರುವ ಸೌಲಭ್ಯಗಳು, ವಂಚಿತ ಅವಕಾಶಗಳು ಹಾಗೂ ಇವರ ಅಭಿವೃದ್ಧಿಯನ್ನು ಕುರಿತು ಅನೇಕ ವಿಷಯಗಳು ವಾರ್ಷಿಕ ಪುಸ್ತಕದಲ್ಲಿ ಚರ್ಚೆಗೆ ಒಳಪಟ್ಟಿರುತ್ತವೆ. ಸರ್ಕಾರಿ ದಾಖಲೆಗಳು ಮತ್ತು ಖಾಸಗಿ ಸಂಘ ಸಂಸ್ಥೆಗಳ ದಾಖಲೆಗಳು ತಮ್ಮ ಹಿತಾಸಕ್ತಿಗಾಗಿ ರಚಿತವಾಗಿದ್ದರೂ ಅವುಗಳ ಪರಿಶೀಲನೆ ಅವಶ್ಯಕವಾಗಿದೆ. ಈ ರೀತಿಯ ಪೂರ್ವಭಾವಿ ಸಿದ್ಧತೆಯ ನಂತರವೇ ಕ್ಷೇತ್ರಕಾರ್ಯವನ್ನು ಕೈಗೊಳ್ಳುವುದು ಉತ್ತಮ.

೩.೨ ಕ್ಷೇತ್ರಕಾರ್ಯ

ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ವಾಸವಾಗಿರುವ ಬೇಡರ ಸಂಸ್ಕೃತಿಯನ್ನು ಸಮಗ್ರವಾಗಿ ಅಧ್ಯಯನ ಮಾಡುವ ಗುರಿ ಇಟ್ಟುಕೊಂಡು ಕ್ಷೇತ್ರಕಾರ್ಯ ಮಾಡುವುದು ಅಸಾಧ್ಯ. ಹಾಗಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿರುವ ಬೇಡರ ಸಂಸ್ಕೃತಿಯನ್ನು ಅಭ್ಯಾಸಿಸಲು ಹಲವು ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಇದೇ ತಾಲ್ಲೂಕಿನ ಹಳ್ಳಿಗಳ ಬೇಡರ ಸಮುದಾಯವನ್ನು ಅಧ್ಯಯನ ಮಾಡದೆ ಎರಡು ಹಳ್ಳಿಗಳ ''ಸ್ಥೂಲ ಮಾದರಿ ಕ್ಷೇತ್ರಕಾರ್ಯ'' ವಿಧಾನದ ಮೂಲಕ ಅಭ್ಯಾಸಿಸಲಾಯಿತು. ಮೊದಲೆ ಹೇಳಿದಂತೆ ಈ ಆಯ್ಕೆಗೆ ಅನೇಕ ಕಾರಣಗಳಿವೆ. ಒಂದೊಂದು ಹಳ್ಳಿಗಳಲ್ಲಿಯೂ ಐವತ್ತು ಮನೆಗಳನ್ನು ಸಂದರ್ಶಿಸಿ, ಮನೆಯ ಸದಸ್ಯರಿಂದ ಮಾಹಿತಿ ಸಂಗ್ರಹಿಸಲಾಯಿತು.

ಕುಟುಂಬದ ಸದಸ್ಯರಿಗೆ ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆಯಲು ಒಂದು ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳಲಾಗಿತ್ತು. ಪ್ರಶ್ನಾವಳಿಯಲ್ಲಿ (ಅನುಬಂಧ-೪) ಎರಡು ವಿಭಾಗಗಳನ್ನು ಮಾಡಲಾಗಿದೆ. ವಿಭಾಗ ಒಂದರಲ್ಲಿ ಹೆಸರು, ವಯಸ್ಸು, ಪಂಗಡ, ಉಪಪಂಗಡ, ವಿದ್ಯಾಭ್ಯಾಸ, ವೃತ್ತಿ, ಸಾಮಾಜಿಕ,

ಆರ್ಥಿಕ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳಿವೆ. ಎರಡನೆಯ ವಿಭಾಗದಲ್ಲಿ ಮನೆಗೆ ಸಂಬಂಧಿಸಿದ ಪ್ರಶ್ನೆಗಳಿವೆ. ಮನೆ ಅಂದರೇನು ? ಮನೆ ಕಟ್ಟುವಿಕೆಯಲ್ಲಿ ವರ್ಷಕಾವರ್ತಗಳ ಪ್ರಭಾವ, ಭೌಗೋಲಿಕತೆಯ ಪ್ರಭಾವ, ಸಂಪನ್ಮೂಲಗಳ ಬಳಕೆ, ತಾಂತ್ರಿಕತೆ ಮತ್ತು ಮನೆಯಲ್ಲಿ ನಡೆಯುವ ಆಚಾರ ವಿಚಾರ, ಸಂಸ್ಕಾರ, ಮನೆಯದಿಕ್ಕು ಇತ್ಯಾದಿಗಳನ್ನು ಕುರಿತ ಪ್ರಶ್ನೆಗಳನ್ನು ಒಳಗೊಂಡಿದೆ. ಇದೇ ಸಂದರ್ಭದಲ್ಲಿ ಮನೆಗೆ ಸಂಬಂಧಿಸಿದ ಜನಪದ ಸಾಹಿತ್ಯವನ್ನು ಅಂದರೆ ಹಾಡು, ಗಾದೆ, ಒಗಟುಗಳನ್ನು ಸಹ ಸಂಗ್ರಹಿಸಿ ಕೊಳ್ಳಲಾಯಿತು.

ಕಮಲಾಪುರಕ್ಕೆ 'ಎ' ಎಂದು ತಿಮ್ಮಲಾಪುರಕ್ಕೆ 'ಬಿ' ಗ್ರಾಮ ಎಂದು ಕರೆಯಲಾಗಿದೆ. ಎ ಮತ್ತು ಬಿ ಗ್ರಾಮಗಳ ನಡುವೆ ಇರುವ ಸಾಮ್ಯತೆ, ಪ್ರತ್ಯೇಕತೆ, ವಿಭಿನ್ನತೆಗಳನ್ನು ತೌಲನಿಕವಾಗಿ ಅಧ್ಯಯನಮಾಡಲಾಗಿದೆ. ಇದರ ಸಹಾಯದಿಂದ 'ಎ' ಗ್ರಾಮದ ಮನೆಗಳಲ್ಲಿಯೇ ಇರುವ ವ್ಯತ್ಯಾಸ, ಹೋಲಿಕೆಗಳನ್ನು ಗುರುತಿಸಲಾಗಿದೆ. ಎ ಮತ್ತು ಬಿ ಗ್ರಾಮಗಳಲ್ಲಿ ಬರುವ ಮನೆಗಳನ್ನು ದಿಕ್ಕಿನ ಆಧಾರದ ಮೇಲೆ ವರ್ಗೀಕರಣ ಮಾಡಿಕೊಂಡು ಅಂದರೆ ದಕ್ಷಿಣಕ್ಕೆ ಬಾಗಿಲ ಬರುವ ಮನೆಗಳು, ಉತ್ತರಕ್ಕೆ ಬಾಗಿಲು ಬರುವ ಮನೆಗಳು ಎಂದು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಪೂರ್ವಕ್ಕೆ ಬರುವ ಬಾಗಿಲಿನ ಎಲ್ಲಾ ಮನೆಗಳು ರಚನೆಯಲ್ಲಿ ಒಂದೇ ಮಾದರಿಯಲ್ಲಿವೆಯೇ ಅಥವಾ ಇಲ್ಲವೇ ? ಇದ್ದರೆ ಏಕೆ ? ಇಲ್ಲದಿದ್ದರೆ ಏಕೆ ? ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯುವ ಪ್ರಯತ್ನ, ಒಂದು ವೇಳೆ ಊರಿನ ಎಲ್ಲಾ ಮನೆಗಳು ಒಂದು ದಿಕ್ಕಿಗೆ ಮಾತ್ರ ಬಾಗಿಲನ್ನಿಟ್ಟು ಅಥವಾ ಒಂದು ದಿಕ್ಕಿಗೆ ಬಾಗಿಲನ್ನೇ ಇಡದಿದ್ದರೆ ಅದಕ್ಕೆ ಕಾರಣ ಕಂಡುಕೊಳ್ಳುವ ಪ್ರಯತ್ನ ನಡೆಯಿತು, ಈ ರೀತಿಯ ಅನೇಕ ಪ್ರಶ್ನೆಗಳಿಗೆ ಉತ್ತರ ಪಡೆದುಕೊಳ್ಳಲು ಕ್ಷೇತ್ರಕಾರ್ಯ ಸಹಾಯಕವಾಗಿದೆ.

ಈ ಪ್ರಶ್ನಾವಳಿಯ ಸಹಾಯದಿಂದ ಅನೇಕ ಸಂಗತಿಗಳನ್ನು ಕ್ಷೇತ್ರಕಾರ್ಯದ ಸಮಯದಲ್ಲಿ ವೈಜ್ಞಾನಿಕವಾಗಿ ದಾಖಲಿಸಲಾಯಿತು. ಸ್ಥೂಲ ಮಾದರಿ ಕ್ಷೇತ್ರಕಾರ್ಯ (ರ್‍ಯಾಂಡಂ ಸ್ಯಾಂಪಲ್ ಸರ್ವೇ) ವಿಧಾನದಿಂದ ಎರಡೇ ಹಳ್ಳಿಗಳಲ್ಲಿ ೫೦ ಬೇಡರ ಮನೆಗಳನ್ನು ಆಯ್ಕೆಮಾಡಿಕೊಂಡು ಮಾಹಿತಿಯನ್ನು ಪ್ರಶ್ನಾವಳಿಯ ಮೂಲಕ ಸಂಗ್ರಹಿಸಲಾಯಿತು. ಈ ವಿಧಾನದಿಂದ ಇಡೀ ಬೇಡ ಸಮಾಜದ ಮನೆ, ಸಮಾಜಕ್ಕೆ ಸಂಸ್ಕೃತಿಗಳಿಗೆ ಸಂಬಂಧಿಸಿದ ಅನೇಕ ವಿಷಯಗಳ ಅರಿವಾಯಿತು. ಪ್ರಶ್ನಾವಳಿ ಅಲ್ಲದೆ

ಕ್ಷೇತ್ರಕಾರ್ಯ ಮಾಡುತ್ತ ಅವರ ಬದುಕು ಬವಣೆ ಹಾಗೂ ಇನ್ನಿತರ ವಿಷಯಗಳನ್ನು ಕೂಲಂಕುಷವಾಗಿ ಅವರೊಟ್ಟಿಗೆ ಚರ್ಚಿಸಲಾಯಿತು. ಮನೆ ಉದ್ದ ಅಳತೆಯನ್ನು ಅಂದಾಜನ ಮೇಲೆ ಪಡೆದುಕೊಂಡು, ಮನೆಯ ತಳಪಾಳವನ್ನು ಬರೆದು ಕೊಳ್ಳಲಾಯಿತು. ನಂತರ ಮನೆಗಳ ಛಾಯ ಚಿತ್ರವನ್ನು ತೆಗೆದುಕೊಳ್ಳಲಾಯಿತು. ಮಾಹಿತಿ ಸಂಗ್ರಹಣೆ, ಸಾಹಿತ್ಯ ಸಂಗ್ರಹಣೆ, ರೇಖಾಚಿತ್ರ, ಛಾಯ ಚಿತ್ರಗಳ ಸಹಾಯದಿಂದ, ಕ್ಷೇತ್ರಕಾರ್ಯದ ಅನುಭವದಿಂದ ಊರಬೇಡರ ಮತ್ತು ಮ್ಯಾಸಬೇಡರ ಸಮಾಜ ಮತ್ತು ಸಂಸ್ಕೃತಿಯ ಕುರಿತು ಪ್ರಸ್ತುತ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ.

ಮೂಲಭೂತ ಅವಶ್ಯಕತೆಗಳಲ್ಲಿ ಒಂದಾದ ಮನೆಯು ಇಂದು ತನ್ನ ಆರಂಭದ ಲಕ್ಷಣವಾದ ರಕ್ಷಣೆಯ ದೃಷ್ಟಿಕೋನವನ್ನು ಮಾತ್ರಹೊಂದದೆ ಭೌಗೋಳಿಕ, ಸಾಮಾಜಿಕ, ಆರ್ಥಿಕ ಮುಂತಾದ ಕಾರಣಗಳಿಗಾಗಿ ಮಾರ್ಪಾಡು ಹೊಂದುತ್ತಿದೆ. ಕೇವಲ ರಕ್ಷಣೆಗಾಗಿ ನಿರ್ಮಿತವಾಗಿದ್ದರೆ ಮನೆಗಳಲ್ಲಿ ವೈವಿಧ್ಯತೆ ಕಂಡು ಬರುತ್ತಿರಲಿಲ್ಲ. ಮಾನವ ತನ್ನ ಸ್ವಅನುಭವದಿಂದ ಅನೇಕ ಪ್ರಯೋಗಗಳನ್ನು ಮಾಡಿ ಮಾರ್ಪಾಡು ಮಾಡಿಕೊಂಡು ಬಂದಿದ್ದಾನೆ. ತಮ್ಮ ಅನುಭವಗಳನ್ನು ಜನಪದರು ಮೌಖಿಕವಾಗಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ವರ್ಗಾಯಿಸುತ್ತಾ ಬಂದಿದ್ದಾರೆ. ಈ ವರ್ಗಾವಣೆಯ ಹಂತದಲ್ಲಿ ಅನೇಕ ಹೊಸ ಅಂಶಗಳು ಸೇರ್ಪಡೆಯಾಗಿ ಮೂಲದ ಮನೆಯ ರಚನಾ ವಿನ್ಯಾಸ ಉಳಿದು ಬಂದಿಲ್ಲ. ಬೇಡರ ಮನೆಗಳಿಗೂ ಈ ಮಾತು ಅನ್ವಯಿಸುತ್ತದೆ. ಆದರೆ ಮನೆಯ ಒಳಗೆ ನಡೆಯುವ ಕೆಲವ ಕಾರ್ಯಗಳು, ಆಚರಣೆಗಳು, ಸಂಸ್ಕಾರಗಳು ಇಂದಿಗೂ ಉಳಿದು ಕೊಂಡು ಬಂದಿವೆ.

ಒಂದು ಕಾಲದಿಂದ, ಪ್ರದೇಶದಿಂದ, ಸಂಸ್ಕೃತಿಯಿಂದ, ಸಮಾಜದಿಂದ ವ್ಯತ್ಯಾಂತರಗೊಳ್ಳುವ ಮನೆಯ ರಚನೆಯ ಮೇಲೆ ಅನೇಕ ಅಂಶಗಳು ಪ್ರಭಾವ ಬೀರುತ್ತದೆ. ಒಂದೊಂದೆ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ. ಅದಕ್ಕೆ ಅನುಗುಣವಾಗಿಯೇ ಪ್ರಶ್ನಾವಳಿ ರಚಿತವಾಗಿದೆ. ಪ್ರಶ್ನಾವಳಿಯಲ್ಲಿ ಕೇಳಿದ ಪ್ರಶ್ನೆಗಳಿಗೆ ಬೇಡ ಸಮುದಾಯದವರು ನೀಡಿದ ವಿವರಣೆ ಮತ್ತು ಕ್ಷೇತ್ರಕಾರ್ಯದಲ್ಲಿ ಸೂಕ್ಷ್ಮವಾಗಿ ಗಮನಿಸಿದ ಕೆಲವು ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

ಕ್ಷೇತ್ರಕಾರ್ಯ ಮತ್ತು ಗ್ರಂಥಾಲಯದ ಸಹಾಯದಿಂದ ಬೇಡರ ಸಂಸ್ಕೃತಿಯನ್ನು ಸಮಗ್ರವಾಗಿ ಅಲ್ಲದಿದ್ದರೂ ಆಂಶಿಕವಾಗಿ ಅಧ್ಯಯನ ಮಾಡಲು ಅನುಕೂಲವಾಯಿತು. ಸಮಾಜ ಶಾಸ್ತ್ರಜ್ಞರು ಸಮಾಜವನ್ನು ಅರಿತು ಕೊಳ್ಳಲು ಕುಟುಂಬದಿಂದ ಪ್ರಾರಂಭಿಸಿ ಇಡೀ ಸಮಾಜವನ್ನು ಅಧ್ಯಯನ ಮಾಡುವಂತೆ, ಈ ಪ್ರಬಂಧದಲ್ಲಿ ಕುಟುಂಬದ ಮೂಲಾಧಾರವಾಗಿರುವ ಮನೆಯನ್ನು ಕೇಂದ್ರವಾಗಿಟ್ಟು ವ್ಯಕ್ತಿಯನ್ನು, ಕುಟುಂಬದ ಸದಸ್ಯರನ್ನು, ಸಮಾಜವನ್ನು, ಸಂಸ್ಕೃತಿಯನ್ನು ಅರಿತು ಕೊಳ್ಳಲು ಪ್ರಯತ್ನಿಸಲಾಗಿದೆ.

೩.೩ ಮಾಹಿತಿ ಸಂಗ್ರಹಣೆ ಮತ್ತು ವಿಶ್ಲೇಷಣೆ -

ಮಾನವನ ಆಂತರಿಕ ಮತ್ತು ಬಾಹ್ಯ ವಿಕಾಸದ ಜತೆಯಲ್ಲಿಯೇ ಮನೆ ವಿಕಸಿತಗೊಂಡಿದೆ. ಆರಂಭದಲ್ಲಿನ ಗುಡಿಸಲುಗಳಿಂದ ಇಂದಿನ ಕಾಂಕ್ರೀಟ್ ಮನೆಗಳವರೆಗೆ ಆಯಾ ಕಾಲದ ಸಾಮಾಜಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಅಧ್ಯಯನ ಮಾಡಲು ಸಾಧ್ಯ. ಏಕಕಾಲದಲ್ಲಿಯೇ ಗುಡಿಸಲಿನಿಂದ ಕಾಂಕ್ರೀಟಿನವರೆಗಿನ ಮನೆಗಳನ್ನು ಅಧ್ಯಯನಮಾಡಬಹುದಾದ ಅವಕಾಶ ನಮಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಮನೆಗಳ ನಿರ್ಮಾಣದ ಇತಿಹಾಸವು ನವಶಿಲಾಯುಗ ಮತ್ತು ಬೃಹತ್ ಶಿಲಾಯುಗದಿಂದ ಆರಂಭವಾಗುತ್ತದೆ. ಈ ಕಾಲದಲ್ಲಿಯೇ ಮಾನವ ಒಂದು ಪ್ರದೇಶದಲ್ಲಿ ವಾಸಿಸಲಾರಂಭಿಸಿದ. ಈ ಮನೆಗಳಿಗೆ ಮರ, ಹುಲ್ಲು ಇತ್ಯಾದಿ ವಸ್ತುಗಳನ್ನು ಬಳಸಿರುವುದು ತಿಳಿದುಬರುತ್ತದೆ. ವೃತ್ತಾಕಾರದ ಗುಡಿಸಲುಗಳು ಪ್ರಾರಂಭದ ಹಂತದಲ್ಲಿ ಕಂಡುಬರುತ್ತವೆ. ಕಾಲಕ್ರಮೇಣ ಆಯತಾಕಾರದ ಇಲ್ಲವೇ ಚೌಕಾಕಾರದ ಗುಡಿಸಲುಗಳು ನಿರ್ಮಿತಗೊಂಡಿವೆ. ಆದರೆ ಈ ಬದಲಾವಣೆಯ ಕಾಲವನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗಿಲ್ಲ. ಈ ನಿಟ್ಟಿನಲ್ಲಿ ಅಧ್ಯಯನ ನಡೆಯ ಬೇಕಾಗಿದೆ. ಆದಿಮಾನವನಿಂದ ಆಧುನಿಕತೆಯ ನಡುವಿನ ಕೊಂಡಿಯಂತಿರುವ ಕೆಲವು ಬುಡಕಟ್ಟುಗಳಲ್ಲಿ ಇಂದಿಗೂ ವೃತ್ತಾಕಾರದ ಮನೆಗಳು ಉಳಿದುಕೊಂಡು ಬಂದಿವೆ. ಕಾಡುಗೊಲ್ಲರ, ಸಿದ್ಧಿಜನಾಂಗದ ಮನೆಗಳು ವೃತ್ತಾಕಾರದವುಗಳು. ತೆಕ್ಕಲಕೋಟೆಯ ಸುತ್ತಮುತ್ತ ವಾಸಿಸುವ ಬೋಯ ಅಥವಾ ಬೇಡರ ಮನೆಗಳೂ ವೃತ್ತಾಕಾರವಾಗಿವೆ (RAO NAGARAJA, M.S. AND MALHOTHRA, K.C., 1965, PLATE XIV) (ಅನುಬಂಧ-೭). ಆದರೆ ಹೊಸಪೇಟೆ ತಾಲ್ಲೂಕಿನ

ಬೇಡರ ಮನೆಗಳು ಆಯತಾಕಾರ ಅಥವಾ ಚೌಕಾಕಾರದವುಗಳಾಗಿವೆ. ಕಮಲಾಪುರದ ಮ್ಯಾಸನಾಯಕರ ಪೌಳಿಗಳು ಮಾತ್ರ ವೃತ್ತಾಕಾರವಾಗಿರುವುದು ಗಮನಾರ್ಹ. ಸಾಮಾನ್ಯವಾಗಿ ಬುಡಕಟ್ಟು ಗುಂಪುಗಳು ಹಿರಿಯರು ವಾಸಿಸುವ ಮನೆಯನ್ನು ಕಾಲಾನಂತರ ದೇವರ ಗುಡಿಗಳನ್ನಾಗಿ ಪರಿವರ್ತಿಸಿಕೊಳ್ಳುವ ಪದ್ಧತಿ ಕಂಡು ಬರುತ್ತದೆ. ಇದಕ್ಕೆ ಹಿರಿಯರ ಮನೆ, ದೇವರ ಗುಡಿ ಇತ್ಯಾದಿ ಹೆಸರುಗಳಿಂದ ಕರೆಯುವುದುಂಟು. ಈ ಕಾರಣದಿಂದ ಮ್ಯಾಸಬೇಡರ ಪೌಳಿಗಳು ಹಿಂದಿನ ತಲೆಮಾರಿನ ಗುಡಿಸಿಲಿನ ಮಾದರಿ ಆಗಿರಬೇಕು. ಆ ರಚನೆಯನ್ನು ಬದಲಾಯಿಸಿಕೊಳ್ಳದೆ ಉಳಿಸಿಕೊಂಡು ಬಂದಿರಬೇಕು. ಕೆಲವು ಪೌಳಿಗಳನ್ನು ಇಂದಿಗೂ ಹುಲ್ಲಿನಿಂದಲೇ ಕಟ್ಟುತ್ತಾರೆ.

೩.೩.೧ ಮನೆ ಪರಿಕಲ್ಪನೆ:

ನಾಯಕರ ಸಮುದಾಯವನ್ನು ಸಂದರ್ಶಿಸಿ, ಮನೆ ಎಂದರೇನು? ಮನೆ ಏಕೆ ಬೇಕು? ಎಂದು ಕೇಳಿದರೆ ಎರಡು ಊರಿನಲ್ಲಿ ಒಂದೇ ರೀತಿಯ ಉತ್ತರಗಳು ದೊರೆತವು. ಮನೆ ಅಂದರೆ ಮನೆ, ಮನೆ ಪ್ರಕೃತಿ ವಿಕೋಪಗಳಿಂದ, ಕಾಡುಮೃಗಗಳಿಂದ ರಕ್ಷಣೆಗೆ, ಕುಟುಂಬವನ್ನು ಸಂರಕ್ಷಿಸಲು, ಮಾನಮರ್ಯಾದೆ ಕಾಪಾಡಿಕೊಳ್ಳಲು, ಹೆಂಡತಿ ಮಕ್ಕಳನ್ನು ಬೀದಿಯಲ್ಲಿ ನಿಲ್ಲಿಸಲು ಸಾಧ್ಯವಿಲ್ಲವೆಂದು ಉತ್ತರಿಸಿದರು. ಇವರ ಪ್ರಕಾರ ಮನೆ ಒಂದು ರಕ್ಷಣೆ ನೀಡುವ ಸ್ಥಳ.

ಇವರು ದೇವಾಲಯಗಳಿಗೆ ನೀಡುವಷ್ಟು ಗೌರವವನ್ನು, ಪಾವಿತ್ರತೆಯನ್ನು ಮನೆಗೂ ನೀಡುತ್ತಾರೆ. ಹಿಂದೆ ಯಾವುದೇ ಮನೆಯ ಒಳಗೆ ಪ್ರವೇಶ ಮಾಡ ಬೇಕಾಗಿದ್ದರೂ ಕೈ ಕಾಲು, ಮುಖ ತೊಳೆದುಕೊಂಡೇ ಒಳ ಬರಬೇಕಾಗಿತ್ತು. ಇವರು ಮನೆಯೊಳಗೆ ಪಾದರಕ್ಷೆಗಳನ್ನು ಹಾಕಿಕೊಂಡು ಪ್ರವೇಶಿಸುವುದಿಲ್ಲ. ಚಪ್ಪಲಿ ಇವರಿಗೆ ಅಪವಿತ್ರ. ಮ್ಯಾಸನಾಯಕರು ಸೂತಕ, ಮೈಲಿಗೆಯ ಬಗ್ಗೆ ನೀಡುವ ಪ್ರಾಮುಖ್ಯತೆಯನ್ನು ಊರನಾಯಕರು ನೀಡುವುದಿಲ್ಲ. ಆದರೂ ಕೆಲವು ಆಚರಣೆಗಳನ್ನು ನಡೆಸಿಕೊಂಡು ಬಂದಿದ್ದಾರೆ. ಸೂತಕವಾದ ಮನೆಗೆ ಹೋಗುವುದಿಲ್ಲ ಹಾಗೂ ಸೂತಕವಾದ ವ್ಯಕ್ತಿಗೆ ಮನೆ ಒಳಗೆ ಪ್ರವೇಶವಿಲ್ಲ.

ಶಬ್ದಕೋಶಗಳಲ್ಲಿಯೂ ಮನೆ ಅಥವಾ ಗೃಹ, ವಸತಿ ಎಂದರೆ ಕುಟುಂಬಗಳು ವಾಸಿಸುವ ಸ್ಥಳ ಎಂಬ ಅರ್ಥವಿದೆ. ''ವಸತಿ ಎಂದರೆ ವ್ಯಕ್ತಿ ತನ್ನ ಮತ್ತು ತನ್ನ ಕುಟುಂಬದವರಿಗಾಗಿ ನಿರ್ಮಿಸಿಕೊಂಡ ರಕ್ಷಣಾ ವ್ಯವಸ್ಥೆ. ಗೌಡರು ಈ ವ್ಯವಸ್ಥೆಯನ್ನು ಮನೆಯೆಂದು ಕರೆಯುತ್ತಾರೆ.'' (ಪುರುಷೋತ್ತಮ ಬಿಳಿಮಲೆ, ೧೯೮೫, ಪು.೮೮). ಮಾನವನಲ್ಲಿ ತಾನು, ತನ್ನದು ಎಂಬ ಸ್ವಾರ್ಥಭಾವನೆ ಬಂದನಂತರ ತನ್ನ ಹೆಂಡತಿ, ಮಕ್ಕಳ ಹಾಗೂ ಸಂಪತ್ತಿನ ರಕ್ಷಣೆಗೆ ಭದ್ರವಾದ ಗುಡಿಸಲು ಅಥವಾ ಮನೆಯನ್ನು ಕಟ್ಟಿಕೊಂಡ. ಈ ಕ್ರಿಯೆಯು ವ್ಯಕ್ತಿಯನ್ನು ಹೊರ ಪ್ರಪಂಚದಿಂದ ಬೇರ್ಪಡಿಸಿತು. ಆದರೂ ತನ್ನ ಕೆಲವು ಅವಶ್ಯಕತೆಗಾಗಿ ಸಮಾಜದ ಜತೆ ಹೊಂದಿಕೊಂಡು ಜೀವನ ನಡೆಸಬೇಕು. ಹೀಗಾಗಿ ಸಾಮಾಜಿಕ ಸಂಬಂಧಗಳನ್ನು ಗಟ್ಟಿಗೊಳಿಸಲು ಕೆಲವು ಭಾಗಗಳು ಮನೆಗಳಲ್ಲಿ ಸೇರಿಕೊಂಡಿವೆ. ಅಂಗಳ, ಹೊರಕಟ್ಟೆ, ಹೊರಚಪ್ಪರ, ಪಡಸಾಲೆಗಳಂಥ ಮನೆಯ ಭಾಗಗಳು ಸಾಮಾಜಿಕ ಸಂಬಂಧಗಳನ್ನು ಬಂಧಿಸಲು ಸಹಾಯವಾದರೆ ನಡುಮನೆ, ದೇವರಮನೆ ಮುಖ್ಯವಾಗಿ ಅಡುಗೆ ಮನೆಗಳು ಕೌಟುಂಬಿಕ ಸಂಬಂಧಗಳ ಭದ್ರ ಕೊಂಡಿಗಳಾಗಿವೆ. ಒಂದು ವೇಳೆ ಮನೆಯಲ್ಲಿ ಎರಡು ಕಡೆ ಒಲೆಯೂಡಲಾಗಿದೆ ಎಂದರೆ ಮನೆಯ ಸದಸ್ಯರಲ್ಲಿ ಹೊಂದಾಣಿಕೆ ಇಲ್ಲವೆಂದೆ ಅರ್ಥ.

೩.೩.೨ ಭೌಗೋಳಿಕತೆ ಮತ್ತು ವಾಯುಗುಣ

ಭೌಗೋಳಿಕ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾನವ ನಿಸರ್ಗದಲ್ಲಿ ಸಿಕ್ಕುವ ಸಂಪನ್ಮೂಲಗಳನ್ನು ಬಳಸಿಕೊಂಡು ಗುಡಿಸಲು ಅಥವಾ ಮನೆಗಳನ್ನು ಕಟ್ಟಿಕೊಂಡ, ವ್ಯಾಪಾರಸ್ಥರ ಮತ್ತು ಉದ್ಯೋಗಸ್ಥರ ಮನೆಗಳ (ಕಮಲಾಪುರ ಮತ್ತು ತಿಮ್ಮಲಾಪುರದ) ಕ್ಷೇತ್ರಕಾರ್ಯದಲ್ಲಿ ಇವರು ಬಳಸಿದ ವಸ್ತುಗಳಲ್ಲಿ ಮತ್ತು ತಾಂತ್ರಿಕತೆಯಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸ ಕಂಡು ಬಂದಿತು. ಇದಕ್ಕೆ ಭೌಗೋಳಿಕತೆಯ ಜತೆಗೆ ಇಲ್ಲಿ ದೊರೆಯುವ ಸಂಪನ್ಮೂಲಗಳೇ ಕಾರಣ. ಹೊಸಪೇಟೆ ತಾಲ್ಲೂಕು ಬಯಲು ಸೀಮೆಯಾಗಿದ್ದು ಉಷ್ಣಾಂಶ ಹೆಚ್ಚಿರುವ ಪ್ರದೇಶ. ಈ ಪರಿಸರಕ್ಕೆ ಹೊಂದಿಕೊಳ್ಳುವಂತೆ ಎರಡೂ ಊರುಗಳಲ್ಲಿ ಮಣ್ಣನ್ನು ಅಧಿಕವಾಗಿ ಬಳಸಲಾಗಿದೆ. ಇಲ್ಲಿನ ಮಣ್ಣಿನ ಗೋಡೆಗಳು ಮೂರು ಅಡಿಗಳಿಗಿಂತ ದಪ್ಪವಾಗಿವೆ. ಇದರಿಂದ ಹೊರಗಿನ ಶಾಖ ಒಳ ಪ್ರವೇಶಿಸುವುದಿಲ್ಲ. ಈ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಕಿಟಕಿಗಳು ಕಾಣದೊರೆಯುವುದಿಲ್ಲ. ಬೆಳಕು ಮತ್ತು ಬಿಸಿಗಾಳಿ ಮನೆಯೊಳಗೆ ಪ್ರವೇಶಿಸಿದಷ್ಟು ಸೆಖೆ ಹೆಚ್ಚು. ಇದಕ್ಕೆ ಇವರು ಕಿಟಕಿಯ ಬದಲು ಗವಾಕ್ಷಿಗಳಿಂದ, ಅಥವಾ ಬೆಳಕಿಂಡಿಯಿಂದ ಹಾಗೂ ಗೋಡೆ ಕಿಂಡಿ (ರಂಧ್ರ)ಗಳ ಮೂಲಕ ಸ್ವಲ್ಪ ಪ್ರಮಾಣದಲ್ಲಿ ಗಾಳಿ ಬೆಳಕು ಒಳಪ್ರವೇಶಿಸುವಂತೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಇದಕ್ಕೆ ಅನುಗುಣವಾಗಿ ಇಡೀ ಮನೆಗೆ ಒಂದೇ ಬಾಗಿಲನ್ನು ಅಳವಡಿಸಿಕೊಳ್ಳುತ್ತಾರೆ. ಈ ಗೋಡೆ ಕಿಂಡಿಗಳು ಮತ್ತು ಬೆಳಕಿಂಡಿಗಳು ಹೇಗೆ ತಮ್ಮ ಪಾತ್ರ ನಿರ್ವಹಿಸುತ್ತವೆ ಎಂದು ಗಮನಿಸುವ. ಕಿಂಡಿಗಳು ರಭಸದಿಂದ ಬರುವ ಗಾಳಿಯನ್ನು ನಿಯಂತ್ರಿಸಿ ಸ್ವಲ್ಪ ಪ್ರಮಾಣದಲ್ಲಿಯೇ ಗಾಳಿ ಒಳ ಬರುವಂತೆಮಾಡುತ್ತದೆ. ಈ ಕ್ರಿಯೆಯಲ್ಲಿ ಗಾಳಿಯು ಸಣ್ಣ ಕಿಂಡಿಯ ಮೂಲಕ ವಿಶಾಲ ಕೋಣೆಯನ್ನು ಪ್ರವೇಶಿಸುವುದರಿಂದ ಕೋಣೆ ತಂಪಾಗಿರುತ್ತದೆ.

ಮನೆಯ ಒಳಗೆ ಬರಬೇಕಾದ ಗಾಳಿಯು ಹೊರ ಹೋಗಲು (ವೆಂಟಿಲೇಷನ್) ದಾರಿಯಿರಬೇಕು. ಇಲ್ಲದಿದ್ದರೆ ಗಾಳಿಯು ಮನೆಯ ಅಥವಾ ಕೋಣೆಯ ಒಳಗೆ ಪ್ರವೇಶಿಸದೆ ಬೇರೆ ದಿಕ್ಕಿಗೆ ಹೋಗುತ್ತದೆ. ಒಂದು ವೇಳೆ ವೆಂಟಿಲೇಷನ್‌ಗೆ ಅವಕಾಶ ಮಾಡಿಕೊಟ್ಟರೆ ಕಿಟಕಿ ಅಥವಾ ಕಿಂಡಿಯ ನೇರಕ್ಕೆ ಬಾಗಿಲು ಅಥವಾ ಕಿಂಡಿಯನ್ನು ಮಾಡಿದರೆ ಗಾಳಿ ಒಳಬರಲು ಅವಕಾಶ ಉಂಟಾಗುತ್ತದೆ. ಆದರೆ ಸಂಪೂರ್ಣ ಕೋಣೆ ತಂಪಾಗುವುದಿಲ್ಲ. ಕೋಣೆಯ ಒಂದು ಭಾಗದಲ್ಲಿ ಕಿಂಡಿ ಮಾಡಿ, ಇನ್ನೊಂದು ಭಾಗದಲ್ಲಿ ಗಾಳಿ ಹೊರ

ಹೋಗಲು ಅವಕಾಶ ನೀಡಬೇಕು(ಅನುಬಂಧ-೭). ಈ ರೀತಿಯ ವ್ಯವಸ್ಥೆಯಿಂದ ಗುಡಿಸಲು ಅಥವಾ ಮನೆಗಳು ತಂಪಾಗಿರುತ್ತವೆ. ಈ ರೀತಿಯ ವ್ಯವಸ್ಥೆಯನ್ನು ಹೆಚ್ಚಾಗಿ ಗುಡಿಸಲಿನ ಮನೆಗಳಿರುವ ತಿಮ್ಮಲಾಪುರದಲ್ಲಿ ಕಂಡುಬರುತ್ತದೆ. ಕಮಲಾಪುರದಲ್ಲಿ ಮನೆಗಳನ್ನು ಒಂದರ ಪಕ್ಕ ಒಂದು ಕಟ್ಟಿಕೊಂಡಿರುವುದರಿಂದ ಈ ವ್ಯವಸ್ಥೆ ಹೆಚ್ಚಾಗಿ ಕಂಡು ಬರುವುದಿಲ್ಲ. ಮುಂಭಾಗದಲ್ಲಿಯೇ ಬಾಗಿಲ ಅಕ್ಕಪಕ್ಕದಲ್ಲಿ ಸಣ್ಣ ಕಿಟಕಿಗಳನ್ನಿಟ್ಟಿರುತ್ತಾರೆ. ಇದಕ್ಕಿಂತ ಮುಖ್ಯವಾಗಿ ಕಮಲಾಪುರದಲ್ಲಿ ಬೆಳಕಿಂಡಿ ಅಥವಾ ಗವಾಕ್ಷಿಯ ಬಳಕೆ ಹೆಚ್ಚಾಗಿದೆ. ಚೌಕಾಕಾರದ ಗವಾಕ್ಷಿಗಳು ಇದ್ದರೂ ಮಡಿಕೆಯ ಬೆಳಕಿಂಡಿ ಉಪಯುಕ್ತವಾಗಿದೆ. ಮನೆಗೆ ಈ ಕಿಂಡಿಗಳ ಮೂಲಕ ಮಾತ್ರ ಬೆಳಕಿನ ಪ್ರವೇಶ. ಬೆಳಕಿಂಡಿಯ ಹೊರಬಾಯಿ ಸಣ್ಣದಾಗಿದ್ದು ಒಳ ಬಾಯಿ ಅಗಲವಾಗಿರುತ್ತದೆ. ಸಣ್ಣ ಪ್ರಮಾಣದಲ್ಲಿ ಒಳ ಪ್ರವೇಶಿಸುವ ಬೆಳಕು ಕೋಣೆಯ ಒಳಗೆ ಹರಡಿಕೊಳ್ಳುತ್ತದೆ. ಗ್ರಾಮೀಣ ಮಾದರಿಯ ಈ ಬೆಳಕಿಂಡಿಗಳು ಹೆಚ್ಚು ಬೆಳಕಿನ ಪ್ರವೇಶವನ್ನು ತಡೆಯುವ ಮಾದರಿಯಲ್ಲಿ ರಚಿತವಾಗಿದೆ (ಅನುಬಂಧ-೭).

ತಿಮ್ಮಲಾಪುರ ಮತ್ತು ಕಮಲಾಪುರದ ಕೆಲವು ಮನೆಗಳಲ್ಲಿ ಗೋಡೆ ಕಿಂಡಿ ಮತ್ತು ಬೆಳಕಿಂಡಿಗಳಿರುವುದನ್ನು ಕಾಣಬಹುದು. ಇಲ್ಲಿ ಒಲೆಯ ಮೇಲ್ಭಾಗದಲ್ಲಿಯೇ ಬೆಳಕಿಂಡಿಗಳಿವೆ. ಇವು ಇಲ್ಲಿ ನಿರ್ವಹಿಸುವ ಪಾತ್ರವೇ ಬೇರೆ. ಇವುಗಳನ್ನು ಹೊಗೆಕಿಂಡಿ ಎಂದು ಕರೆಯುತ್ತಾರೆ. ಹೆಸರೇ ಸೂಚಿಸುವಂತೆ ಇದು ಹೊಗೆ ಹೊರಹೋಗುವ ಮಾರ್ಗ. ಗೋಡೆಯ ಮೂರು ಅಥವಾ ನಾಲ್ಕು ಅಡಿಗಳಲ್ಲಿ ಒಂದು ಕಿಂಡಿ ಮಾಡಿ ಗಾಳಿ ಒಳ ಬರಲು ಅವಕಾಶ ಮಾಡಿಕೊಟ್ಟರೆ, ಗಾಳಿಗಿಂತ ಹಗುರವಾಗಿರುವ ಹೊಗೆಯು ಹೊಗೆಕಿಂಡಿಯ ಮುಖಾಂತರ ಹೊರ ಹೋಗುತ್ತದೆ. ತಿಮ್ಮಲಾಪುರದಲ್ಲಿ ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲಿಯೂ ಈ ವ್ಯವಸ್ಥೆ ಕಂಡು ಬರುತ್ತದೆ. ಕೆಲವು ಮನೆಗಳಲ್ಲಿ ಗೋಡೆಕಿಂಡಿಗಳಿದ್ದು ಬೆಳಕಿಂಡಿ ಅಥವಾ ಹೊಗೆಕಿಂಡಿಗಳು ಇಲ್ಲದೇ ಇರುವ ಮನೆ ಅಥವಾ ಗುಡಿಸಲುಗಳ ಮೇಲ್ಛಾವಣಿಗಳು ಹೊಗೆ ಸುತ್ತಿಕೊಂಡು ಕಪ್ಪಾಗಿವೆ.

ಗಾಳಿ, ಮಳೆ ಮತ್ತು ಬಿಸಿಲಿನ ದಿಕ್ಕುಗಳನ್ನು ಆಧಾರಿಸಿಯೇ ಹೆಚ್ಚಿನ ಮನೆಗಳು ನಿರ್ಮಿತವಾಗಿವೆ. ಮಾನವ ತನ್ನ ಅನುಭವದಿಂದ ಕಂಡುಕೊಂಡ ಮಾರ್ಗದಿಂದ ಹೆಚ್ಚು, ಗಾಳಿ, ಮಳೆ ಮತ್ತು ಬಿಸಿಲನ್ನು

ಮನೆಯ ಒಳಗೆ ಪ್ರವೇಶಿಸದಂತೆ ತಡೆಯುವ ಪ್ರಯತ್ನ ಮಾಡಿದ. ಇದಕ್ಕೆ ಅನುಗುಣವಾಗಿಯೇ ಬಾಗಿಲು, ಕಿಟಕಿಗಳನ್ನು ಕಟ್ಟಿಕೊಂಡ.

ತಿಮ್ಮಲಾಪುರದಲ್ಲಿ ಮಾಡಿದ ಕ್ಷೇತ್ರಕಾರ್ಯದಲ್ಲಿ ೪೭ ಮನೆಗಳಲ್ಲಿ ೨೫ಮನೆಗಳು ಉತ್ತರ ದಿಕ್ಕಗೂ, ೫ ದಕ್ಷಿಣ, ೧೭ ಪೂರ್ವ ಮತ್ತು ಪಶ್ಚಿಮಕ್ಕೆ ಒಂದೂ ಮನೆಯ ಬಾಗಿಲುಗಳು ಕಾಣದೊರೆಯಲಿಲ್ಲ. ಇಡೀ ಊರಿನಲ್ಲಿ ಬ್ರಾಹ್ಮಣರ ಒಂದೇ ಒಂದು ಮನೆ ಮಾತ್ರ ಪಶ್ಚಿಮಕ್ಕೆ ಮುಖ ಮಾಡಿದೆ. ಕಮಲಾಪುರದಲ್ಲಿಯೂ ೫೦ ಮನೆಗಳಲ್ಲಿ ಕ್ರಮವಾಗಿ ೨೩ ಉತ್ತರ, ೧೧ ದಕ್ಷಿಣ, ೧೦ ಪೂರ್ವ ಮತ್ತು ೬ ಪಶ್ಚಿಮ ದಿಕ್ಕಗೆ ಬಾಗಿಲುಗಳಿರುವುದನ್ನು ನಾವು ಕಾಣಬಹುದು (ಅನುಬಂಧ-೩). ಇದಕ್ಕೆ ಅವರದೇ ಆದ ನಂಬಿಕೆಗಳಿವೆ.

ಜನಪದರ ಪ್ರಕಾರ ಪಡುವಲದಿಕ್ಕು ಸಾವಿನ ಸಂಕೇತ. ಸೂರ್ಯಾಸ್ತದ ದಿಕ್ಕು. ಕೆಳಜಾತಿಯವರಲ್ಲಿ ಪಡುವಲ ಅಥವಾ ಹನುಮನ (ದಕ್ಷಿಣ)ದಿಕ್ಕಗಿಂತ ಮೂಡಲ ಮತ್ತು ಗಂಗೀ ಅಥವಾ ಈಶ್ವರನ (ಉತ್ತರ) ದಿಕ್ಕಗೆ ಬಾಗಿಲು ಇಡಬೇಕೆಂಬ ನಂಬಿಕೆ ಇದೆ. ಈ ದಿಕ್ಕುಗಳು ಜೀವಂತಿಕೆಯ ಸಂಕೇತ. ಸೂರ್ಯನ ಪ್ರಥಮ ಕಿರಣಗಳು ಮನೆಯೊಳಗೆ ಪ್ರವೇಶಿಸಿದರೆ ಒಳ್ಳೆಯದು ಎನ್ನುವ ನಂಬಿಕೆ ಇದೆ. ಇವರ ನಂಬಿಕೆಗಳ ಜತೆಗೆ ವೈಜ್ಞಾನಿಕ ಕಾರಣಗಳು ಸಹ ಹೊಂದಿಕೊಳ್ಳುತ್ತದೆ. ಹೊಸಪೇಟೆ ತಾಲ್ಲೂಕಿನಲ್ಲಿ ದಕ್ಷಿಣ ದಿಕ್ಕನಲ್ಲಿ ಗಾಳಿ ಅಧಿಕ ಹಾಗೂ ನೈರುತ್ಯ ಮಾರುತಗಳು ಮಳೆಯನ್ನು ತರುವ ಕಾರಣ ದಕ್ಷಿಣ ಪಶ್ಚಿಮಕ್ಕೆ ಬಾಗಿಲು ಹೆಚ್ಚಾಗಿ ಕಂಡು ಬರುವುದಿಲ್ಲ. ತಿಮ್ಮಲಾಪುರದಲ್ಲಿ ದಕ್ಷಿಣದಿಕ್ಕಗೆ ಬಾಗಿಲುಗಳ ಸಂಖ್ಯೆ ಕಡಿಮೆ. ಕಮಲಾಪುರದಲ್ಲಿ ದಕ್ಷಿಣದಿಕ್ಕಗೆ ಮನೆ ಬಾಗಿಲುಗಳಿವೆ. ಇದಕ್ಕೆ ಅವರವ ಾಳಿಗಳೇ ಕಾರಣವಾಗಿರ ಬೇಕು. ಸಾಮಾನ್ಯವಾಗಿ ಇಲ್ಲಿ ಗಂಗೀಯ ಅಂದರೆ ಹೊಳೆ ದಿಕ್ಕಗೆ ಮನೆ ಇರುವುದು ಗೋಚರಿಸುತ್ತದೆ. ಸೂರ್ಯೋದಯದ ಸಂದರ್ಭದಲ್ಲಿ ಸೂರ್ಯನ ಕಿರಣಗಳು ತೀಕ್ಷ್ಣವಾಗಿರುವುದಿಲ್ಲ. ಪೂರ್ವ ಬಾಗಿಲಿನ ಮೂಲಕ ಒಳ ಪ್ರವೇಶಿಸುವ ಕಿರಣಗಳು ಮನೆಯ ಒಳಗೆ ಹೆಚ್ಚಿನ ಶಾಖವನ್ನು ತರುವುದಿಲ್ಲ. ಆದರೆ ೧೨ಗಂಟೆ ಮತ್ತು ನಂತರ ಸೂರ್ಯನ ಪ್ರಕಾಶ ಅಧಿಕ. ಪಶ್ಚಿಮದ ಬಾಗಿಲು ಇಂಥ ಶಾಖಯುಕ್ತ ಬೆಳಕಿನೊಂದಿಗೆ ಮನೆಯೊಳಗೆ ಪ್ರವೇಶಿಸುವ ಕಾರಣ ಬಿಸಿ ಹೆಚ್ಚು. ಉತ್ತರ, ದಕ್ಷಿಣಕ್ಕೆ ಮುಖ ಮಾಡಿ ಮನೆ ಮಾಡಿದಾಗ ಬೆಳಕಿನ ಪ್ರವೇಶವನ್ನು ತಡೆಯಬಹುದು. ಆದರೆ ಈ ಪ್ರದೇಶದಲ್ಲಿ ದಕ್ಷಿಣದಿಕ್ಕನಿಂದ ಗಾಳಿ, ದೂಳು ಹೆಚ್ಚು. ಒಟ್ಟಾರೆ ಪೂರ್ವ ಮತ್ತು ಉತ್ತರ ದಿಕ್ಕನಲ್ಲಿ ಬಾಗಿಲುಗಳು ಬಂದರೆ

ಅನುಕೂಲ. ಕ್ಷೇತ್ರಕಾರ್ಯದಲ್ಲಿಯೂ ಹೆಚ್ಚಾಗಿ ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಬಾಗಿಲುಗಳಿರುವ ಮನೆಗಳು ಕಂಡು ಬಂದಿವೆ.

ಹೊಸಪೇಟೆ ತಾಲ್ಲೂಕಿನಲ್ಲಿ ಮಳೆ ವಿರಳವಾಗಿದೆ. ಆದ್ದರಿಂದ ಈ ಪ್ರದೇಶಗಳಲ್ಲಿ ಸಮತಟ್ಟಾದ ಮೇಲ್ಛಾವಣಿಯನ್ನು ಹೊಂದಿದ ಮನೆಗಳನ್ನು ಕಾಣಬಹುದು. ಮಳೆ ಬಂದಾಗ ಮಾಳಿಗೆಯಿಂದ ನೀರು ಹರಿಯಲು ಹರಿನಾಳಿಗೆಯ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಕಮಲಾಪುರ ಮತ್ತು ತಿಮ್ಮಲಾಪುರದಲ್ಲಿ ಗುಡಿಸಲುಗಳ ಮೇಲ್ಛಾವಣಿ ಇಳಿಜಾರಾಗಿದೆ. ಇದಕ್ಕೆ ಹೆಚ್ಚಿನ ಮಳೆ ಕಾರಣವಲ್ಲ. ಗುಡಿಸಲು ಕಟ್ಟುವ ತಾಂತ್ರಿಕತೆ ಮತ್ತು ಇವರು ಬಳಸಿದ ಮಾಧ್ಯಮ ಇದಕ್ಕೆ ಕಾರಣ. ಎರಡು ಊರುಗಳಲ್ಲಿ ಗುಡಿಸಲುಗಳಿಗೆ ಬಳಸಿರುವ ವಸ್ತುಗಳು ಆಯಾ ಪ್ರದೇಶದಲ್ಲಿ ಸಿಗುವ ಸಂಪನ್ಮೂಲವನ್ನು ಆಧರಿಸಿವೆ. ತಿಮ್ಮಲಾಪುರದ ಸುತ್ತ ತಾಳೆಮರಗಳು ಸಿಗುವುದರಿಂದ ಇವರು ತಾಳೆ ತೀರು, ಗರಿಗಳಿಂದ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ತಾಳೆಯಗರಿಯ ಮೇಲೆ ಬೇರೆ ಕಡೆಯಿಂದ ಕಬ್ಬಿನ ಒಗಡನ್ನು ತಂದು ಮೇಲೆ ಹೊದಿಕೆ ಹಾಕಿಕೊಂಡಿದ್ದಾರೆ. ಕೆಲವು ಮನೆಗಳಲ್ಲಿ ಗೋಡೆಗೆ ಬದಲಾಗಿ ತಾಳೆಯ ದಿಂಡಿನಿಂದಲೇ ನೆರಿಕೆ ಕಟ್ಟಿಕೊಂಡಿದ್ದಾರೆ. ಕಮಲಾಪುರದಲ್ಲಿ ಬೇವು, ಹತ್ತಿ ಮುಂತಾದ ಮರಗಳನ್ನು ತೀರುಗಳಾಗಿ ಬಳಸಿಕೊಳ್ಳಲಾಗಿದೆ. ಮೇಲ್ಛಾವಣಿಗೆ ತೆಂಗಿನ ಗರಿಗಳನ್ನು ಬಳಸಿಕೊಂಡು ಅದರ ಮೇಲೆ ಕೆರೆಯಲ್ಲಿ ಸಿಗುವ ಆಪು ಅಥವಾ ಸುತ್ತಲು ಬೆಳೆಯುವ ಕಬ್ಬಿನ ಒಗಡನ್ನು ಹೊದಿಸಿಕೊಂಡಿರುವುದು ಕಂಡು ಬರುತ್ತದೆ.

೩.೩.೩ ಆರ್ಥಿಕತೆ :

ವ್ಯಕ್ತಿಯ ಆರ್ಥಿಕ ಮಟ್ಟ ಮತ್ತು ಅವನ ವೃತ್ತಿಯೂ ಮನೆಯ ನಿರ್ಮಾಣದಲ್ಲಿ ಪ್ರಾಮುಖ್ಯತೆ ಪಡೆದಿದೆ. ಈ ಹಿನ್ನಲೆಯಲ್ಲಿ ವ್ಯಕ್ತಿಯ ಆರ್ಥಿಕತೆ ಮತ್ತು ವೃತ್ತಿಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳನ್ನು ಕೇಳಲಾಗಿತ್ತು. ಇವೆರಡು ಊರುಗಳಲ್ಲಿ ಕೆಲವು ಕುಟುಂಬಗಳನ್ನು ಬಿಟ್ಟರೆ ಉಳಿದವರು ಬಡತನದ ರೇಖೆಗಿಂತ ಕೆಳಮಟ್ಟದ ಜೀವನವನ್ನು ಸಾಗಿಸುತ್ತಿದ್ದಾರೆ. ಹಿಂದೆ ಬೇಡರು ಬೇಟೆ, ಪಶುಪಾಲನೆ ಮತ್ತು ಸೈನಿಕ ವೃತ್ತಿಯನ್ನು ಕೈಗೊಂಡಿದ್ದರು. ಆದರೆ ಇಂದು ಕೃಷಿಕರಾಗಿ ಪರಿವರ್ತಿತರಾಗಿದ್ದಾರೆ.

ಆರ್ಥಿಕ ವ್ಯವಸ್ಥೆಯ ಮೇಲೆ ಕಮಲಾಪುರ ಮತ್ತು ತಿಮ್ಮಲಾಪುರದ ಮನೆಗಳನ್ನು ಮೂರು ವಿಧವಾಗಿ ವರ್ಗೀಕರಿಸಲಾಗಿದೆ.

೧. ಮಾಳಿಗೆ ಮನೆಗಳು

೨. ಗುಡಿಸಿಲುಗಳು

೩. ನೆರಿಕೆ ಗುಡಿಸಿಲುಗಳು

ಸ್ವಂತ ಭೂಮಿಯನ್ನು ಹೊಂದಿದ್ದು ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡ ಕುಟುಂಬಗಳ ಮನೆಗಳು ಮಾಳಿಗೆಮನೆಗಳಾಗಿವೆ. ಕಮಲಾಪುರದ ಮ್ಯಾಸಕೇರಿಗಳಲ್ಲಿ ಮಣ್ಣಿನ ಮನೆಗಳನ್ನೇ ಹೆಚ್ಚಾಗಿ ಕಾಣಬಹುದು. ಇವು ದೀರ್ಘಾವಧಿಯವರೆಗೂ ಬಾಳಿಕೆ ಬರುತ್ತವೆ. ಕೆಲವರಿಗೆ ಇಂಥ ಮನೆಗಳು ತಮ್ಮ ಹಿರಿಯರಿಂದ ಬಂದಿವೆ. ಇಂದು ಈ ಮನೆಗಳ ನಿರ್ವಹಣೆಗೂ ಕೆಲವರು ಅಸಮರ್ಥರಾಗಿದ್ದಾರೆ. ಸ್ವಲ್ಪ ಭೂಮಿಯನ್ನು ಹೊಂದಿದ್ದು, ಜೀವ ನಿರ್ವಹಣೆಗೆ ಕಷ್ಟವಾಗಿ ಕೂಲಿ ಮಾಡಿಕೊಂಡಿರುವ ಕುಟುಂಬಗಳ ಮನೆಗಳು ಮಣ್ಣಿನ ಗೋಡೆಯ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ಇವರಿಗಿಂತ ಕೆಳಮಟ್ಟದಲ್ಲಿರುವ ಸಣ್ಣ ಪುಟ್ಟ ಕೆಲಸವನ್ನು ನಿರ್ವಹಿಸುವ ಕೆಲವರು ನೆರಿಕೆ ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಮಾಳಿಗೆಮನೆಯನ್ನು ಬಿಟ್ಟರೆ ಇವೆರಡು ಮನೆಗಳು ರಚನೆಯಲ್ಲಿ ಸರಳವಾಗಿವೆ. ಮಾಳಿಗೆ ಮನೆಗಳ ನಿರ್ಮಾಣಕ್ಕೆ ಬೇರೆ ಪ್ರದೇಶಗಳಿಂದ ವಸ್ತುಗಳನ್ನು ತರಬೇಕು. ಆದರೆ ಕೆಳಗಿನ ಎರಡು ವರ್ಗಗಳಲ್ಲಿ ಪ್ರಕೃತಿಯಲ್ಲಿ ಸಿಗುವ ವಸ್ತುಗಳನ್ನೇ ಬಳಸಿಕೊಂಡು ಮನೆ ಕಟ್ಟುತ್ತಾರೆ. ಇದರಿಂದ ಮನೆ ಕಟ್ಟಲು ತಗಲುವ ವೆಚ್ಚವು ಕಡಿಮೆ. ಇಂದು ಕೆಲವು ಶ್ರೀಮಂತರು ಹೊರ ಊರಿನಿಂದ ಸಿಮೆಂಟು, ಮಂಗಳೂರು ಹೆಂಚು, ಇಟ್ಟಿಗೆ, ಕಲ್ಲುಗಳನ್ನು ತಂದು ಮನೆಕಟ್ಟಿಕೊಳ್ಳುತ್ತಿದ್ದಾರೆ.

ತಿಮ್ಮಲಾಪುರದ ಆರ್ಥಿಕತೆಯ ಕಾರಣವಾಗಿ ಮತ್ತು ಈ ಊರು ಕೇವಲ ೪೩ ವರ್ಷಗಳ ಹಿಂದ ನಿರ್ಮಿತಗೊಂಡಿರುವುದರಿಂದ ಇಲ್ಲಿನ ಜನ ತಾತ್ಕಾಲಿಕ ಗುಡಿಸಲುಗಳಲ್ಲಿಯೇ ವಾಸಿಸುತ್ತಿದ್ದಾರೆ. ಈ ಪ್ರದೇಶದಲ್ಲಿ ವ್ಯಾಪಾರ - ವಾಣಿಜ್ಯವಾಗಲಿ, ಕೈಗಾರಿಕೆಯಾಗಲಿ, ನೀರಾವರಿ ವ್ಯವಸ್ಥೆಯಾಗಲಿ ಇಲ್ಲ. ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದದೇ ಇರುವ ಈ ಊರಿನ ಮನೆಗಳಲ್ಲಿ ಶ್ರೀಮಂತಿಕೆಯ ಅನ್ವೇಷಣೆ ಎಷ್ಟು ಸರಿ ? ಇದೇ ಊರಿನಲ್ಲಿ ವ್ಯಾಪಾರ ಮಾಡಿಕೊಂಡು ಬಂದಿರುವ ಶೆಟ್ಟರ ಮನೆಗಳು ಮಾತ್ರ

ಕಲ್ಲಿನಿಂದ ನಿರ್ಮಿತಗೊಂಡಿವೆ ಇದಕ್ಕೆ ಕಾರಣ ಅವರ ಆರ್ಥಿಕ ಮಟ್ಟ. ತಿಮ್ಮಲಾಪುರದಲ್ಲಿ ಹತ್ತು, ಹದಿನೈದು ಜನತಾ ಮನೆಗಳನ್ನು ಸಹ ಸಹಾಯ ಕಾಣಬಹುದು.

ಇದಕ್ಕೆ ವಿರುದ್ಧವಾದ ವ್ಯವಸ್ಥೆ ಕಮಲಾಪುರದಲ್ಲಿದೆ. ವ್ಯವಸಾಯಕರು ನೂರು, ಐನೂರು ವರ್ಷಗಳ ಹಿಂದೆಯೇ ಈ ಊರಿಗೆ ವಲಸೆ ಬಂದಿದ್ದಾರೆ. ಹಿಂದಿನ ತಲೆಮಾರಿನವರು ಇವರುಗಳಿಗೆ ಮಾಳಿಗೆ ಮನೆಗಳನ್ನು ಬಿಟ್ಟು ಹೋಗಿದ್ದಾರೆ. ಈ ಊರಿನಲ್ಲಿ ವ್ಯಾಪಾರ-ವಾಣಿಜ್ಯಕ್ಕೆ ಪ್ರೋತ್ಸಾಹವಿದೆ. ನೀರಾವರಿ ಭೂಮಿಯ ಕಾರಣ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾರೆ. ವರ್ಷದ ಎಲ್ಲಾ ದಿನಗಳಲ್ಲಿಯೂ ಕೂಲಿಮಾಡಿ ಜೀವಿಸಲು ಅವಕಾಶವಿದೆ. ಒಂದು ವೇಳೆ ಕೂಲಿ ಸಿಗದಿದ್ದರೆ ಕೆರೆಯ ಮೀನು ಹಿಡಿದು ಜೀವನವನ್ನು ಸಾಗಿಸುವ ಜನರು ಇದ್ದಾರೆ. ಇವೆಲ್ಲ ಕಾರಣಗಳಿಂದಾಗಿ ಕಮಲಾಪುರದ ಜನ ತಿಮ್ಮಲಾಪುರದ ಜನರ ಜೀವನ ಮಟ್ಟಕ್ಕಿಂತ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿದ್ದಾರೆ. ಆದರೂ ಕೆಲವು ಜನ ಗುಡಿಸಲು ಮತ್ತು ನರಿಕೆ ಮನೆಗಳಲ್ಲಿ ವಾಸವಾಗಿದ್ದಾರೆ.

ವ್ಯಕ್ತಿಗಳು ಮಾಡುವ ವೃತ್ತಿಗಳು ಸಹ ಮನೆಯ ರಚನಾವಿನ್ಯಾಸದ ಮೇಲೆ ಪ್ರಭಾವ ಬೀರುತ್ತದೆ. ತಿಮ್ಮಲಾಪುರದ ಶೇಕಡ ೯೯ರಷ್ಟು ಜನ ಕೃಷಿಯಲ್ಲಿ ತೊಡಗಿದ್ದಾರೆ. ಇವರ ಮನೆಗಳಲ್ಲಿ ದನದಹಟ್ಟಿ, ದನದಕ್ಕಿ, ಗ್ವಾಡ್ಲಿ, ಮೂಸರಿ ಬಾನಿ, ಅಟ್ಟ ಮುಂತಾದವುಗಳನ್ನು ಕಾಣಬಹುದು. ಕೆಲವರು ಆಡುಗಳನ್ನು ಸಾಕಿಕೊಂಡಿರುವ ಕಾರಣ ಅವರ ಮನೆಗಳಲ್ಲಿ ಆಡಿನ ಹಟ್ಟಿಗಳನ್ನು ಕಟ್ಟಿಕೊಂಡಿರುವರು. ಇವರು ತಮ್ಮ ಕಬ್ಬಿಣದ ಕೃಷಿ ಸಾಮಾನುಗಳನ್ನು ಮನೆಯೊಳಗೆ ಮೂಲೆಗಳಲ್ಲಿ ಮತ್ತು ಮರದ ನೇಗಿಲ, ಕುಂಟೆ, ಬಂಡಿಗಳನ್ನು ಮನೆಯ ಹೊರಗೆ ಇಟ್ಟುಕೊಳ್ಳುವರು. ಹಗ್ಗ, ಮೂಗುದಾರಗಳನ್ನು, ಚಪ್ಪರದ ಇಂದಿಗಿಗಳಿಗೆ ಕಟ್ಟಿರುತ್ತಾರೆ. ಇವು ಬೇಡರು ಕೃಷಿಕರಾಗಿ ಪರಿವರ್ತಿತರಾಗಿರುವುದನ್ನು ಸೂಚಿಸುತ್ತದೆ. ಇವರು ಇಂದಿಗೂ ಬೇಟೆಯ ಆಯುಧಗಳನ್ನು ಪೂಜಿಸುತ್ತಾರೆ. ಇವುಗಳಿಂದ ಇವರು ಬಹು ಹಿಂದೆ ಬೇಟೆಯನ್ನು ಆಡುತ್ತಿದ್ದರು ಎಂಬುದಕ್ಕೆ ನಿದರ್ಶನವಿಕ್ಕುತ್ತದೆ.

ಕಮಲಾಪುರದಲ್ಲಿ ಇಂದಿಗೂ ಬ್ಯಾಟೆಗೆ ಹೋಗುವ ಬೇಡರಿದ್ದಾರೆ. ಇವರಿಗೆ ಕೃಷಿಗಿಂತ ಪ್ರಾಣಿ ಬ್ಯಾಟೆ ಮತ್ತು ಮೀನು ಬ್ಯಾಟೆಯಲ್ಲಿ ಹೆಚ್ಚು ಆಸಕ್ತಿ. ಮ್ಯಾಸಮಂಡಲದಲ್ಲಿ ಭರ್ಜಿ, ಬಂದೂಕು ಮತ್ತು

ಮೀನು ಬಲೆಗಳಿಗೆ ಪ್ರತ್ಯೇಕ ಸ್ಥಾನವನ್ನು ಮನೆಯಲ್ಲಿ ನೀಡಿದ್ದಾರೆ. ಆಯುಧಗಳನ್ನು ಮನೆಯ ಒಂದು ಮೂಲೆಯಲ್ಲಿ ಅಥವಾ ಜಂತಿಯಲ್ಲಿ ಅಥವಾ ಗೋಡೆಗಳಿಗೆ ನೇತುಹಾಕಿರುವುದು ಕಂಡುಬರುತ್ತದೆ. ಇವುಗಳ ಮೇಲೆ ಪವಿತ್ರಭಾವನೆಯುಂಟು. ಇವುಗಳನ್ನು ಹೆಂಗಸರು ಮುಟ್ಟುವಂತಿಲ್ಲ. ಇದನ್ನು ಗಮನಿಸಿದರೆ ಹೆಂಗಸರು ಬೇಟೆಯಾಡುವಂತಿರಲಿಲ್ಲ ಎಂಬುದು ತಿಳಿಯುತ್ತದೆ. ಬೇಟೆ ಮತ್ತು ಸೈನಿಕ, ಪಶುಪಾಲನ ವೃತ್ತಿಯನ್ನು ಕೈಬಿಟ್ಟು ಕೃಷಿಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರೂ, ಇವರು ರೈತಾಪಿಗಳಂತೆ ಮನೆಯಲ್ಲಿ ದನದಕ್ಕಿ ಅಥವಾ ಗ್ಯಾಡ್ಲಿಗಳನ್ನು ನಿರ್ಮಿಸಿಕೊಳ್ಳಲಿಲ್ಲ. ಹೊಲ ಅಥವಾ ಕಣಗಳಲ್ಲಿಯೇ ದನಗಳನ್ನು ಕಟ್ಟುವ ಹಾಗೂ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನಿಡುವ ಅಭ್ಯಾಸವನ್ನು ರೂಢಿಸಿಕೊಂಡಿದ್ದಾರೆ. ಕೆಲವು ಮನೆಗಳಲ್ಲಿ ಮಾತ್ರ ದನಗಳನ್ನು ಕಟ್ಟಿಕೊಳ್ಳಲು ದನದಕ್ಕಿ, ಗ್ಯಾಡ್ಲಿಗಳಿವೆ. ಹಸುಗಳನ್ನು ಸಹ ಇವರು ಮನೆಯಲ್ಲಿ ಕಟ್ಟಿಕೊಳ್ಳುವುದಿಲ್ಲ. ಸಂಜೆ ಇವರ ಕೇರಿಯಲ್ಲಿ ಹಸುಗಳು ಆರಾಮವಾಗಿ ಮಲಗಿರುತ್ತವೆ. ಒಂದು ರೀತಿ ದನದದೊಡ್ಡಿಯಂತೆ ಕಂಡುಬರುತ್ತದೆ. ಇದು ಪಶುಪಾಲನೆ ಬುಡಕಟ್ಟಿನ ಲಕ್ಷಣವಾಗಿದೆ. ಹಿಂದೆ ಸುತ್ತಲು ಮುಳ್ಳಿನ ಬೇಲಿಹಾಕಿ ಹಸುಗಳನ್ನು ಒಳಗೆ ನಿಲ್ಲಿಸುತ್ತಿದ್ದರು. ಇದಕ್ಕೆ ದನದಹಟ್ಟಿ ಅಥವಾ ದನದದೊಡ್ಡಿ ಎಂದು ಕರೆಯುತ್ತಾರೆ. ಆದರೆ ಇಂದು ಮುಳ್ಳಿನ ಬೇಲಿ ಇಲ್ಲವಾದರು ಹಸುಗಳನ್ನು ಮನೆಯಲ್ಲಿ ಕಟ್ಟಿಹಾಕಿಕೊಳ್ಳುವದಿಲ್ಲ.

ಇವೆರಡು ಊರುಗಳಲ್ಲಿ ಬೆಳೆಯುವ ಬೆಳೆಗಳು ಸಹ ಮನೆಯ ಕೆಲವು ಭಾಗಗಳ ಸೃಷ್ಟಿಗೆ ಕಾರಣವಾಗಿದೆ. ತಿಮ್ಮಲಾಪುರದವರು ಜೋಳ, ಸಜ್ಜೆ, ನವಣೆ ಸ್ವಲ್ಪ ಮಟ್ಟಿಗೆ ನೆಲ್ಲು ಮುಂತಾದ ಆಹಾರ ಧಾನ್ಯಗಳನ್ನೇ ಬೆಳೆಯುವುದರಿಂದ ಮನೆಯಲ್ಲಿ ಕರಸಿ (ಕಣಜ) ಗಳಗೆಗಳ ಅವಶ್ಯಕತೆಯಿದೆ. ಹೆಚ್ಚು ಬೆಳೆ ಬಂದಾಗ ಹಗೇವುಗಳ ಬಳಕೆಯೂ ಇದೆ. ಇವುಗಳ ಸಹಾಯದಿಂದ ಮೂರ್ನಾಲ್ಕು ತಿಂಗಳುಗಳ ಕಾಲ ಧಾನ್ಯ ಸಂಗ್ರಹಣೆ ಸಾಧ್ಯ. ಕೃಷಿಕರು ಹೆಚ್ಚಾಗಿ ಈ ರೀತಿಯ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾರೆ. ಕಮಲಾಪುರದಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುವುದರಿಂದ ಇಂಥ ವ್ಯವಸ್ಥೆ ಹೆಚ್ಚಾಗಿ ಕಂಡು ಬರುವುದಿಲ್ಲ. ದಿನ ಬಳಕೆಗೆ ಬೇಕಾದಷ್ಟು ಆಹಾರ ಧಾನ್ಯಗಳನ್ನು ಚೀಲ ಅಥವಾ ಅಡಕಲಗಡಿಗೆಗಳಲ್ಲಿ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಇವೆರಡು ಊರಿನಲ್ಲಿರುವ ಜನ ಸಾಮಾನ್ಯ ಮಟ್ಟದ ಜೀವನ ನಡೆಸುತ್ತಿರುವ

ಕಾರಣ ಹಣ ಸಂಗ್ರಹದ ಅಥವಾ ಅತ್ಯಮೂಲ್ಯವಾದ ವಸ್ತು ಇಲ್ಲದೇ ಸಂಪತ್ತುಗಳನ್ನಿಡಲು ಪ್ರತ್ಯೇಕ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ಕಪಾಟು ಅಥವಾ ಟ್ರಂಕುಗಳ ಬಳಕೆ ಕಡಿಮೆ ಪುಡಿಕಾಸನ್ನು ಗಡಿಗೆಗಳಲ್ಲಿಡುತ್ತಾರೆ. ಮತ್ತು ವಸ್ತ್ರಗಳನ್ನು ನೆಲಗಳಯ ಮೇಲೆ ಹಾಕಿಕೊಂಡಿರುತ್ತಾರೆ.

೩.೩.೪ ಸಾಮಾಜಿಕತೆ:

ಆರ್ಥಿಕ ವ್ಯವಸ್ಥೆಯಂತೆ ಸಾಮಾಜಿಕತೆಗೂ ಮನೆಗೂ ನೇರ ಸಂಬಂಧವಿದೆ. ಇದಕ್ಕೆ ಅನುಗುಣವಾಗಿ ಕುಟುಂಬದ, ಮಹಿಳೆಯರ, ಮನೆಯ ಯಜಮಾನಿಕೆ ಮುಂತಾದ ಸಾಮಾಜಿಕ ವ್ಯವಸ್ಥೆಯ ಕುರಿತು ಅನೇಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಪ್ರಯತ್ನ ಮಾಡಲಾಯಿತು. ಕುಟುಂಬದಲ್ಲಿ ವಾಸಿಸುವ ಜನಸಂಖ್ಯೆ, ಮದುವೆಯ ವ್ಯವಸ್ಥೆ, ಮನೆಯ ಯಜಮಾನಿಕೆ, ಮಹಿಳೆಯರ ಸ್ಥಾನಮಾನ ಮತ್ತು ಇವರಿಗೂ ಸಮಾಜದ ಜೊತೆಗೂ ಇರುವ ಸಂಬಂಧಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು.

ಕ್ಷೇತ್ರಕಾರ್ಯಕ್ಕೆ ಒಳಪಟ್ಟ ಎರಡು ಊರುಗಳಲ್ಲಿ ಅವಿಭಕ್ತ ಕುಟುಂಬ ವ್ಯವಸ್ಥೆಗಿಂತ ಹೆಚ್ಚಾಗಿ ವಿಭಕ್ತ ಕುಟುಂಬ ವ್ಯವಸ್ಥೆಯು ಕಂಡುಬಂದಿತು. ಕೆಲವೇ ಕೆಲವು ಮನೆಗಳಲ್ಲಿ ಮಾತ್ರ **ಅವಿಭಕ್ತ** ಕುಟುಂಬ ವ್ಯವಸ್ಥೆ ಅಸ್ತಿತ್ವದಲ್ಲಿದೆ. ಆರಂಭದಿಂದಲೂ ಬೇಡರಲ್ಲಿ ವಿಭಕ್ತ ಕುಟುಂಬ ವ್ಯವಸ್ಥೆಯನ್ನು ಕಾಣಬಹುದು. ಇವರು ಮದುವೆಯಾದ ನಂತರ ತಮ್ಮ ಸಂಸಾರದ ಜವಾಬ್ದಾರಿಯನ್ನು ತಾವೇ ನಿರ್ವಹಿಸುತ್ತಾರೆ.

ತಿಮ್ಮಲಾಪುರದಲ್ಲಿ ಕುಟುಂಬಗಳು ಬೇರೆಯಾದಂತೆ ಜಾಗ ಇರುವ ಸ್ಥಳದಲ್ಲಿ ಗುಡಿಸಲುಗಳನ್ನು ನಿರ್ಮಿಸಿಕೊಂಡಿದ್ದಾರೆ. ಅಣ್ಣ ತಮ್ಮಂದಿರ ಮನೆಗಳು ಅಕ್ಕಪಕ್ಕದಲ್ಲಿಯೇ ಕಟ್ಟಿಕೊಂಡಿದ್ದಾರೆ. ಹೀಗಾಗಿ ರಕ್ತ ಸಂಬಂಧಿಗಳೆಲ್ಲ ಒಂದೇ ಪ್ರದೇಶದಲ್ಲಿ ನೆಲೆನಿಂತಿದ್ದಾರೆ. ಆದರೆ ಕಮಲಾಪುರದಲ್ಲಿ ಒಂದು ಕುಟುಂಬ ಬೇರೆಯಾದಾಗ ತಮ್ಮ ಮನೆಯಲ್ಲಿಯೇ ಎರಡು ಅಥವಾ ಮೂರು ಭಾಗಗಳನ್ನು ಮಾಡಿಕೊಂಡಿದ್ದಾರೆ. ಈ ಭಾಗಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಕಿರಿಯ ಮಗನಿಗೆ ಪ್ರಾಮುಖ್ಯತೆ ನೀಡುವರು. ಇವನು ಯಾವ ಭಾಗದ ಮನೆಯನ್ನು ಆಯ್ಕೆ ಮಾಡಿಕೊಳ್ಳುವನೊ ಅದನ್ನು ಹೊರತು ಪಡಿಸಿ ಉಳಿದ ಭಾಗವನ್ನು ಇತರರು ಹಂಚಿಕೊಳ್ಳಬೇಕು (ಹೊಲಗಳ ಹಂಚಿಕೆಯಲ್ಲಿಯೂ ಇದೆ ಪದ್ಧತಿ

ಇದೆ). ಕೆಲವು ಮನೆಗಳಲ್ಲಿ ಗೋಡೆಗಳನ್ನು ಕಟ್ಟಿಕೊಳ್ಳದೆಯೇ ಅಡುಗೆ ಮಾತ್ರ ಪ್ರತ್ಯೇಕವಾಗಿ ಮಾಡಿಕೊಳ್ಳುತ್ತಾರೆ. ಇಂಥ ಸಂದರ್ಭದಲ್ಲಿ ಮೂಲದ ಮನೆಗೂ ಇಂದಿನ ಮನೆಗೂ ವ್ಯತ್ಯಾಸ ಉಂಟಾಗುತ್ತದೆ. ದೊಡ್ಡ ದೊಡ್ಡ ಮನೆಗಳು ಸಣ್ಣ ಮನೆಗಳಾಗಿ ಪರಿವರ್ತಿತವಾಗುತ್ತವೆ. ಕುಟುಂಬದ ಗಾತ್ರಕ್ಕೆ ಅನುಗುಣವಾಗಿ ಮನೆಯ ಗಾತ್ರವು ಸಣ್ಣದು ಅಥವಾ ದೊಡ್ಡದಾಗಿರುತ್ತದೆ. ಇವೆರಡು ಊರುಗಳಲ್ಲಿ ಗಮನಿಸಬೇಕಾದ ಅಂಶವೆಂದರೆ ಮನೆಗಳು ಎಷ್ಟೇ ಭಾಗವಾಗಲಿ, ಹೊಸ ಗುಡಿಸಲುಗಳು ನಿರ್ಮಿತವಾಗಲಿ ಆದರೆ ಒಲೆಗಳ ದಿಕ್ಕು ಮಾತ್ರ ಪೂರ್ವ ಪಶ್ಚಿಮವಾಗಿಯೇ ಇರುತ್ತವೆ (ಕೆಲವು ವೈಪರೀತ್ಯಗಳನ್ನು ಹೊರತುಪಡಿಸಿ).

ನಾಯಕ ಸಮಾಜವು ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಗೆ ಒಳಪಟ್ಟಿದೆ. ಆದ್ದರಿಂದ ಇವರಲ್ಲಿ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯಿದೆ. ಹಿರಿಯ ಮಗನೆ ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ಹೊರುತ್ತಾನೆ. ಇವನೇ ಮನೆಯ ಯಜಮಾನ. ಇವನ ನಂತರ ಇವನ ಮಗನಿಗೆ ಯಜಮಾನಿಕೆ. ಈ ಸಮಾಜದಲ್ಲಿ ಮಹಿಳೆಯರಿಗೆ ಹೆಚ್ಚಿನ ಗೌರವವಿಲ್ಲ. ಪಂಚಾಯತಿ, ನ್ಯಾಯತೀರ್ಮಾನಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನವಿಲ್ಲ. ಆದರೆ ಎರಡು ಊರುಗಳಲ್ಲಿ ಕಷ್ಟಪಟ್ಟು ದುಡಿಯುವವರು ಹೆಂಗಸರೆ. ಮನೆಯೊಳಗು ಮತ್ತು ಹೊರಗು ಇವರು ಗಂಡಸರಿಗೆ ಸರಿ ಸಮನಾಗಿ ದುಡಿಯುತ್ತಿದ್ದಾರೆ. ಕುಟುಂಬದ ಆರ್ಥಿಕತೆಯು ಇವರ ಮೇಲೆ ಅವಲಂಬಿತವಾಗಿದೆ ಎಂದರೆ ತಪ್ಪಾಗಲಾರದು.

ಹತ್ತು ಹಲವು ಕಾರಣಗಳಿಗಾಗಿ ನಾಯಕರಲ್ಲಿ ದೇವದಾಸಿ ಪದ್ಧತಿ ಬೆಳೆದು ಬಂದಿದೆ. ಇಂದು ಕಮಲಾಪುರಕ್ಕಿಂತ ತಿಮ್ಮಲಾಪುರದಲ್ಲಿ ಈ ಪದ್ಧತಿ ಜೀವಂತವಾಗಿದೆ. ಈ ವ್ಯವಸ್ಥೆಯಲ್ಲಿ ಹೆಂಗಸರಿಗೂ ಆಸ್ತಿ ದೊರೆಯುತ್ತದೆ. ಗಂಡು ಮಕ್ಕಳಷ್ಟೇ ಅಧಿಕಾರವನ್ನು ಇವರು ಪಡೆದಿರುತ್ತಾರೆ. ತಂದೆ ತಾಯಿಯ ಪೋಷಣೆಯನ್ನು ಗಂಡು ಮಕ್ಕಳಿಗಿಂತ ಹೆಚ್ಚಾಗಿ ಇವರೇ ಮಾಡುತ್ತಾರೆ. ಎಷ್ಟೋ ಕುಟುಂಬಗಳಲ್ಲಿ ಮದುವೆಯಾದ ನಂತರ ಗಂಡು ಮಕ್ಕಳು ತಮ್ಮನ್ನು ರಕ್ಷಿಸುವುದಿಲ್ಲ ಎಂದು ಹೆಣ್ಣು ಮಕ್ಕಳಾದರು ಪೋಷಣೆ ಮಾಡುತ್ತಾರೆ ಎಂಬ ವಿಶ್ವಾಸದಿಂದ ದೇವದಾಸಿಯರನ್ನಾಗಿ ಮಾಡುತ್ತಾರೆ. ಇಂದು ಸಾಮಾಜಿಕವಾಗಿ ಇವರಿಗೆ ಯಾವುದೇ ರೀತಿಯ ಗೌರವವಿಲ್ಲದಿದ್ದರೂ ಹಬ್ಬ, ಜಾತ್ರೆಗಳಲ್ಲಿ ಇವರಿಗೆ ಉನ್ನತ ಸ್ಥಾನ ದೊರೆಯುತ್ತದೆ. ಹುಲಿಗಮ್ಮನನ್ನು ಮಾಡಿದಾಗ ದೇವದಾಸಿಯರನ್ನು ಮನೆಗೆ ಕರೆದು ಊಟ ಹಾಕುವ

[illegible]

[illegible]

[illegible]

ಪದ್ಧತಿ ತಿಮ್ಮಲಾಪುರದಲ್ಲಿ ಇದೆ. ಊರಿನ ಮಂಗಳ ಕಾರ್ಯದಲ್ಲಿ ಇವರೇ ಕಳಸಗಳನ್ನು ಹಿಡಿದುಕೊಂಡು ಮುಂದಿರುತ್ತಾರೆ. ಮನೆಯಲ್ಲಿ ದೇವದಾಸಿಗೆ ಹೆಚ್ಚಿನ ಅಧಿಕಾರವಿದೆ. ಇವಳ ಬೆಡಗಿನ ಹೆಸರೇ ಮಕ್ಕಳಿಗೂ ಬರುತ್ತದೆ. ತಿಮ್ಮಲಾಪುರದಲ್ಲಿ ದೇವದಾಸಿಯ ಕುಟುಂಬದಲ್ಲಿ ವೈವಾಹಿಕ ಸಂಬಂಧ ಬೆಳೆಸುತ್ತಾರೆ. ಆದರೆ ಕಮಲಾಪುರದಲ್ಲಿ ದೇವದಾಸಿಯರಿಗೆ ಗೌರವವಿಲ್ಲ. ಇವರು ದೇವದಾಸಿ ಕುಟುಂಬದಲ್ಲಿ ವೈವಾಹಿಕ ಸಂಬಂಧ ಬೆಳೆಸಲಿಚ್ಛಿಸುವುದಿಲ್ಲ.

ಮ್ಯಾಸಬೇಡರಲ್ಲಿ ಗಂಡುದೇವರ ಗುಡಿಗಳಿಗೆ ಮಹಿಳೆಯರ ಪ್ರವೇಶ ನಿಷಿದ್ಧ. ಇವರಲ್ಲಿ ಹೆಣ್ಣು ಮಕ್ಕಳು ಪೂಜೆಯನ್ನು ಮಾಡುವಂತಿಲ್ಲ. ಆದರೆ ದೇವದಾಸಿಯರಿಗ ಹೆಣ್ಣುದೇವತೆಗಳನ್ನು ಪೂಜೆ ಮಾಡುವ ಅಧಿಕಾರವುಂಟು. ಮಾರಮ್ಮನನ್ನು ನಿಜಲಿಂಗಮ್ಮನನ್ನು ಪೂಜೆ ಮಾಡಲು ದೇವದಾಸಿಯರನ್ನು ಬಿಡುವ ಪದ್ಧತಿ ಇಲ್ಲಿ ಕಂಡುಬರುತ್ತದೆ.

೩.೩.೫ ಧಾರ್ಮಿಕತೆ :

ಬೇಡ ಜನಾಂಗದಲ್ಲಿ ಶೈವ ಮತ್ತು ವೈಷ್ಣವ ಸಂಪ್ರದಾಯದವರಿಬ್ಬರು ಇದ್ದಾರೆ. ಊರ ನಾಯಕರಲ್ಲಿ ಹೆಣ್ಣು ದೇವತೆ ಹುಲಿಗೆಮ್ಮನನ್ನು ಮತ್ತು ಗಂಡುದೇವತೆ ಆಂಜನೇಯನನ್ನು ಆರಾಧಿಸುತ್ತಾರೆ. ತಿಮ್ಮಲಾಪುರದ ಪ್ರತಿಯೊಬ್ಬ ನಾಯಕನು ಮದುವೆಗೆ ಮುಂಚೆ ಮುದ್ರೆಹಾಕಿಸಿಕೊಂಡು ಗೋಪಾಳವನ್ನಿಡಿದು ಕೊಂಡು ಐದು ಮನೆಯಲ್ಲಿ ಬಿಕ್ಷೆ ಬೇಡಬೇಕು. ತಿಮ್ಮಲಾಪುರದ ಎಲ್ಲ ಮನೆಗಳ ಜಗಲಿಯ ಮೇಲೆ ಗೋಪಾಳ ಅಥವಾ ಗರುಡಗಂಬವನ್ನು ಕಾಣಬಹುದು. ಹಿಂದೆ ದೇವದಾಸಿಯರಿಗೂ ಮುದ್ರೆಹಾಕುತ್ತಿದ್ದರು. ಈ ಅಂಶವನ್ನು ಗಮನಿಸಿದಾಗ ಬೇಡ ಸಮುದಾಯದ ಮೇಲೆ ಶ್ರೀವೈಷ್ಣವ ಪಂಥ ಬೀರಿದ ಪ್ರಭಾವವನ್ನು ಕಾಣಬಹುದು.

ಕಮಲಾಪುರದಲ್ಲಿ ನಾಮ ಮತ್ತು ವಿಭೂತಿ ಧರಿಸುವ ಶೈವ ಮತ್ತು ವೈಷ್ಣವ ಸಂಪ್ರದಾಯದವರಿದ್ದಾರೆ. ಮಂದಲನಾಯಕನ ಗುಂಪಿನವರಿಗೆ ನಾಮದವರು, ಮಲ್ಲನಾಯಕನ ಗುಂಪಿನವರಿಗೆ ಲಿಂಗದವರು ಎಂದೂ ಕರೆಯುತ್ತಾರೆ. ಈ ಗುಂಪುಗಳ ನಡುವೆ ವೈವಾಹಿಕ ಸಂಬಂಧ ಏರ್ಪಟ್ಟಿದೆ. ಮಲ್ಲನಾಯಕನ ಗುಂಪಿನವರಿಗೆ ಮಂದಲ ನಾಯಕರ ಗುಂಪಿನವರು ಬೀಗರಾಗುತ್ತಾರೆ.

ಇವೆರಡು ಗುಂಪಿನ ಜೊತೆ ವೈವಾಹಿಕ ಸಂಬಂಧ ಬೆಳೆಸಿರುವ ಪಾಮ್ಮಡಲರು, ಬುಟ್ಟಗಲರು ಮುಂತಾದವರು ವಿಭೂತಿ ಮತ್ತು ನಾಮ ಎರಡನ್ನೂ ಬಳಸುತ್ತಾರೆ. ಮ್ಯಾಸಬೇಡರ ಹೆಂಗಸರು ಧರಿಸುವ ತಾಳಿಯಲ್ಲಿ ನಾಮ ಅಥವಾ ಲಿಂಗದ ಮುದ್ರೆ ಇರುತ್ತದೆ. ಇವರ ಮನೆಗಳಲ್ಲಿ ಗೋಪಾಳ ಕಂಡು ಬರುವುದಿಲ್ಲ. ನಾಯಕನಹಟ್ಟಿತಿಪ್ಪೇಸ್ವಾಮಿ, ಗಾದ್ರಿಪಾಲಯ್ಯ, ಈರಣ್ಣ, ಹಂಪಿಯ ವಿರೂಪಾಕ್ಷನನ್ನು ಮತ್ತು ಅಹೋಬಲನರಸಿಂಹಸ್ವಾಮಿ, ತಿರುಪತಿ ತಿಮ್ಮಪ್ಪನನ್ನು ಇವರು ಮನೆದೇವರುಗಳನ್ನಾಗಿ ಪೂಜೆ ಮಾಡುತ್ತಾರೆ.

ಮ್ಯಾಸಬೇಡರು ಹೆಣ್ಣುದೇವತೆಯಾದ ಮಾರಮ್ಮನನ್ನು ಪೂಜೆಮಾಡುವರು. ತಿಮ್ಮಲಾಪುರದ ಊರನಾಯಕರು ಹುಲಿಗೆಮ್ಮನಿಗೆ ಮನೆಯಲ್ಲಿ ಪ್ರತಿವರ್ಷ ಪೂಜೆ ಮಾಡುವಂತೆ ಮಾರಮ್ಮನನ್ನು ಇವರು ಪೂಜೆ ಮಾಡುವುದಿಲ್ಲ. ಇಬ್ಬರು ಸಹ ಪ್ರಕೃತಿಯ ಆಕಾರದಲ್ಲಿಯೇ ಈ ದೇವತೆಗಳನ್ನು ಆರಾಧಿಸುತ್ತಾರೆ. ಊರನಾಯಕರು ಬೇವಿನ ಕಂಬಕ್ಕೆ ಪೂಜಿಸುತ್ತಾರೆ. ಮ್ಯಾಸನಾಯಕರು ಮಣ್ಣಿನ ಮಡಿಕೆಯನ್ನು ಮಾರಮ್ಮ ಎಂದೇ ಪೂಜೆ ಮಾಡುತ್ತಾರೆ. ಎಮ್ಮಲರು ಎಂಬ ಬೆಡಗಿಗೆ ಸೇರಿದವರ ಮನೆದೇವರಾಗಿ ಪೂಜಿಸುವ ಮಾರಮ್ಮನಿಗೆ ಬೆಳ್ಳಿಯ ಮುಖವಾಡವನ್ನಿಟ್ಟು ಆರಾಧಿಸುವರು. ಊರನಾಯಕರ ಕೆಲವು ಮನೆಗಳಲ್ಲಿಯೂ ಬೇವಿನ ಕಂಬಗಳಿಗೆ ಬೆಳ್ಳಿಯ ಮುಖವಾಡವನ್ನಿಡುವರು.

ಬೇಡರು ಪ್ರಮುಖವಾಗಿ ಯುಗಾದಿ, ದಸರಾ, ನಾಗರಪಂಚಮಿಯನ್ನು ಆಚರಿಸುವರು. ಹುಣ್ಣಿಮೆ, ಅಮಾವಾಸ್ಯೆಗಳಲ್ಲಿ ಸಿಹಿಮಾಡಿಕೊಂಡು ಉಣ್ಣುವ, ದೇವರಿಗೆ ಕಾಯಿ ಒಡೆಸಿಕೊಂಡು ಬರುವ ಪದ್ಧತಿಯಿದೆ. ಹಬ್ಬಗಳನ್ನು ಊರನಾಯಕರು ಪ್ರತ್ಯೇಕವಾಗಿ ಮನೆಯಲ್ಲಿಯೇ ಆಚರಿಸಿದರೆ, ಮ್ಯಾಸನಾಯಕರು ಹಬ್ಬಗಳನ್ನು ಸಾಮೂಹಿಕವಾಗಿ ಆಚರಿಸುತ್ತಾರೆ. ಯುಗಾದಿಯಲ್ಲಿ ಆರು ಕೇರಿ ಜನ ಪ್ರತ್ಯೇಕವಾಗಿ ಗುಂಪು ಗೂಡಿ ಆಯುಧಗಳನ್ನಿಡಿದುಕೊಂಡು ಬ್ಯಾಟೆಗೆ ಹೋಗುವರು. ದಸರಾದಲ್ಲಿ ಮಾತ್ರ ಮನೆಯಲ್ಲಿ ಹಿರಿಯರ ಪೂಜೆಯನ್ನು ಮಾಡಿಕೊಳ್ಳುವರು. ಪೆಟ್ಟಿಗೆಗಳನ್ನು ಹೊಂದಿರುವ ಕೆಲವು ಬೆಡಗಿನವರು ಮೂರು ಅಥವಾ ಐದು ವರ್ಷಕ್ಕೊಮ್ಮೆ ತಮ್ಮ ದೇವರನ್ನು ನದಿಗೆ ತೆಗೆದುಕೊಂಡು ಹೋಗಿ ತೊಳೆದುಕೊಂಡು ಬಂದು ಪೂಜೆಮಾಡುವರು. ಈ ಸಂದರ್ಭದಲ್ಲಿ ಗುಗ್ಗರಿ ಹಬ್ಬವನ್ನು ಆಚರಿಸುವರು. ಇವರು ಬರತಿ ಹುಣ್ಣಿಮೆಯ ಸಂದರ್ಭದಲ್ಲಿ ಈ ಜಾತ್ರೆಯನ್ನು ನಡೆಸುವರು.

ಊರ ಜಾತ್ರೆಗಳಲ್ಲಿ ಅಂದರೆ ನಗರೇಶ್ವರ ಮತ್ತು ತಂಬಿ ಹುಣ್ಣಿಮೆಯನ್ನು ಆಚರಿಸಿದರೂ. ಇವರಿಗೆ ತಮ್ಮದೇ ಜಾತ್ರೆ ಪ್ರಮುಖವಾಗಿದೆ. ಇದೀ ಮ್ಯಾಸ ಮಂಡಲವು ಈ ಜಾತ್ರೆಯಲ್ಲಿ ಭಾಗವಹಿಸಿದರೂ ಸಹ ಆ ದೇವರನ್ನು ಆರಾಧಿಸುವ ಬೆಡಗಿನವರಿಗೆ ಮಾತ್ರ ದೇವತಾಕಾರ್ಯದಲ್ಲಿ ಭಾಗವಹಿಸಲು ಅವಕಾಶ. ಉದಾಹರಣೆಗೆ ಪಾಮ್ಮಡಲರು ಗುರುನಾಥ ಮುತ್ತಯ್ಯನ ಜಾತ್ರೆಯನ್ನು ಮಾಡಿದಾಗ ತಮ್ಮ ಬೆಡಗಿನಲ್ಲಿಯೇ ಅಣ್ಣತಮ್ಮಂದಿರ ಮನೆಗಳವರು ಒಂದೊಂದು ಕೆಲಸಕಾರ್ಯವನ್ನು ಹಂಚಿಕೊಳ್ಳುತ್ತಾರೆ. ದೇವರನ್ನು ಪೂಜಿಸುವ ಕೆಲಸ ಒಬ್ಬರಿಗೆ , ಗರಡುಗಂಬವನ್ನು ಹಿಡಿಯುವ ಕೆಲಸ ಒಬ್ಬರಿಗೆ , ಕೀಲು (ನೀರು) ತರುವ ಕೆಲಸ ಒಬ್ಬರಿಗೆ, ಮೊದಲ ಕಾಸನ್ನು ಒಪ್ಪಿಸುವ ಅಧಿಕಾರ ಒಬ್ಬರಿಗೆ, ಗುಗ್ಗರಿ ಹಂಚುವ ಕಾರ್ಯ ಒಬ್ಬರಿಗೆ ಹೀಗೆ ಕೆಲಸಗಳನ್ನು ಹಂಚಿಕೊಳ್ಳುತ್ತಾರೆ.

ತಿಮ್ಮಲಾಪುರದಲ್ಲಿ ಕರಿಯಮ್ಮನ ಜಾತ್ರೆ ಮಾಡುವವರಾದ್ದರೂ ತಮ್ಮದೇ ಆದ ಪ್ರತ್ಯೇಕ ದೇವರು ಇವರಿಗಿಲ್ಲ. ಸ್ಥಳೀಯ ದೇವತೆಗಳನ್ನೇ ತಮ್ಮ ಮನೆದೇವರಾಗಿ ಮಾಡಿಕೊಂಡಿದ್ದಾರೆ. ಊರಬೇಡರು ಕೃಷಿಕರಾಗಿ ಪರಿವರ್ತಿತರಾದ ಕಾರಣ ಮಣ್ಣೆತ್ತಿನ ಅಮಾವಾಸ್ಯೆ ಮತ್ತು ಕಾರಹುಣ್ಣಿಮೆಯನ್ನು ವಿಶೇಷವಾಗಿ ಆಚರಿಸುತ್ತಾರೆ. ಮಣ್ಣಿನ ಎತ್ತು ಮತ್ತು ಗ್ಯಾಡ್ಲಿಯನ್ನು ಮನೆಯಲ್ಲಿಟ್ಟು ಪೂಜಿಸುವರು. ಕಾರಹುಣ್ಣಿಮೆಯಲ್ಲಿ ಎತ್ತುಗಳಿಗೆ ಅಲಂಕಾರಮಾಡಿ ಊರಿನಲ್ಲಿ ಮೆರವಣಿಗೆ ಮಾಡುವರು. ಆದರೆ ಮ್ಯಾಸಬೇಡರು ಕೃಷಿಕರಾಗಿ ಪರಿವರ್ತನೆಗೊಂಡಿದ್ದರೂ ಸಂಪೂರ್ಣವಾಗಿ ಕೃಷಿಗೆ ಸಂಬಂಧಿಸಿದ ಆಚರಣೆಗಳನ್ನು ಒಪ್ಪಿಕೊಂಡಿಲ್ಲ. ಊರನಾಯಕರಂತೆ ಇವರು ಮಣ್ಣೆತ್ತಿನ ಅಮಾವಾಸ್ಯೆ ಅಥವಾ ಕಾರಹುಣ್ಣಿಮೆಯನ್ನು ಹೆಚ್ಚಾಗಿ ಆಚರಿಸುವುದಿಲ್ಲ.

ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಮ್ಯಾಸರಲ್ಲಿ ವೈಯಕ್ತಿಕ ಆಚರಣೆಗಳಿಗಿಂತ ಸಾಮೂಹಿಕ ಆಚರಣೆಗಳಿಗೆ ಪ್ರಾಮುಖ್ಯತೆ ಹೆಚ್ಚು. ಅಣ್ಣ ತಮ್ಮಂದಿರ ಬೆಡಗುಗಳೆಲ್ಲ ಸೇರಿಕೊಂಡು ಹಬ್ಬವನ್ನು ಆಚರಿಸುತ್ತಾರೆ. ಬೇಟೆಯ ಆಚರಣೆಯನ್ನುಳಿಸಿಕೊಂಡಿರುವಂತೆ ಕೃಷಿಕರಾಗಿದ್ದರು ಕೃಷಿ ಆಚರಣೆಗಳನ್ನು ಹೆಚ್ಚಾಗಿ ಕೈಗೊಳ್ಳುವುದಿಲ್ಲ. ಆದರೂ ಗುಗ್ಗರಿ ಹಬ್ಬವು ಬೇಟೆ ಮತ್ತು ಪಶುಪಾಲಕರು ಕೃಷಿಕರಾಗಿ ಪರಿವರ್ತಿತರಾದ ಬಗ್ಗೆ ತಿಳಿಸುತ್ತದೆ. ಈ ಹಬ್ಬದಲ್ಲಿ ಬೇಡರು ಮಾಂಸವನ್ನು

ಮಾಡುವುದಿಲ್ಲ. ದ್ವಿದಳಧಾನ್ಯಗಳನ್ನು ಬೇಯಿಸಿ ಸಾಮೂಹಿಕವಾಗಿ ಊಟಮಾಡುತ್ತಾರೆ. ಇದರ ಮಾರನೆಯ ದಿನವೇ ಎಲ್ಲರು ತಮ್ಮ ಹೊರದೇವರ ಗುಡಿಯಮುಂದೆ ಸೇರಿ ಬ್ಯಾಟಮಾಡಿಕೊಂಡು ಮಾಂಸದಡಿಗೆ ಮಾಡಿಕೊಂಡು ಸಾಮೂಹಿಕವಾಗಿ ಊಟಮಾಡುತ್ತಾರೆ. ಊರನಾಯಕರು ವೈಯಕ್ತಿಕ ಆರಾಧನೆಗೆ ಪ್ರಾಮುಖ್ಯತೆ ನೀಡಿದ್ದು ತಮ್ಮ ಮನೆಗಳಲ್ಲಿಯೇ ಪೂಜೆ ಪುನಸ್ಕಾರ ಮಾಡಿಕೊಳ್ಳುತ್ತಾರೆ. ಬೇಟೆಯ ಆಚರಣೆಗೆ ಬದಲಾಗಿ ಕೃಷಿ ಆಚರಣೆಗೆ ಪ್ರಾಮುಖ್ಯತೆ ನೀಡಿರುವರು. ಹುಲಿಗೆಮ್ಮನಿಗೆ ಬ್ಯಾಟ ಕಡಿಯುವಾಗ ಜಗಲಿಯ ಮೇಲೆ ಎಡೆಯಿಡುವುದಿಲ್ಲ. ಹುಲಿಗೆಮ್ಮನಿಗೆ ಪ್ರತ್ಯೇಕ ಗದ್ದುಗೆ ಮಾಡಿ ಅಲ್ಲಿ ಬ್ಯಾಟಕಡಿದು ಎಡೆಯಿಡಿಯುತ್ತಾರೆ. ಮಾಂಸದಡಿಗೆ ಮಾಡಿದಾಗ ದೇವರನ್ನು ಪೂಜಿಸುವುದಿಲ್ಲ. ದೇವರ ಮನೆ ಒಳಗೂ ಹೋಗುವುದಿಲ್ಲ.

ಒಟ್ಟಾರೆ ಮ್ಯಾಸಬೇಡರು ಸಾಮೂಹಿಕ ಆಚರಣೆಗೆ ಗಮನ ನೀಡಿರುವ ಕಾರಣಕ್ಕೆ ಅವರ ಮನೆಗಳಲ್ಲಿ ಪ್ರತ್ಯೇಕ ದೇವರ ಕೋಣೆಯಾಗಲಿ ,ಜಗಲಿಯಾಗಲಿ ಕಂಡುಬರುವುದಿಲ್ಲ. ಇದು ಅವರ ಅನನ್ಯತೆಯನ್ನು ತೋರಿಸುತ್ತದೆ. ಆದರೆ ಊರನಾಯಕರಿಗೆ ಮೇಲ್ವರ್ಗದವರ ಪ್ರಭಾವದಿಂದಾಗಿ ಮನೆಯಲ್ಲಿ ದೇವರ ಕೋಣೆ ಮತ್ತು ಜಗಲಿಯನ್ನು ಮಾಡಿಕೊಂಡು ಪೂಜೆ ,ಪುನಸ್ಕಾರಗಳನ್ನು ನಡೆಸಿದ್ದಾರೆ. ಈ ಆಚರಣೆಯ ಕಾರಣ ಮನೆಯಲ್ಲಿ ಮಹಿಳೆಗೆ ಸ್ವಲ್ಪ ಮಟ್ಟಿನ ಸ್ವತಂತ್ರ ಕಡಿಮೆಯಾದಂತಾಗಿದೆ. ಮುಟ್ಟಾದ ಮೂರು ದಿನಗಳವರೆಗೆ ಮಹಿಳೆ ದೇವರ ಜಗಲಿಯ ಸಮೀಪ ಹೋಗುವಂತಿಲ್ಲ.

೩.೩.೬ ಜೀವನಾವರ್ತಗಳು :

ಹುಟ್ಟಿನಿಂದ ಸಾವಿನ ವರೆಗಿನ ಸಂಸ್ಕಾರಗಳನ್ನು ಎಲ್ಲಾ ಜನಾಂಗಗಳಲ್ಲಿಯೂ ಕಾಣಬಹುದು. ಆದರೆ ಇವುಗಳ ಆಚರಣೆಯ ವಿಧಿವಿಧಾನಗಳಲ್ಲಿ ಭಿನ್ನತೆಯಿರುತ್ತದೆ. ಅಂತೆಯೇ ಮ್ಯಾಸಬೇಡರ ಮತ್ತು ಊರಬೇಡರ ಆಚರಣೆಗಳಲ್ಲಿಯೂ ಭಿನ್ನತೆ ಕಂಡುಬರುತ್ತದೆ.

೩.೩.೬.೧ಹುಟ್ಟು :

ಬೇಡರಲ್ಲಿ ಹೆರಿಗೆಯು ಮನೆಯ ಒಳಗೆ ನಡೆಯುತ್ತದೆ. ಹಿಂದೆ ಮ್ಯಾಸಬೇಡರಲ್ಲಿ ಹೆರಿಗೆಯ ನೋವನ್ನು ತಿನ್ನುವ ಹೆಂಗಸನ್ನು ಮನೆಯ ಹೊರಗೆ ತಾತ್ಕಾಲಿಕ ಗುಡಿಸಲನ್ನು ನಿರ್ಮಿಸಿ ಅದರಲ್ಲಿ

ಇರಿಸಲಾಗುತ್ತಿತ್ತಂತೆ. ಆದರೆ ಇಂದು ಆ ಪದ್ಧತಿ ಇಲ್ಲ. ಚಿತ್ರದುರ್ಗದ ಕೆಲವು ಪ್ರದೇಶಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿ ವಾಸವಾಗಿರುವ ಮ್ಯಾಸಬೇಡರು ಸ್ವಲ್ಪ ಮಟ್ಟಿಗೆ ಈ ಪದ್ಧತಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಹೊಸಪೇಟೆ ತಾಲ್ಲೂಕಿನಲ್ಲಿರುವ ಬೇಡರು ಹೆರಿಗೆಗೆ ಪ್ರತ್ಯೇಕ ವ್ಯವಸ್ಥೆಮಾಡದೆ ಪಡಸಾಲೆ ಅಥವಾ ನಡುಮನೆಯ ಒಂದು ಪಕ್ಕವನ್ನು ಬಟ್ಟೆಯ ಪರದೆಯಿಂದ ಭಾಗಮಾಡಿಕೊಂಡು ಆ ಪಕ್ಕದಲ್ಲಿ ಹೆರಿಗೆ ಮಾಡಿಸುತ್ತಾರೆ. ಮಗು ಹುಟ್ಟಿದ ನಂತರ ಬರುವ ಮಾಸವನ್ನು ಹೊಸ ಮಡಿಕೆಯಲ್ಲಿ ತುಂಬಿ ಅದರ ಬಾಯಿಮುಚ್ಚಿ ತಲೆಬಾಗಿಲ ಹೊಸ್ತಿಲಿನ ಮುಂದೆ ಗುಂಡಿತೋಡಿ ಈ ಮಡಿಕೆಯನ್ನಿಟ್ಟು ಪೂಜೆಮಾಡಿ ಗುಂಡಿ ಮುಚ್ಚುತ್ತಾರೆ. ಮ್ಯಾಸಬೇಡರಲ್ಲಿ ಮಾಸವನ್ನು ಮನೆ ಬಾಗಿಲ ಬಲಕ್ಕೆ ಮಗಿಸಿದರೆ, ಊರನಾಯಕರು ಎಡಕ್ಕೆ ಮಾಸ ಮಗಿಸುತ್ತಾರೆ. ಮೂರುದಿನದ ಸೀರಲು ಮಾಡುವಾಗ ಮಾಸಮಗಿಸಿದ ಸ್ಥಳಕ್ಕೆ ಪೂಜೆ ಮಾಡಲಾಗುತ್ತದೆ. ಆಸ್ಪತ್ರೆಯಲ್ಲಿ ಹೆರಿಗೆ ಆದರೆ ಮಾಸಮಗಿಸುವ ಅಥವಾ ಪೂಜೆ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಐದನೇ ದಿನದಲ್ಲಿ ಮನೆ ತೊಳೆದುಕೊಂಡು ಒಂಬತ್ತನೆದಿನ ತೊಟ್ಟಿಲ ಕಟ್ಟುವ ಶಾಸ್ತ್ರ ಮಾಡಿ, ಮಗುವಿಗೆ ನಾಮಕರಣ ಮಾಡುತ್ತಾರೆ. ತೊಟ್ಟಿಲನ್ನು ತಾಯಿಯು ಮಲಗುವ ಕೋಣೆಯಲ್ಲಿಯೇ ಕಟ್ಟುತ್ತಾರೆ. ಮ್ಯಾಸಬೇಡರಲ್ಲಿ ಹುಟ್ಟಿದ ಮಗುವನ್ನು ಮೊರದಲ್ಲಿಟ್ಟು ದಕ್ಷಿಣಕ್ಕೆ ತಲೆ, ಉತ್ತರಕ್ಕೆ ಕಾಲು ಮಾಡಿ ಮಲಗಿಸುತ್ತಾರೆ. ತೊಟ್ಟಿಲು ಕಟ್ಟುವವರೆಗೂ ಮಗು ಮೊರದಲ್ಲಿಯೇ ಮಲಗ ಬೇಕು.

೩.೩.೬.೨ ಮೈನೆರೆಯುವಿಕೆ ಮತ್ತು ಮುಟ್ಟು :

ಮ್ಯಾಸಬೇಡರಲ್ಲಿ ಹೆಣ್ಣು ಮೈನೆರೆತರೆ, ಅವಳ ಸೋದರಮಾವ ಬೇವಿನ ಸೊಪ್ಪಿನಿಂದ ಗುಡಿಸಲು ಹಾಕಿಕೊಡುತ್ತಾನೆ. ಐದುದಿನಗಳವರೆಗೆ ಹೆಣ್ಣು ಈ ಗುಡಿಸಲಿನಲ್ಲಿಯೇ ಇರಬೇಕು. ಆಗ ಅವಳಿಗೆ ಮಣ್ಣಿನ ಪಾತ್ರೆಗಳಲ್ಲಿಯೇ ಆಹಾರವನ್ನು ನೀಡಲಾಗುತ್ತದೆ. ಶಾಸ್ತ್ರಮಾಡಿ ಮನೆಯ ಒಳಗೆ ಹೆಣ್ಣನ್ನು ಕರೆದುಕೊಂಡ ನಂತರ ಸೋದರ ಮಾವನೇ ಗುಡಿಸಲಿಗೆ ಬೆಂಕಿಯಿಟ್ಟು ಸುಡಬೇಕು. ಆದರೆ ಇಂದು ಈ ಪದ್ಧತಿ ನಶಿಸಿಹೋಗಿದೆ. ಮನೆಯ ಹೊರಕಟ್ಟೆಯ ಮೇಲೆ ಅಥವಾ ಮನೆಯ ಒಳಗೆ ಒಂದು ಮೂಲೆಯಲ್ಲಿ ಮೈನೆರೆತ ಹೆಣ್ಣನ್ನು ಐದುದಿನಗಳ ಕಾಲ ಕೂಡಿಸುತ್ತಾರೆ. ಇಂದು ಹೆಣ್ಣಿನ ಮಾವನು ಬೇವಿನ ಕೊಂಬೆಯೊಂದನ್ನು ತಂದು ಕಟ್ಟೆಯಮೇಲಿಡುತ್ತಾನೆ. ಅದರ ನೆರಳಿನಲ್ಲಿಯೇ ಮೈನೆರೆತ ಹೆಣ್ಣು

ಕುಳಿತುಕೊಳ್ಳಬೇಕು. ಒಂದು ದಿವಸಮಾತ್ರ ಮಣ್ಣಿನ ಮಡಿಕೆಯಲ್ಲಿ ಊಟ ಮಾಡಬೇಕು. ಐದನೇದಿನದಲ್ಲಿ ಮನೆಯನ್ನು ಶುದ್ಧ ಮಾಡಿಕೊಂಡು ಹೆಣ್ಣಿಗೆ ಸ್ನಾನಮಾಡಿಸಿ ಒಳಗೆ ಕರೆದುಕೊಳ್ಳುತ್ತಾರೆ. ಈ ದಿನ ತಮಗೆ ಬೇಕಾದ ಮಂದಿಯನ್ನು ಕರೆದು ಊಟ ಹಾಕುತ್ತಾರೆ. ಈ ರಾತ್ರಿ ಕೇರಿಯ ಎಲ್ಲಾ ಜನ ಮಲಗಿದ ನಂತರ ಮನೆಯವರಲ್ಲಿ ಒಬ್ಬರು ಬೇವಿನ ಕೊಂಬೆ ಮತ್ತು ಮಡಿಕೆಯ ಪಾತ್ರೆಯನ್ನು ತೆಗೆದುಕೊಂಡು ಹೋಗಿ ಊರ ಹೊರಗೆ ಎಸೆದು ಬರುವರು. ಹೀಗೆ ಬರುವಾಗ ಬೇವಿನ ಕೊಂಬೆಯನ್ನು ಸುಟ್ಟು ಬರುವ ಪದ್ಧತಿ ಇದೆ. ಈ ಆಚರಣೆಯು ಹಿಂದಿನ ಪದ್ಧತಿಯ ಪಳೆಯುಳಿಕೆಯಾಗಿ ಉಳಿದುಕೊಂಡು ಬಂದಿದೆ.

ಊರನಾಯಕರಲ್ಲಿ ಬೇವಿನ ಕೊಂಬೆಯನ್ನು ತರುವ ಪದ್ಧತಿ ಇಲ್ಲ. ಐದುದಿನ ಹೊರಗೆ ಕೂರಿಸಿ ಸ್ನಾನಮಾಡಿಸಿದ ನಂತರ ಮನೆಯೊಳಗೆ ಕರೆದುಕೊಳ್ಳುತ್ತಾರೆ. ಊರಿಗೆ ಊಟಹಾಕುವುದು ರೂಢಿ. ಎರಡು ಪಂಗಡದಲ್ಲಿಯೂ ಐದು ದಿನಗಳ ರಾತ್ರಿ ಕೇರಿಯ ಹೆಂಗಸರು ಸೇರಿ ಸೋಬಾನ ಪದಗಳನ್ನು ಹೇಳುವರು. ಕೆಲವು ಮನೆಗಳಲ್ಲಿ ಆಸಕ್ತಿಯಿಂದ ಹೆಣ್ಣನ್ನು ಸಿಂಗರಿಸಿ ೧೬ ದಿನಗಳ ರಾತ್ರಿ ಒಂದೊಂದು ವೇಷವನ್ನು ಹಾಕಿಕೂರಿಸಿ ಆರತಿ ಮಾಡುವ ಪದ್ಧತಿಯನ್ನು ಬೆಳೆಸಿಕೊಂಡಿದ್ದಾರೆ. ಆಗ ಕೇರಿಯ ಎಲ್ಲಾ ಮನೆಯವರನ್ನು ಕರೆದು ಕುಂಕುಮ, ಅರಿಶಿಣ ಕೊಟ್ಟು ಕಳುಹಿಸುವರು. ಈ ಆರತಿ ಅಕ್ಷತೆಯು ಮನೆಯ ಪಡಸಾಲೆಯಲ್ಲಿ ಅಥವಾ ಮನೆಯ ಮುಂದಿನ ಕಟ್ಟೆಯ ಮೇಲೆ ನಡೆಯುತ್ತದೆ.

ಈ ಸಮುದಾಯದಲ್ಲಿ ತಿಂಗಳ ಮುಟ್ಟನ್ನು ಮೈಲಿಗೆ ಎಂದು ಪರಿಗಣಿಸಿಲ್ಲ. ತಿಂಗಳ ಮೂರುದಿನ ಮೇಲ್ವರ್ಗದವರಂತೆ ಮನೆಯ ಮೂಲೆಯಲ್ಲಿ ಕೂಡುವುದಿಲ್ಲ. ಸ್ನಾನಮಾಡಿ ದೈನಂದಿನ ಬದುಕಿನಲ್ಲಿ ನಿರತರಾಗುತ್ತಾರೆ. ಈ ಸಂದರ್ಭದಲ್ಲಿ ಮನೆಯ ಎಲ್ಲಾ ಭಾಗಗಳಿಗೂ ಪ್ರವೇಶವಿದೆ. ಊರನಾಯಕರ ಮನೆಯಲ್ಲಿ ದೇವರ ಜಗುಲಿ ಇರುವ ಕಾರಣ ಮುಟ್ಟಾದ ಹೆಣ್ಣು ಪೂಜೆ ಮಾಡುವಂತಿಲ್ಲ ಮತ್ತು ಜಗಲಿಯ ಸಮೀಪ ಹೋಗುವಂತಿಲ್ಲ. ಮ್ಯಾಸಬೇಡರ ಮನೆಗಳಲ್ಲಿ ದೇವರ ಜಗಲಿಯೇ ಇಲ್ಲವಾದ ಕಾರಣ ಈ ಸಮಸ್ಯೆ ಇಲ್ಲ. ಆದರೆ ಪೌಳಿಯ ಬಳಿ ಈ ಹೆಂಗಸು ಹೋಗುವಂತಿಲ್ಲ.

೩.೩.೬.೩ ಮುದ್ರೆಹಾಕಿಸಿಕೊಳ್ಳುವುದು :

ಥರ್ಸ್ಟನ್ ಅವರು ತಮ್ಮ ಕೃತಿಯಲ್ಲಿ ಬೇಡರು ಮುಸ್ಲಿಮರಂತೆ ಮುಂಜಿ ಮಾಡಿಸಿಕೊಳ್ಳುವರು ಎಂದು ದಾಖಲಿಸಿದ್ದಾರೆ (EDGAR THURSTON AND RANGACHARI, K. 1987, P.186). ಆದರೆ ಈ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಇಂಥ ಯಾವುದೇ ಮಾಹಿತಿ ದೊರೆಯಲಿಲ್ಲ. ಮ್ಯಾಸಬೇಡರಲ್ಲಿ ಪೂಜಾರಿಗಳು, ಕಿಲಾರಿಗಳು ಮತ್ತು ಊರನಾಯಕರಲ್ಲಿ ಪ್ರತಿಯೊಬ್ಬ ಗಂಡಸು ಮುದ್ರೆ ಹಾಕಿಸಿಕೊಳ್ಳಬೇಕು. ಈ ಕಾರ್ಯಕ್ರಮವು ದೇವಾಲಯದಲ್ಲಿ ನಡೆಯುವ ಕಾರಣ ಮನೆಯ ಪಾತ್ರ ಇಲ್ಲಿ ಗೌಣವಾಗಿರುತ್ತದೆ.

೩.೩.೬.೪ ಮದುವೆ

ಮ್ಯಾಸನಾಯಕರಲ್ಲಿ ತಲೆಬಾಗಿಲ ಹೊಸ್ತಿಲ ಒಳಗೆ ಅಥವಾ ಮುಂದೆ ತಾಳಿಕಟ್ಟುವುದು. ಹೆಣ್ಣಿನ ಮನೆಯಲ್ಲಿಯೇ ಮದುವೆ ಮಾಡಿಕೊಡಲಾಗುತ್ತದೆ. ಊರ ನಾಯಕರ ಮದುವೆ ಆಚರಣೆಯಲ್ಲಿ ಮೇಲ್ವರ್ಗದವರ ಆಚರಣೆಗಳು ಸೇರಿಕೊಂಡಿವೆ. ಮನೆಯ ಮುಂದೆ ಹಾಲಗಂಬವನ್ನು ನೆಟ್ಟು ಅಂಗಳದಲ್ಲಿ ಚಪ್ಪರವನ್ನು ಹಾಕುವರು. ಈ ಚಪ್ಪರದಲ್ಲಿಯೇ ಗಂಡು ಹೆಣ್ಣಿಗೆ ತಾಳಿಕಟ್ಟುವುದು. ವಧುವರರು ಮನೆಯೊಳಗೆ ಪ್ರವೇಶಿಸುವಾಗ ಮದುಮಕ್ಕಳಿಗೆ ಬಾಗಿಲು ತಡೆಯುವ ಶಾಸ್ತ್ರ, ಹೊಸ್ತಿಲು ಪೂಜೆ, ಮೊಳೆ ಬಡೆಯುವ ಶಾಸ್ತ್ರ, ಸೀರು ಒದೆಯುವ ಶಾಸ್ತ್ರ ಮಾಡಿಸಲಾಗುತ್ತದೆ. ಮದುವೆಯ ಸಂದರ್ಭದಲ್ಲಿ ಮಣ್ಣಿನಿಂದ ಗೋಡೆ ಮತ್ತು ಕಟ್ಟೆಯನ್ನು ಕಟ್ಟುತ್ತಾರೆ. ಇದಕ್ಕೆ ಹಸೆಕಟ್ಟೆಎಂದು ಕರೆಯುತ್ತಾರೆ. ಈ ಕಟ್ಟೆಯ ಮೇಲೆ ಮದುಮಕ್ಕಳನ್ನು ಕೂರಿಸಿ ಆರತಿ ಮಾಡುತ್ತಾರೆ. ಕಟ್ಟೆಯ ಹಿಂದಿನ ಗೋಡೆಯಲ್ಲಿ ಸೂರ್ಯ, ಚಂದ್ರ, ಬಾಸಿಂಗ ಮತ್ತು ಹೂದಂಡೆಯನ್ನು ಚಿತ್ರಿಸಿರುತ್ತಾರೆ. ಸೂರ್ಯ, ಬಾಸಿಂಗವಿರುವ ಕಡೆ ಗಂಡು, ಚಂದ್ರ, ಹೂದಂಡೆಯಿರುವ ಕಡೆ ಹೆಣ್ಣು ಕುಳಿತುಕೊಳ್ಳುತ್ತಾರೆ. ಆರತಿ ಅಕ್ಷತೆಯ ಸಂಭ್ರಮದಲ್ಲಿ ಇಡೀ ಕೇರಿಯ ಅಥವಾ ಊರಿನ ಜನವೇ ಪಾಲ್ಗೊಳ್ಳುತ್ತಾರೆ. ಹಸೆ ಬರೆಯುವ ಪದ್ಧತಿ ಮ್ಯಾಸಬೇಡರಲ್ಲಿ ಕಂಡು ಬರುವುದಿಲ್ಲ.

ಇಂದು ಹೆಚ್ಚಿನ ಮದುವೆಗಳು ಹಂಪಿಯ ಇಲ್ಲವೆ ಹುಲಿಗೆಯ ಗುಡಿಗಳಲ್ಲಿ ನಡೆಯುವುದರಿಂದ ಹಿಂದಿನ ಸಂಪ್ರದಾಯ ಆಚರಣೆಗಳು ಕಡಿಮೆಯಾಗಿವೆ. ಕೆಲವೇ ಕೆಲವು ಮಂದಿ ಮನೆಯ ಮುಂದೆ

ಮದುವೆ ಮಾಡುತ್ತಾರೆ. ಈ ಕಾರಣದಿಂದ ಇಂದು ಮದುವೆ ಸಂದರ್ಭದಲ್ಲಿ ಮಾವಗೆ ದೊರೆತ್ತಿದ್ದ ಪ್ರಾಮುಖ್ಯತೆಯು ಕಡಿಮೆಯಾಗುತ್ತಿದೆ.

೩.೩.೬.೫ ಸಾವು

ವ್ಯಾಸಬೇಡರಲ್ಲಿ ಸತ್ತ ವ್ಯಕ್ತಿಯನ್ನು ಮನೆಯ ಹೊರಗಿಡುವುದಿಲ್ಲ. ವ್ಯಕ್ತಿ ಬದುಕಿ ಬಾಳಿದ ಮನೆಯೊಳಗೆ ಸತ್ತರೇ ಒಳ್ಳೆಯದು, ಒಂದು ವೇಳೆ ವ್ಯಕ್ತಿಯು ಮನೆಯಿಂದ ಹೊರಗೆ ಮರಣ ಹೊಂದಿದರೆ ಶವವನ್ನು ಮನೆಗೆ ತಂದು ದಕ್ಷಿಣಕ್ಕೆ ತಲೆ, ಉತ್ತರಕ್ಕೆ ಕಾಲು ಮಾಡಿ ಮಲಗಿಸುತ್ತಾರೆ. ಶವವು ಅನಾಥವಾಗಿ ಹೊರಗೆ ಇರಬಾರದು. ಶವದ ಮೇಲೆ ಸೂರಿರಬೇಕು. ಬಂಧು ಬಳಗವೆಲ್ಲ ಸೇರಿದ ನಂತರ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಸಮಾಧಿ ಮಾಡುವರು. ಇವರಲ್ಲಿ ಹೆಣವನ್ನು ಹೂಳುವ ಪದ್ಧತಿ ಇದೆ. ಸ್ಮಶಾನಯಾತ್ರೆಯಲ್ಲಿ ಭಾಗವಹಿಸಿದ ಜನ ಊರಿಗೆ ಹಿಂತಿರುಗಿದ ನಂತರ ಸ್ನಾನಮಾಡಿ ಮನೆಯೊಳಗೆ ಬರುತ್ತಾರೆ. ಇದೇ ಸಮಯದಲ್ಲಿ ಮನೆಯನ್ನು ತೊಳೆದು ವ್ಯಕ್ತಿ ಸತ್ತ ಜಾಗದಲ್ಲಿ ದೀಪವನ್ನಿಡುತ್ತಾರೆ. ಹುಟ್ಟಿನಲ್ಲಿ ಮಾಡುವಂತೆ ಸತ್ತಾಗಲೂ ಮೂರುದಿನಗಳ ಕಾರ್ಯ ಮಾಡಲಾಗುತ್ತದೆ. ಸತ್ತ ಮೂರನೇ ದಿನದಲ್ಲಿ ಮೂರುಕೂಳು ಎಂದು ಮಾಡುವರು. ಈ ಸಂದರ್ಭದಲ್ಲಿ ಮಾಡಿದ ಅಡುಗೆಯನ್ನು ಅಣ್ಣತಮ್ಮಂದಿರೇ ಊಟಮಾಡಬೇಕು ಬೇರೆಯವರಿಗೆ ಊಟ ನೀಡುವಂತಿಲ್ಲ. ಊಟಮಾಡಿದ ನಂತರ ಅಡುಗೆ ಉಳಿದರೆ ಅಡುಗೆ ಮನೆಯಲ್ಲಿಯೇ ಗುಂಡಿ ತೋಡಿ ಉಳಿದ ಅಡುಗೆಯನ್ನು ಹಾಕಿ ಮುಚ್ಚುತ್ತಾರೆ, ಹೊರಚೆಲ್ಲುವುದಿಲ್ಲ. ಐದನೆಯ ದಿನ ಮನೆ ತೊಳೆದುಕೊಳ್ಳುವರು ಒಂಬತ್ತನೆಯ ದಿನ ಕೇರಿಯ ಜನಕ್ಕೆ ಊಟ ಹಾಕುವರು. ಊರನಾಯಕರಲ್ಲಿ ಶವವನ್ನು ಮನೆಯ ಹೊರಗೆ ಕಟ್ಟೆಯ ಮೇಲೆ ಮಲಗಿಸುತ್ತಾರೆ. ಕೆಲವರು ಶವವನ್ನು ಕೂರಿಸುತ್ತಾರೆ. ಶವಸಂಸ್ಕಾರದ ನಂತರ ಸ್ನಾನಮಾಡಿಯೇ ಮನೆಯೊಳಗೆ ಪ್ರವೇಶ. ಇವರಲ್ಲಿಯೂ ಮೂರುಕೂಳು, ಐದುದಿನದಲ್ಲಿ ದೇವರನ್ನು ತೊಳೆಯುವುದು, ಒಂಬತ್ತನೇ ದಿನದಲ್ಲಿ ಬ್ಯಾಟಿ ಊಟಮಾಡಿಸುವರು.

ಸತ್ತ ಹಿರಿಯರ ನೆನಪಿಗಾಗಿ ವರ್ಷಕ್ಕೊಮ್ಮೆ ಹಿರಿಯರ ಪೂಜೆಯನ್ನು ಮಾಡಲಾಗುತ್ತದೆ. ಯುಗಾದಿ ಮತ್ತು ದಸರಾದಲ್ಲಿ ಈ ಪೂಜೆಯನ್ನು ಮಾಡುವರು. ಯುಗಾದಿಯಲ್ಲಿ ಸಿಹಿಯನ್ನು

ಮಾರನವಮಿ ಅಥವಾ ದಸರಾದಲ್ಲಿ ಬ್ಯಾಟಿ ಕಡಿಯುವುದು ರೂಢಿ. ವ್ಯಕ್ತಿ ಸತ್ತ ಮೊದಲನೆಯ ವರ್ಷದಲ್ಲಿ ಬ್ಯಾಟಿ ಕಡಿಯುವುದು ಪದ್ಧತಿ. ಹಿರಿಯರ ಪೂಜೆಯ ಸಂದರ್ಭದಲ್ಲಿ ತಮ್ಮ ಹಿರಿಯರು ಬಳಸಿದ ಆಯುಧಗಳಾದ ಗಂಡಗೊಡಲಿ, ಭಲೆವು, ಬಂದೂಕಗಳನ್ನಿಟ್ಟು ಕೊಡದಲ್ಲಿ ನೀರು ತುಂಬಿಸಿಟ್ಟು ಪೂಜೆಮಾಡುತ್ತಾರೆ.

ಮಾನವನಿಗೆ ಹುಟ್ಟಿನ, ರಕ್ತಸ್ರಾವದ, ಸಾವಿನ, ಮರುಹುಟ್ಟಿನ ಬಗ್ಗೆ ಇರುವ ಭಯ, ನಂಬಿಕೆಗಳು ಇಂಥ ಆಚರಣೆಗಳಿಗೆ ಪ್ರೇರೇಪಿಸಿರಬೇಕು. ಸತ್ತ ವ್ಯಕ್ತಿ ಪಿಶಾಚಿಯಾಗಿ ಕಾಡಿಸಬಾರದು ಎಂದು ಅವನಿಗೆ ತೃಪ್ತಿಪಡಿಸುವುದು, ಸತ್ತ ವ್ಯಕ್ತಿ ತಮ್ಮ ಮನೆಯಲ್ಲಿ ಹುಟ್ಟುತ್ತಾನೆಂದು ಅವನ ಸ್ವಾಗತಕ್ಕೆ ಸಿದ್ಧತೆ ಮಾಡಿಕೊಳ್ಳುವುದು ಈ ಆಚರಣೆಯಿಂದ ಸ್ಪಷ್ಟವಾಗುತ್ತದೆ. ಹುಟ್ಟಿನಿಂದ ಸಾವಿನ ವರೆಗಿನ ಈ ಆಚರಣೆಗಳಲ್ಲಿ ಪರೋಕ್ಷವಾಗಿ ಮನೆ ಬಹುಮುಖ ಪಾತ್ರ ವಹಿಸುತ್ತದೆ.

೩.೩.೭ ಮನೆಕಟ್ಟುವ ತಂತ್ರಜ್ಞಾನ

ಮನೆಯ ಶಾಶ್ವತತೆಯ ಬಗ್ಗೆ ಬೇಡರು ವಹಿಸುವ ಕಾಳಜಿಯನ್ನು ಅರಿತುಕೊಳ್ಳುವ ಪ್ರಯತ್ನಿಸಲಾಗಿದೆ. ಬಹು ಹಿಂದೆ ಬೇಡರು ತಮ್ಮ ಮನೆಯನ್ನು ತಾವೇ ಕಟ್ಟಿಕೊಳ್ಳುತ್ತಿದ್ದರಂತೆ. ಆದರೆ ಇಂದು ವಡ್ಡರು, ಉಪ್ಪಾರರು, ಮುಸ್ಲಿಮರು ಇವರ ಮನೆಗಳನ್ನು ಕಟ್ಟುತ್ತಿದ್ದಾರೆ. ಹೀಗಾಗಿ ಇವರಿಂದ ಹಿಂದಿನ ಮನೆಕಟ್ಟುವಿಕೆಯ ತಂತ್ರವನ್ನು ತಿಳಿಯುವುದು ಕಷ್ಟಸಾಧ್ಯವಾಗಿದೆ. ವಡ್ಡ, ಉಪ್ಪಾರ ಮತ್ತು ಮುಸ್ಲಿಮರು ಕಟ್ಟಿದ ಮನೆಗಳು ಆಧುನಿಕ ಅಭಿಯಂತರರು ಮನೆ ಕಟ್ಟುವಂತೆಯೇ ಏಕ ಮಾದರಿಯ ರಚನಾವಿನ್ಯಾಸವನ್ನು ಒಳಗೊಂಡಿದೆ. ಇಂದು ಬೇಡರ ಮನೆಕಟ್ಟುವ ತಂತ್ರಜ್ಞಾನದ ಮಾಹಿತಿ ದೊರೆಯುವುದಿಲ್ಲ. ಕಮಲಾಪುರದ ವೃತ್ತಾಕಾರದ ಪೌಳಿಗಳು ಹಿಂದಿನ ಮನೆಗಳ ಮಾದರಿಯಾಗಿರಬೇಕು ಎಂದು ಊಹಿಸಲಾಗಿದೆ. ತಮ್ಮಲಾಪುರದಲ್ಲಿ ಮಣ್ಣಿನ ಗೋಡೆಯನ್ನು ವಡ್ಡರೇ ಕಟ್ಟಿದರೂ ಮೇಲ್ಛಾವಣಿಯನ್ನು ತಾವೇ ಹೊದಿಸಿಕೊಳ್ಳುತ್ತಾರೆ.

ಮನೆಕಟ್ಟುವ ಪ್ರಾರಂಭದಲ್ಲಿ ಜಾಗ ಅಳತೆ ಮಾಡಿಕೊಂಡು ಆಯಾ ನಿರ್ಧರಿಸಿ ಬುನಾದಿಯನ್ನು ತೋಡುತ್ತಾರೆ. ಸಾಮಾನ್ಯವಾಗಿ ಬೇಡರ ಮನೆಗಳ ಉದ್ದ ಮತ್ತು ಅಗಲ ಬೆಸ ಸಂಖ್ಯೆಯಾಗಿರುತ್ತದೆ. ಉದಾಹರಣೆಗೆ ಮನೆಯ ಉದ್ದ ೧೧ ಆಗಿದ್ದರೆ, ಅಗಲ ೯ ಆಗಿರುತ್ತದೆ. ಮಣ್ಣಿನ ಗೋಡೆಗಳಿಗೆ ೩ ಅಥವಾ ೪ ಅಡಿ ಬುನಾದಿ ತೋಡುತ್ತಾರೆ. ಗುಡಿಸಲು ಅಥವಾ ನೆರಿಕೆಗಳಿಗೆ ಅರ್ಧ ಅಥವಾ ಒಂದು ಅಡಿ ತೋಡುತ್ತಾರೆ. ಬುನಾದಿಯಲ್ಲಿ ಕಾಡುಗಲ್ಲುಗಳನ್ನು ಹಾಕಿ ಮುಚ್ಚಿ ಮೇಲ್ಭಾಗದಲ್ಲಿ ಹಸಿಯುಂಡೆಗಳಿಂದ ಗೋಡೆ ಕಟ್ಟುತ್ತಾರೆ. ಈ ಗೋಡೆ ಸುಮಾರು ೪ ಅಡಿ ಇರುತ್ತದೆ. ಗೋಡೆ ಅರ್ಧ ಮೇಲೆ ಬಂದಾಗ ಬಾಗಿಲಚೌಕಟ್ಟನ್ನು ಮತ್ತು ಕಿಟಕಿಗಳನ್ನಿಡುತ್ತಾರೆ. ಇದರ ಮೇಲೆ ಮತ್ತೆ ಗೋಡೆಯನ್ನು ಕಟ್ಟಿ, ತೊಲೆ ತೀರುಗಳನ್ನಿಟ್ಟು, ಜಾಪೆ ಹಾಕಿ, ಬೇವಿನ ಸೊಪ್ಪನ್ನು ಹಾಕಿ, ಹಾಳುಮಣ್ಣು ಅಥವಾ ಕೆಂಪುಮಣ್ಣನ್ನು ಹಾಕುತ್ತಾರೆ. ನಂತರ ಕರ್ಲನ್ನು ಹಾಕುತ್ತಾರೆ. ಮಳೆ ನೀರು ಕೆಳಗೆ ಹರಿಯಲು ಹರಿನಾಳಿಗೆಯನ್ನು ಜೋಡಿಸಿ ಕುಂಬಿ ಕಟ್ಟುತ್ತಾರೆ. ಬೆಳಕಿಗಾಗಿ ಬೆಳಕಿಂಡಿ ಅಥವಾ ಗವಾಕ್ಷಿಯನ್ನು ಹೊಗೆ ಕಿಂಡಿಯನ್ನು ಮಾಡಿಕೊಂಡಿರುತ್ತಾರೆ. ಹೊರ ಕೆಲಸ ಮುಗಿದ ನಂತರ ಮನೆಯ ಒಳಗೆ ಒಲೆಯನ್ನಿಟ್ಟು ನಂತರ ನೆಲವನ್ನು ಸಮತಟ್ಟುಗೊಳಿಸಿಕೊಳ್ಳುತ್ತಾರೆ. ಮಣ್ಣಿನ ಮನೆಗಳಿಗೆ ಕೇವಲ

[illegible]

[illegible]

ಗೋಡೆಗಳಷ್ಟೆ ಅಲ್ಲದೆ ಕಂಬಗಳು ಸಹ ಆಧಾರವಾಗಿರುತ್ತವೆ. ಮಣ್ಣಿನ ಅಥವಾ ಮಾಳಿಗೆ ಮನೆಗಳಿಗೆ ಅಂಕಣದ ಮನೆಗಳು ಎಂದು ಕರೆಯುತ್ತಾರೆ. ಸುಮಾರು ೬ ಅಡಿಗೆ ಒಂದು ಕಂಬವನ್ನು ಕೂರಿಸುತ್ತಾರೆ. ಇಂಥ ಚೌಕಾಕಾರದ ನಾಲ್ಕು ಕಂಬಗಳು ಸೇರಿ ಒಂದು ಅಂಕಣವಾಗುತ್ತದೆ. ಮಾಳಿಗೆ ಮನೆಯನ್ನು ಚೌಕಾಕಾರದಲ್ಲಿ ಅಥವಾ ಆಯುತಾಕಾರದಲ್ಲಿ ಕಟ್ಟಬಹುದು.

ಗುಡಿಸಲು, ಮನೆಯನ್ನು ಕಟ್ಟುವ ವಿಧಾನ ಸ್ವಲ್ಪ ಮಟ್ಟಿಗೆ ಬದಲಾಗುತ್ತದೆ. ಮೊದಲು ನಾಲ್ಕು ಸುತ್ತ ಗೋಡೆಯನ್ನು ಕಟ್ಟಿಕೊಳ್ಳುತ್ತಾರೆ. ಮಧ್ಯದ ಗೋಡೆಗಳು ಎಂಟೊಂಬತ್ತು ಅಡಿಗಳಿದ್ದರೆ ಕೊನೆ (ಪಕ್ಕದ)ಯ ಎರಡು ಗೋಡೆಗಳು ನಾಲ್ಕು ಅಥವಾ ಐದು ಅಡಿ ಎತ್ತರವಾಗಿರುತ್ತವೆ. ಗೋಡೆಯ ಕಟ್ಟಿದ ನಂತರ ಗುಡಿಸಲು ಮಧ್ಯದಲ್ಲಿ ಎರಡು ಅಥವಾ ಮೂರು ಕಂಬಗಳನ್ನು ನೆಟ್ಟು, ಗೋಡೆ ಮತ್ತು ಕಂಬಗಳ ಮೇಲೆ ದೊಡ್ಡದಾದ ಅಡ್ಡಬಲಗನ್ನಿಡುತ್ತಾರೆ. ಈ ಅಡ್ಡಬಲಗಿನ ಮತ್ತು ಗೋಡೆಯ ಆಧಾರದ ಮೇಲೆ ತೀರುಗಳನ್ನು ಹಾಕುತ್ತಾರೆ. ತೀರುಗಳ ಮಧ್ಯ ಸಣ್ಣ ಸಣ್ಣ ಇಂಡಿಗಿ ಬರಲನ್ನು ಕಟ್ಟುತ್ತಾರೆ. ನಂತರ ತಾಳೆ ಅಥವಾ ತೆಂಗಿನ ಗರಿಗಳನ್ನು ಹಾಕಿ ಮೇಲೆ ಕಾಶಿಹುಲ್ಲು ಇಲ್ಲವೆ ಕಬ್ಬಿನ ಒಗಡನ್ನು ಹಾಕಿ ಸೋರದಂತೆ ಮಾಡುತ್ತಾರೆ. ಸಾಮಾನ್ಯವಾಗಿ ಗುಡಿಸಲುಗಳು ಆಯಾತಕಾರವಾಗಿಯೇ ಕಟ್ಟಲ್ಪಟ್ಟಿರುತ್ತವೆ. ಈ ಗುಡಿಸಲುಗಳಿಗೆ ಮುಂದಿನಿಂದ ಅಥವಾ ಪಕ್ಕದಿಂದ ಬಾಗಿಲುಗಳನ್ನು ಮಾಡಲಾಗಿರುತ್ತದೆ.

೩.೩.೮ ಮನೆ ಕಟ್ಟಲು ಬಳಸುವ ಸಲಕರಣೆಗಳು

ಇಂದು ಮನೆಕಟ್ಟಿಕೊಳ್ಳುವಾಗ ವ್ಯಕ್ತಿ ಪರಾವಲಂಬಿಯಾಗಬೇಕಾಗಿದೆ. ವಡ್ಡರ, ಉಪ್ಪಾರರ, ಮುಸ್ಲಿಮರ, ಕಂಬಾರರ, ಕಮ್ಮಾರರ, ಬಡಗಿಗಳ, ಸುಣ್ಣಗಾರರ ಸಹಾಯವನ್ನು ಪಡೆಯುವುದು ಅವಶ್ಯಕವಾಗಿದೆ. ನೆರಿಕೆ ಅಥವಾ ಗುಡಸಲಿನ ಮನೆಯನ್ನು ಕಟ್ಟಿಕೊಳ್ಳುವಾಗ ಇವರಿಷ್ಟು ಜನರ ಸಹಾಯ ಬೇಕಿಲ್ಲದಿದ್ದರೂ ವಡ್ಡರು, ಬಡಗಿಗಳು, ಅವಶ್ಯಕವಾಗಿದ್ದಾರೆ. ಆಧುನಿಕ ಮನೆ, ಸಂಪ್ರದಾಯಿಕ ಮಾಳಿಗೆ ಮನೆ ಕಟ್ಟಿಕೊಳ್ಳಲು ಮೇಲೆ ಸೂಚಿಸಿದ ಎಲ್ಲಾ ವರ್ಗದವರ ನೆರವು ಅಗತ್ಯವಾಗಿದೆ. ಬೇಡರಲ್ಲಿ ಇಂದು ಮನೆಗಳನ್ನು ವಡ್ಡರೇ ಕಟ್ಟುವುದರಿಂದ ಕ್ಷೇತ್ರಕಾರ್ಯದಲ್ಲಿ ವಡ್ಡರು

ಬಳಸುವ ಉಪಕರಣಗಳ ಹೆಸರನ್ನೇ ಸೂಚಿಸಿದರು. ಮನೆ ಕಟ್ಟಲು ಸ್ಥಳ ಆಯ್ಕೆ ಮಾಡಿಕೊಂಡಾಗ ನೆಲದ ಮಟ್ಟವನ್ನು ಅಳತೆಮಾಡಲು 'ನೀರ ಮಟ್ಟ'ವನ್ನು ಬಳಸುತ್ತಾರೆ. ಮನೆಯ ಉದ್ದ, ಅಗಲವನ್ನು 'ಗಜಕಡ್ಡಿ' ಅಥವಾ 'ಅಳತೆಪಟ್ಟಿ'ಯಿಂದ ಅಳತೆಮಾಡಿದ ನಂತರ ನಾಲ್ಕುಕಡೆ ಹಗ್ಗ ಅಥವಾ ದಾರಕಟ್ಟಿ ಬುನಾದಿ ತೆಗೆಯುವರು. ಗೋಡೆ ಕಟ್ಟುವಾಗ ಇಂಗ್ಲೀಷಿನ 'ಎಲ್' ಆಕಾರದ 'ಮೂಲ ಮಟ್ಟ' (ಮಟ್ಟಲಿಗಿ) ವನ್ನು ಬಳಸುತ್ತಾರೆ. ಗೋಡೆ ಅಂಕು ಡೊಂಕಾಗದಂತೆ ನೋಡಿಕೊಳ್ಳಲು 'ತೂಕದ ಗುಂಡನ್ನು' ಬಳಸುತ್ತಾರೆ. ಗೋಡೆಯ ಮೂಲೆಗಳು ಸೇರುವಲ್ಲಿ ಇಟ್ಟಿಗೆ ಅಥವಾ ಕಲ್ಲನ್ನು ಸರಿಯಾಗಿ ಹೊಂದಿಸಲು 'ಸುತ್ತಿಗೆ'ಯನ್ನು ಬಳಸುವರು. ಗೋಡೆಗೆ ಕೆಸರು, ಸಿಮೆಂಟು ಮೆತ್ತಲು 'ತ್ಯಾಪಿ'ಯನ್ನು ಮತ್ತು ಗೋಡೆ, ನೆಲ ಸಮತಟ್ಟು ಗೊಳಿಸಲು 'ಕರಂಡಿ'ಅಥವಾ 'ಚಕ್ಕೆ'ಯನ್ನು ಉಪಯೋಗಿಸುತ್ತಾರೆ. ಇವಲ್ಲದೆ ಗುದ್ದಲಿ, ಚಲಿಕೆ, ಪುಟ್ಟಿ, ಕೊಡ ಇತ್ಯಾದಿ ವಸ್ತುಗಳು ಮನೆಕಟ್ಟಲು ಬೇಕಾಗುತ್ತದೆ. ಮನೆಗೆ ಸಂಬಂಧಿಸಿದ ಮರಗೆಲಸವನ್ನು ಬಡಗಿಗಳು ಮಾಡುವುದರಿಂದ ಬಾಗಿಲು, ಕಿಟಕಿ, ಕಂಬ, ತೊಲೆ, ಸೂರು ಮುಂತಾದವುಗಳನ್ನು ಮಾಡಲು ತಮ್ಮದೇ ಆದ ಉಪಕರಣಗಳಿವೆ. ಮೊಳೆ, ಸುತ್ತಿಗೆ, ಸ್ಕ್ರೂಡ್ರೈವ್, ಅಳತೆ ಪಟ್ಟಿ, ಉಜ್ಜೋಡೆ, ಗಾದಿ ಉಳಿ, ಗೀಚ್ ಕಡ್ಡಿ, ಗಾದಿ ಉಜ್ಜೋಡೆ, ಗರಗಸಗಳನ್ನು ಬಳಸಿಕೊಳ್ಳುತ್ತಾರೆ.

೩.೩.೯ ಮನೆ ಕಟ್ಟಲು ಬೇಕಾಗುವ ಸಂಪನ್ಮೂಲಗಳು

ಗುಡಿಸಲು ಕಟ್ಟಿಕೊಳ್ಳಲು ಉಂಡೆ, ಕೆಸರು ಅಥವಾ ಮಣ್ಣು, ಮರ, ಹುಲ್ಲು, ಗರಿ, ಸೆಗಣಿ, ಸುಣ್ಣ, ಕೆಮ್ಮಣ್ಣಿನ ಅವಶ್ಯಕತೆಯಿದೆ. ಇವು ಹಳ್ಳಿಯ ಸುತ್ತಲಿನ ಪರಿಸರದಲ್ಲಿಯೇ ದೊರೆಯುತ್ತವೆ. ಆದರೆ ಇವು ದೀರ್ಘಕಾಲ ಬಾಳಿಕೆ ಬರುವುದಿಲ್ಲ. ವರ್ಷಕ್ಕೊಮ್ಮೆ ಮಳೆಗಾಲಕ್ಕಿಂತ ಮುಂಚೆಯೇ ಗುಡಿಸಲನ್ನು ದುರಸ್ತಿ ಮಾಡಿಸಬೇಕು.

ಮಾಳಿಗೆ ಮನೆಕಟ್ಟಲು ಹಸಿಯುಂಡೆ ಅಥವಾ ಇಟ್ಟಿಗೆ, ಮರ ಮುಟ್ಟು, ಬಾಪೆ, ಮಣ್ಣು, ಕಲ್ಲು, ಕಡಪ ಕಲ್ಲು, ಕಾಡಗಲ್ಲು ಇತ್ಯಾದಿಗಳನ್ನು ಬಳಸುತ್ತಾರೆ. ಇಂಥ ಮನೆಗಳನ್ನು ಕಟ್ಟಲು ಖರ್ಚು ಹೆಚ್ಚು ತಗಲುತ್ತದೆ. ಆದರೆ ದೀರ್ಘಕಾಲದವರೆಗೆ ಬಾಳಿಕೆ ಬರುತ್ತದೆ. ಎರಡು ಅಥವಾ ಮೂರು

ವರ್ಷಕ್ಕೆ ಮಾಳಿಗೆಯ ಮೇಲೆ ಕರ್ಲು ಹಾಕಬೇಕಾಗುತ್ತದೆ. ಮಾಳಿಗೆ ಮೇಲಿನ ಹುಲ್ಲನ್ನು ವರ್ಷಕ್ಕೊಮ್ಮೆ ಕೀಳಿಸಬೇಕು. ಇಂದು ಸಿಮೆಂಟು, ಕಬ್ಬಿಣ, ಉಕ್ಕು, ಮಂಗಳೂರು ಹೆಂಚು ಮುಂತಾದ ಆಧುನಿಕ ವಸ್ತುಗಳನ್ನು ಬಳಸಿಕೊಂಡು ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಆಧುನಿಕ ವಸ್ತುಗಳಿಂದ ಮನೆ ನಿರ್ಮಿತಗೊಳ್ಳುತ್ತಿದ್ದರೂ ಹಳ್ಳಿಗಳಲ್ಲಿ ಮನೆಯ ಸಾಂಪ್ರದಾಯಿಕ ಮಾದರಿ ಉಳಿದುಕೊಂಡು ಬಂದಿದೆ.

೩.೩.೧೦ ಮನೆಕಟ್ಟುವಾಗ ನಡೆಯುವ ಆಚರಣೆಗಳು

ಮನೆಯ ನಿರ್ಮಾಣದಲ್ಲಿ ಯಾವುದೇ ವಿಘ್ನಗಳು ನಡೆಯದಿರಲಿ ಎಂದು ಅನೇಕ ಆಚರಣೆಗಳನ್ನು ಮಾಡಲಾಗುತ್ತದೆ. ಬೇಡರಲ್ಲಿ ಮುಖ್ಯವಾಗಿ ಮೂರು ಆಚರಣೆಗಳನ್ನು ಮಾಡುತ್ತಾರೆ.

೩.೩.೧೦.೧ಗುದ್ದಲಿ ಪೂಜೆ

ಮನೆ ಕಟ್ಟಲು ಸ್ಥಳವನ್ನು ಆಯ್ಕೆ ಮಾಡಿಕೊಂಡ ನಂತರ ಪಂಚಾಂಗ ಕೇಳಿ ದಿನ, ಗಂಟೆ ನಿರ್ಧರಿಸಿಕೊಂಡು, ಅವರು ಯಾವ ದಿಕ್ಕಿಗೆ ಹೇಳುತ್ತಾರೋ ಆ ದಿಕ್ಕಿನಲ್ಲಿ, ಹೆಚ್ಚಾಗಿ ಈಶಾನ್ಯದ ಮೂಲೆಯಲ್ಲಿ ಐದು ಕಲ್ಲುಗಳನ್ನಿಟ್ಟು ಮನೆಕಟ್ಟಲು ಬಳಸುವ ಸಲಕರಣೆಗಳನ್ನಿಟ್ಟು ಪೂಜೆ ಮಾಡಿ ನಂತರ ಬುನಾದಿ ತೆಗೆದು ಬುನಾದಿಯಲ್ಲಿ ಸ್ವಲ್ಪ ಬಂಗಾರದ, ಬೆಳ್ಳಿಯ, ಚೂರುಗಳನ್ನು ಹಾಕಿ, ಹಾಲು ತುಪ್ಪ ಹಾಕಿ, ಕಾಯಿ ಒಡೆಯುವರು. ಗುದ್ದಲಿಯ ಪೂಜೆ ಮನೆ ಕಟ್ಟುವಿಕೆಯ ಆರಂಭದ ಪೂಜೆ. ಈ ದಿನ ಕೆಲವರು ಮನೆಯನ್ನು ಕಟ್ಟುವ ವಡ್ಡರಿಗೆ ಬೇಳೆ ಕಾಳು, ಅಕ್ಕಿ, ಬೆಲ್ಲ, ಹಣವನ್ನು ಕೊಡುವರು. ವ್ಯಾಸಬೇಡರು ಈ ಪೂಜೆಯ ಸಂದರ್ಭದಲ್ಲಿ ಮನೆಯು ಏಳಿಗೆ ಹೊಂದಲಿ ಎಂದು ಲೋಬಾನಕ್ಕೆ ಎರಿಕೆಯಪುಡಿಯನ್ನು ಹಾಕಿ ಹೊಗೆ ಮಾಡಿ ಮನೆ ಏಳಿಗೆ ಹೊಂದಲಿ ಎಂದು ಪೂಜಿಸುತ್ತಾರೆ.

೩.೩. ೧೦.೨ ಬಾಗಿಲ ಪೂಜೆ

ಬುನಾದಿ ಹಾಕಿ, ಗೋಡೆ ಕಟ್ಟುವಾಗ ಎರಡು, ಮೂರು ಅಡಿ ಗೋಡೆ ಬಂದಾಗ ಬಾಗಿಲು ಚೌಕಟ್ಟನ್ನಿಡುವರು. ಮೊಟ್ಟಮೊದಲಿಗೆ ತಲೆ ಬಾಗಿಲನ್ನಿಡುವರು. ಈ ಬಾಗಿಲ ಕೆಳಗೆ ಮುತ್ತು, ರತ್ನ, ಬಂಗಾರ, ಬೆಳ್ಳಿ, ಕಾಸುಗಳನ್ನಿಟ್ಟು ಪೂಜೆ ಮಾಡುವರು. ನಂತರ ಬಾಗಿಲ ಚೌಕಟ್ಟಿಗೆ ಪೂಜೆ

ಮಾಡುವರು. ಈ ಸಂದರ್ಭದಲ್ಲಿ ವಡ್ಡರಿಗೆ ಕೊಡುವಂತೆ ಬಡಗಿಗಳಿಗೂ ಧಾನ್ಯ, ಹಣ, ವಸ್ತ್ರಗಳನ್ನು ನೀಡುತ್ತಾರೆ.

೩.೩.೧೦.೩ ಗೃಹಪ್ರವೇಶ

ಕೆಲವು ಮನೆಯ ಮೇಲ್ಛಾವಣಿ ಹಾಕುವಾಗ ಕೆಲಸಕ್ಕೆ ಬಂದ ಕೂಲಿಗಳಿಗೆ ಊಟ ಹಾಕಿಸುವ ಪದ್ಧತಿಯುಂದೆ. ಆದರೆ ಹೆಚ್ಚಿನ ಜನ ಬಾಗಿಲ ಪೂಜೆಯ ನಂತರ ಮನೆಯೆಲ್ಲ ಕಟ್ಟಿ ಮುಗಿದ ಮೇಲೆ ಮನೆ ಪ್ರವೇಶಿಸುವಾಗ ಒಲೆ ಪೂಜೆ ಮಾಡಿ ಹಾಲುಕ್ಕಿಸಿ, ಬಂಧು ಬಳಗದವರಿಗೆ, ಸ್ನೇಹಿತರಿಗೆ ಊಟ ಹಾಕಿಸುವರು. ಆಗ ಮನೆಗೆ ದೃಷ್ಟಿ ತಾಗಬಾರದು ಎಂದು ತಲಬಾಗಿಲ ಒಳಗೆ ಮಂತ್ರಿಸಿದ ತೆಂಗಿನಕಾಯಿ, ನಿಂಬೆ ಹಣ್ಣನ್ನು ಬಟ್ಟೆಯೊಳಗಿಟ್ಟು ಕಟ್ಟುತ್ತಾರೆ.

ಮೇಲೆ ಹೇಳಿದ ಎಲ್ಲಾ ಆಚರಣೆಗಳು ಬೇಡ ಜನಾಂಗದಲ್ಲಿ ಇತ್ತೀಚೆಗೆ ಸೇರಿಕೊಂಡಿವೆ. ಅಂದರೆ ಬೇರೆ ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾಗದಂತೆ ಇಂಥ ಆಚರಣೆಗಳು ಸೇರ್ಪಡೆಯಾದವು. ಮೂಲತಃ ಬೇಡರು ಮನೆ ಕಟ್ಟಿಕೊಳ್ಳುವಾಗ ಆಚರಿಸುವ ಆಚರಣೆಗಳ ಬಗ್ಗೆ ಮಾಹಿತಿ ದೊರೆಯಲಿಲ್ಲ.

೩.೩.೧೧ ಮನೆಗೆ ಸಂಬಂಧಿಸಿದ ಕೆಲವು ನಂಬಿಕೆಗಳು

೦೧. ಗುಡಿಗೆ ಹೋಗಿ ಮನೆಗೆ ಬಂದಾಗ ಕಾಲು ತೊಳೆಯದೆ ಒಳ ಬರಬೇಕು.

೦೨. ಹನುಮನ ದಿಕ್ಕಿಗೆ ಮನೆ ಬಾಗಿಲಿಡಬಾರದು.

೦೩ ಗುಡಿಯ ಎದುರಿಗೆ ಮನೆ ಇರಬಾರದು. ಆ ಮನೆ ಏಳಿಗೆಗೆ ಬರುವುದಿಲ್ಲ.

೦೪. ಮನೆಯೊಳಗೆ ಚಪ್ಪಲಿಯನ್ನು ಹಾಕಿಕೊಂಡು ಹೋಗಬಾರದು.

೦೫. ಒಲೆಯನ್ನು ಒದೆಯಬಾರದು.

೦೬. ಒಳ್ಳಿನ ಮೇಲೆ ಕೂಡಬಾರದು.

೦೭. ಹೊಸ್ತಿಲಿಗೆ ಬೇವಿನ ಮರ ಬಳಸುವಂತಿಲ್ಲ.

೦೮. ಹೊಸ್ತಿಲ ಮೇಲೆ ಕೂಡಬಾರದು.

೦೯. ಒಲೆ ಹತ್ತಿಸುವಾಗ ಪೂಜೆ ಮಾಡಿ ಹತ್ತಿಸಬೇಕು.

೧೦. ಮೂರು ಒಲೆ ಹಾಕಬಾರದು.

೧೧. ಉತ್ತರ, ಪೂರ್ವಕ್ಕೆ ತಲೆ ಮಾಡಿ ಬಲಗುವಂತಿಲ್ಲ.

೧೨. ಪಶ್ಚಿಮ, ದಕ್ಷಿಣಕ್ಕೆ ಕಾಲುಮಾಡಿ ಮಲಗಬಾರದು.

೧೩. ರಾತ್ರಿ ಕಸಗೂಡಿಸಿ ಮನೆಯಿಂದ ಹೊರ ಹಾಕಬಾರದು.

೧೪. ಕಮಲಾಪುರದಲ್ಲಿ ಆಚರಣೆ ಮತ್ತು ಹವ್ಯಾಸವಾಗಿ ಬೇಟೆಯು ಜನಪ್ರಿಯತೆ ಪಡೆದುಕೊಂಡಿದೆ.

೧೫. ಮ್ಯಾಸ ನಾಯಕರ ಮನೆಯೊಳಗ ಕೋಳಿ ಬರಬಾರದು.

೧೬. ಹುಟ್ಟಿದಾಕ್ಷಣ ಮಕ್ಕಳನ್ನು ಮೊರದಲ್ಲಿ ಮಲಗಿಸಬೇಕು.

೧೭. ಹುಟ್ಟಿದ ಮಗುವನ್ನು ಮೊರದಲ್ಲಿಟ್ಟು ಪಶ್ಚಿಮಕ್ಕೆ ತಲೆ, ಪೂರ್ವಕ್ಕೆ ಕಾಲುಮಾಡಿ ಮಲಗಿಸಬೇಕು.

೩.೩.೧೧ ಮನೆಯ ಅಲಂಕಾರ

ಎರಡು ಊರುಗಳಲ್ಲೂ ಮನೆಯ ರಚನೆ ಸರಳವಾಗಿದೆ. ಎರಡು ಅಥವಾ ಮೂರಕ್ಕಿಂತ ಹೆಚ್ಚಿನ ಕೋಣೆಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಒಂದೇ ಕೋಣೆಯಿದ್ದು, ಅಡ್ಡಗೋಡೆಗಳು ಮನೆಯನ್ನು ಅಡುಗೆ ಮನೆ, ಬಚ್ಚಲು ಮನೆ, ನಡುಮನೆ, ಪಡಸಾಲೆ ಎಂದು ವಿಭಾಗಿಸುತ್ತವೆ. ಬಡತನದ ಜೀವನವನ್ನು ನಡೆಸುವ ಇವರು ಅಲಂಕಾರಕ್ಕಿಂತ ಉಪಯುಕ್ತತೆಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ದುಬಾರಿಯಾದ, ಅನವಶ್ಯಕ ಅಲಂಕಾರಿಕ ವಸ್ತುಗಳನ್ನು ತಂದು ಮನೆಯನ್ನು ಅಂದಗೊಳಿಸುವ ಪ್ರಯತ್ನ ಮಾಡುವುದಿಲ್ಲ.

ಇವರು ಮನೆಯನ್ನು ಅಲಂಕರಿಸಲು ಬಳಸುವ ವಸ್ತುಗಳು ಸಹ ನಿಸರ್ಗದಲ್ಲಿ ಸಿಗುವ ವಸ್ತುಗಳೇ. ಸುಣ್ಣ, ಸಗಣಿ, ಕೆಮ್ಮಣ್ಣು, ಅರಿಶಿಣ, ಕುಂಕುಮ, ರಂಗೋಲಿ, ಮಾವಿನ ತೋರಣ ಮುಂತಾದವುಗಳಿಂದ ಮನೆಯನ್ನು ಅಂದವಾಗಿಸಿಕೊಳ್ಳುತ್ತಾರೆ. ವಾರಕ್ಕೆ ಒಮ್ಮೆ ಸೆಗಣಿಸಾರಿಸಿ ಗುಡಿಸಲನ್ನು ಸ್ವಚ್ಛವಾಗಿಟ್ಟುಕೊಳ್ಳುತ್ತಾರೆ. ಹುಣ್ಣಿಮೆ, ಅಮಾವಾಸ್ಯೆಯೆಂದು ಗುಡಿಸಲು, ಅಂಗಳಗಳನ್ನು ಸಾರಿಸಿ, ಹೊಸ್ತಿಲಿಗೆ ಕೆಮ್ಮಣ್ಣು ಅಥವಾ ಉರಿಮಂಜನ್ನು ಹಚ್ಚಿ ಅರಿಶಿಣ, ಕುಂಕುಮವನ್ನಿಟ್ಟು ರಂಗೋಲಿ ಹಾಕುತ್ತಾರೆ. ಮ್ಯಾಸನಾಯಕರಲ್ಲಿ ಈ ಪದ್ಧತಿ ಹೆಚ್ಚಾಗಿ ಕಂಡು ಬರುವುದಿಲ್ಲ. ಹೊಸ್ತಿಲಿಗೆ ವಿಭೂತಿ, ಕುಂಕುಮ ಮುಂತಾದವುಗಳನ್ನು ಹಚ್ಚಿದರೂ ರಂಗೋಲಿಯ ಬಳಕೆ ಕಡಿಮೆ.

ಸುಣ್ಣವನ್ನು ಉಪಯೋಗಿಸುವ ಮನೆಗಳವರು ಹಬ್ಬಹರಿದಿನಗಳಲ್ಲಿ ಅಥವಾ ಮೈಲಿಗೆ ಕಳೆದುಕೊಳ್ಳುವಾಗ ಸುಣ್ಣಹಚ್ಚುತ್ತಾರೆ. ವಾರ ವಾರ ಸುಣ್ಣವನ್ನುಹಚ್ಚುವುದಿಲ್ಲ. ಸಾಮಾನ್ಯವಾಗಿ ಗುಡಿಸಲು ಮನೆಗಳಿಗಿಂತ ಮಾಳಿಗೆ ಮನೆಗಳಲ್ಲಿ ಸುಣ್ಣದ ಬಳಕೆಯಿದೆ. ಈ ಮನೆಗಳು ಸ್ವಲ್ಪ ವಿಶಾಲವಾಗಿರುವುದರಿಂದ ಗುಡಿಸಲುಗಳಂತೆ ವಾರಕ್ಕೊಮ್ಮೆ ಸುಣ್ಣ ಬಳಿಯುವುದು ಕಷ್ಟ.

ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಜೋಳದ ತೆನೆ, ಕಬ್ಬು, ಸೂರ್ಯಕಾಂತಿ ಮುಂತಾದವುಗಳನ್ನು ತಂದು ಬಾಗಿಲ ಚೌಕಕ್ಕೆ ನಿಲ್ಲಿಸುತ್ತಾರೆ. ಮಾವಿನ ತೋರಣವನ್ನು ಕಟ್ಟಿ ಅಲಂಕರಿಸಿರುತ್ತಾರೆ. ಕೆಲವು ಮನೆಗಳಲ್ಲಿ ಮಾತ್ರ ಚಿತ್ತಾರದ ಬಾಗಿಲ ಚೌಕಟ್ಟುಗಳಿವೆ. ಅದರಲ್ಲಿ ಗಿಣಿ, ಹೂಬಳ್ಳಿಗಳನ್ನು, ಸೂರ್ಯ, ಚಂದ್ರರನ್ನು ಕೆತ್ತಿಸಿದ್ದಾರೆ. ತಲೆ ಬಾಗಿಲಿನ ಎರಡು ಕಡೆಗಳಲ್ಲಿ ಸೆಗಣಿ ಅಥವಾ ಮಣ್ಣಿನಿಂದ ಮಾಡಿದ ಬಸವನ ಮುಖಗಳನ್ನಿಟ್ಟಿರುತ್ತಾರೆ. ಮನೆಯೊಳಗೆ ಪ್ರವೇಶಿಸಿದ ತಕ್ಷಣ ಸಿಗುವ ಗೋಡೆಯ ಮೇಲೆ ದೇವರ ಮತ್ತು ಕುಟುಂಬದ ಸದಸ್ಯರ ಫೋಟೋಗಳು ವಿರಾಜಸುತ್ತಿರುತ್ತವೆ.

ಊರನಾಯಕರಲ್ಲಿ ಮದುವೆ ಸಂದರ್ಭದಲ್ಲಿ ಹಸೆಕಟ್ಟೆ ಬರೆಯುತ್ತಾರೆ. ಆಗ ಗುಲಾಬಿ ಬಣ್ಣದಿಂದ ಗೋಡೆಯ ಮೇಲೆ ಚಿತ್ತಾರವನ್ನು ಬರೆಯುತ್ತಾರೆ. ಕಾರಹುಣ್ಣಿಮೆಯಲ್ಲಿಯೂ ಈ ರೀತಿ ಗೋಡೆ ಚಿತ್ತಾರವನ್ನು ಬರೆಯುವರಂತೆ. ಆದರೆ ಹಬ್ಬಗಳಲ್ಲಿ ಹಸೆಕಟ್ಟೆಯನ್ನು ಬರೆಯದೆ ಹೂ, ಬಳ್ಳಿ, ಪ್ರಾಣಿಪಕ್ಷಿಗಳನ್ನು ಬರೆಯುತ್ತಾರೆ. ಮ್ಯಾಸನಾಯಕರಲ್ಲಿ ಈ ಚಿತ್ತಾರಗಳು ಕಂಡು ಬರುವುದಿಲ್ಲ.

ಎರಡು ಊರುಗಳಲ್ಲಿ ಪ್ರತಿದಿನ ಬೆಳಿಗ್ಗೆ ಒಲೆಗಳನ್ನು ತೊಳೆದು ಬೂದಿಯಿಂದಲೇ ವಿಭೂತಿ ಹಚ್ಚಿ ಅಡುಗೆ ಮಾಡಲು ಸಿದ್ಧಮಾಡಿಕೊಳ್ಳುತ್ತಾರೆ. ಅವರು ಪೇರಿಸಿಟ್ಟ ಅಡಕಲಗಡಿಗೆಗಳು, ನೆಲುವಿನ ಮೇಲೆ ಮಡಿಕೆಗಳು ಅಡ್ಡಗೋಡೆಯ ಮೇಲಿಟ್ಟ ವಸ್ತುಗಳು ಇವೆಲ್ಲವು ಮನೆಗೆ ತನ್ನದೇ ಆದಂಥ ಸೌಂದರ್ಯವನ್ನು ತಂದುಕೊಡುತ್ತವೆ.

ತಿಮ್ಮಲಾಪುರ ಮತ್ತು ಕಮಲಾಪುರಗಳಲ್ಲಿ ಮ್ಯಾಸಬೇಡರ ಹಾಗೂ ಊರಬೇಡರ ಮನೆ ಜೀವನ ಕ್ರಮಗಳನ್ನು ನೋಡಿದಾಗ ಅನೇಕ ವಿಷಯಗಳು ಗಮನಕ್ಕೆ ಬಂದಿವೆ. ಆಧುನಿಕತೆ ಅವರನ್ನು

ತಟ್ಟದ್ದರೂ ಹಿಂದಿನ ತಮ್ಮ ಸಂಪ್ರದಾಯ ಆಚರಣೆಗಳನ್ನು ಸಂಪೂರ್ಣ ಬಿಟ್ಟುಕೊಟ್ಟಿಲ್ಲ ಎಂಬುದು ಈ ಅಧ್ಯಯನದಿಂದ ಸ್ಪಷ್ಟವಾಗುತತದೆ. ವ್ಯವಸಾಯಕರು ಗುಂಪಾಗಿ ಒಂದೆಡೆ ಮನೆಗಳನ್ನು ಕಟ್ಟಿಕೊಂಡು ಬದುಕುತ್ತಿದ್ದಾರೆ. ಅವರು ತಮ್ಮ ಹಿಂದಿನ ಅನೇಕ ಆಚರಣೆಗಳನ್ನು ಈಗಲೂ ಪಾಲಿಸುತ್ತಿರುವುದು ಕಂಡುಬರುತ್ತದೆ. ಇದೀ ಆಧುನಿಕತೆ ಅವರ ಮೇಲೆ ಅಥವಾ ಆಚರಣೆಗಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿಲ್ಲವೆಂಬುದು ಗೋಚರಿಸುತ್ತದೆ. ಅನೇಕ ಕಾರಣಗಳಿಂದ ವ್ಯವಸಾಯಕರು ಬೇಟೆಯನ್ನು ಬಿಟ್ಟಿದ್ದರೂ ಆಚರಣೆಯಲ್ಲಿ ಉಳಿಸಿಕೊಂಡು ಬಂದಿರುವುದು ನಮಗೆ ತಿಳಿಯುತ್ತದೆ. ಈ ಅಧ್ಯಯನ ವಿಧಾನದಿಂದ ಮನೆ, ಸಮಾಜ ಮತ್ತು ಸಂಸ್ಕೃತಿಯನ್ನು ವಿಭಿನ್ನ ನೆಲೆಯಿಂದ ನೋಡಲಾಗಿ ಮೇಲಿನ ಅನೇಕ ಅಂಶಗಳು ದೊರೆತಿವೆ.

ಅಧ್ಯಾಯ - ೪

ಸಮಾರೋಪ / ೧೨- ೧೪

ಸಮಾರೋಪ

ಅಧ್ಯಯನದ ಪ್ರಾರಂಭದಲ್ಲಿಯೇ ಹೇಳಿರುವಂತೆ ಈ ಪ್ರಬಂಧವು ಅರೆ ಬುಡಕಟ್ಟುಗಳಿಗೆ ಸೇರಿದ ಅನ್ಯ ಸಂಸ್ಕೃತಿಯ ಸಂಪರ್ಕದಿಂದ ಸಂಸ್ಕೃತೀಕರಣಗೊಳ್ಳುತ್ತಿರುವ ಬೇಡರ ಎರಡು ಪ್ರಮುಖ ಉಪಪಂಗಡಗಳನ್ನು ಆಯ್ಕೆ ಮಾಡಿಕೊಂಡು, ಅವರ ಸಮಾಜ ಮತ್ತು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಯಿತು. ಇದಕ್ಕೆ 'ಭೌತಿಕ ಸಂಸ್ಕೃತಿ'ಯ ವಾಸದ ಮನೆಗಳನ್ನು ಮೂಲ ಆಕರಗಳನ್ನು ಬಳಸಿಕೊಂಡು ಅಧ್ಯಯನ ಕೈಗೊಳ್ಳಲಾಯಿತು.

ಭೌಗೋಳಿಕ, ಆರ್ಥಿಕ, ಸಾಮಾಜಕ ಮುಂತಾದವುಗಳ ಪ್ರಭಾವದಿಂದ ಮನೆಯ ರಚನೆಯಲ್ಲಿ ವೈವಿಧ್ಯತೆ ಕಂಡು ಬರುತ್ತದೆ. ಈ ವೈವಿಧ್ಯಮಯ ಮನೆಗಳ ಅಧ್ಯಯನದಿಂದ ಮನೆಯಲ್ಲಿ ವಾಸಿಸುವ ಕುಟುಂಬಗಳ ಬದುಕನ್ನು ಅರ್ಥ ಮಾಡಿಕೊಳ್ಳಬಹುದು. ಈ ರೀತಿ ಒಂದೇ ಸಮುದಾಯಕ್ಕೆ ಸೇರಿದ ಹಲವು ಮನೆಗಳನ್ನು ಅಧ್ಯಯನ ಮಾಡಿದಾಗ ಅವರ ಸಮಾಜ ಮತ್ತು ಸಂಸ್ಕೃತಿಯನ್ನು, ಅದರ ಅನನ್ಯತೆಯನ್ನು ಮತ್ತು ಬದಲಾಗುತ್ತಿರುವ ಪರಿಸರಕ್ಕೆ ಹೇಗೆ ಸ್ಪಂದಿಸುತ್ತಿವೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯ.

ಈ ರೀತಿಯ ಸೂಕ್ಷ್ಮ ಅಧ್ಯಯನದಿಂದ ಸಮಗ್ರ ಅಧ್ಯಯನಕ್ಕೆ 'ಸ್ಥೂಲ ಮಾದರಿ ಸಮೀಕ್ಷೆ'ಯನ್ನು ಕೈಗೊಳ್ಳಲಾಯಿತು. ವ್ಯಾಸನಾಯಕರು ಮತ್ತು ಊರನಾಯಕರ ಹೆಚ್ಚಾಗಿರುವ ಕಮಲಾಪುರ ಮತ್ತು ತಿಮ್ಮಲಾಪುರವನ್ನು ಕ್ಷೇತ್ರಕಾರ್ಯಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಇದರಿಂದ ಇವೆರಡು ಉಪಪಂಗಡಗಳ ತೌಲನಿಕ ಅಧ್ಯಯನ ಕೈಗೊಳ್ಳಲು ಸಾಧ್ಯವಾಯಿತು.

ಈ ಅಧ್ಯಯನದಿಂದ ದೊರೆತ ಫಲಿತಾಂಶಗಳು

ಭೌಗೋಳಿಕ ಮತ್ತು ಹವಾಗುಣಕ್ಕೆ ತಕ್ಕಂತೆ ಮನೆಗಳು ರಚಿತವಾಗಿವೆ. ಇಲ್ಲಿ ಬಳ್ಳಾರಿಯ ಬಿಸಿಲಿಗೆ ಯೋಗ್ಯವಾದ ಮನೆಗಳ ರಚನೆ ಕಾಣಬಹುದು.

ಬೇಡ ಜನಾಂಗವು ವಲಸೆ ಪ್ರವೃತ್ತಿಯನ್ನು ಅನುಸರಿಸಿದ್ದಾಗ ತಾತ್ಕಾಲಿಕ ಗುಡಿಸಲುಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಒಂದು ಪ್ರದೇಶದಲ್ಲಿ ಸ್ಥಿರವಾಗಿ ನೆಲೆ ನಿಂತಾಗ ತನ್ನ ಮನೆಯನ್ನು ಸಹ ದೀರ್ಘಕಾಲ ಬಾಳುವಂಥ ವಸ್ತುವಿನಿಂದ ನಿರ್ಮಿಸಿಕೊಂಡರು. ಉದಾಹರಣೆ ತಿಮ್ಮಲಾಪುರಕ್ಕೆ ಹಳ್ಳಳ್ಳಿಯಿಂದ ವಲಸೆ ಬಂದ ಊರನಾಯಕರು ಮೊದಲು ಮಾಳಿಗೆ ಮನೆಗಳಲ್ಲಿ ವಾಸವಾಗಿದ್ದರೂ ಈ ಊರಿಗೆ ಬಂದಾಗ ಗುಡಿಸಲಿನ ಮನೆಗಳನ್ನೇ ನಿರ್ಮಿಸಿಕೊಂಡರು. ಕ್ರಮೇಣ ತಮ್ಮ ಮನೆಗಳ ದೀರ್ಘಕಾಲ ಬಾಳಿಕೆ ಬರುವಕಡೆ ಗಮನ ನೀಡುತ್ತಿದ್ದಾರೆ. ಕೆಲವರು ಗುಡಿಸಲಿನ ಮನೆಯಿಂದ ಮಾಳಿಗೆ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಕಮಲಾಪುರ ವ್ಯಾಸನಾಯಕರು ಇಲ್ಲಿಗೆ ಬಂದು ಸುಮಾರು ಐದುನೂರುವರ್ಷಗಳಾಯಿತು. ಹಾಗಾಗಿ ಇವರು ಮಾಳಿಗೆ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಕೆಲವರಿಗೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಗುಡಿಸಲಿನಲ್ಲಿಯೇ ವಾಸವಾಗಿದ್ದಾರೆ.

ಆರ್ಥಿಕ ಪ್ರಗತಿ ಹೊಂದಿದಂತೆ ಮಾನವ ಬಾಹ್ಯ ರೂಪವನ್ನು ಬದಲಾಯಿಸಿಕೊಳ್ಳುವಂತೆ ತನ್ನ ಮನೆಯ ರೂಪುರೇಶೆಗಳನ್ನು ಬದಲಾಯಿಸಿಕೊಂಡ. ತನ್ನ ಅಂತಸ್ತನ್ನು ಮನೆಯ ಮೂಲಕ ಪ್ರದರ್ಶಿಸಲು ಪ್ರಯತ್ನಿಸಿದ ಆರ್ಥಿಕ ಅಸಮತೋಲನದಿಂದ ಕೆಲವರು ನೆರಿಕೆ ಚಪ್ಪರವನ್ನು, ಕೆಲವರು ಮಣ್ಣಿನ ಗೋಡೆಯ ಗುಡಿಸಲುಗಳನ್ನು ಮತ್ತೇ ಕೆಲವರು ಮಾಳಿಗೆ ಮನೆ ಕಡಪಾ ಕಲ್ಲಿನ ಮನೆ, ಆರ್.ಸಿ.ಸಿ. ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಹಿಂದೂ ಧರ್ಮದ ಮತ್ತು ಆಧುನಿಕತೆಯ ಪ್ರಭಾವಕ್ಕೆ ಒಳಗಾದಂತೆ ಮನೆಗಳ ರಚನೆಯಂತೆ ಸಮಾಜ, ಸಂಸ್ಕೃತಿಗಳಲ್ಲಿಯೂ ಬದಲಾವಣೆಗಳು ಕಂಡು ಬರುತ್ತಿವೆ. ಮನೆಗಳಲ್ಲಿ ದೇವರ ಮನೆಗಳು, ಜಗಲಿಗಳು ಪ್ರವೇಶಿಸಿದಂತೆ ಮಡಿಯುಡಿಗಳು ಮೈಲಿಗೆ ಮುಂತಾದ ಹಲವು ಆಚರಣೆಗಳು ಸೇರ್ಪಡೆಗೊಂಡವು. ಶಿಷ್ಟದೇವತೆಗಳ ಆರಾಧನೆ ಹಬ್ಬ ಆಚರಣೆಗಳಿಗೆ ಈ ಸಮಾಜದಲ್ಲಿ ಸ್ಥಾನದೊರೆಯಿತು. ಕೇವಲ ಗುಡಿಸಲಿನಲ್ಲಿಯೇ ವಾಸಿಸಬೇಕು, ಸುಣ್ಣ ಬಣ್ಣವನ್ನು ಬಳಸಬಾರದು ಎಂಬ ಸಂಪ್ರದಾಯಗಳನ್ನು

ಮೀರಿ ಆಧುನಿಕತೆ ಒಳಪ್ರವೇಶಿಸಿತು.

ವಾಸ್ತುಶಾಸ್ತ್ರಜ್ಞರ, ವಡ್ಡರ ಹಸ್ತಕ್ಷೇಪದಿಂದ ಮನೆಗಳ ರಚನಾ ವಿನ್ಯಾಸದಲ್ಲಿ ಏಕರೂಪತೆ ಕಂಡುಬರುತ್ತಿದೆ.

ಇಂದು ಅವಿಭಕ್ತ ಕುಟುಂಬ ವ್ಯವಸ್ಥೆಗಳಿಗೆ ಬದಲಾಗಿ, ವಿಭಕ್ತ ಕುಟುಂಬಗಳು ಅಸ್ತಿತ್ವದಲ್ಲಿವೆ. ಹೀಗಾಗಿ ಮನೆಯ ಗಾತ್ರವು ಚಿಕ್ಕದಾಗುತ್ತಿದೆ. ಇವರು ವಿಭಕ್ತ ಕುಟುಂಬ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದರೂ ಅಣ್ಣತಮ್ಮಂದಿರು ಒಂದೇ ಪ್ರದೇಶದಲ್ಲಿ ಅಕ್ಕಪಕ್ಕದಲ್ಲಿಯೇ ವಾಸವಾಗಿರುವುದು ಗಮನಾರ್ಹವಿಷಯ.

ಇಷ್ಟೆಲ್ಲಾ ಬದಲಾವಣೆಗಳಾಗಿದ್ದರೂ ಅವರ ಸಾಮುದಾಯಿಕ ಲಕ್ಷಣಗಳು ಉಳಿದುಬಂದಿವೆ. ಬುಡಕಟ್ಟುಗಳು ತಮ್ಮ ಅನನ್ಯತೆಯನ್ನುಳಿಸಿಕೊಳ್ಳಲು, ಸಾಮೂಹಿಕವಾಗಿ ಒಂದು ಪ್ರದೇಶದಲ್ಲಿ ವಾಸಿಸುತ್ತಾರೆ. ಅಂತೆಯೇ ಕಮಲಾಪುರ ಮತ್ತು ತಿಮ್ಮಲಾಪುರದಲ್ಲಿ ಈ ಜನಾಂಗವು ಒಟ್ಟಾಗಿ ಜೀವನ ನಡೆಸುತ್ತಿದ್ದಾರೆ.

ಮಾನವ ಬಾಹ್ಯ ಬದಲಾವಣೆಗಳನ್ನು ಬಹುಬೇಗ ಒಪ್ಪಿಕೊಳ್ಳುವಂತೆ ಆಂತರಿಕ ಬದಲಾವಣೆಯನ್ನು ಒಪ್ಪಿಕೊಳ್ಳುವುದಿಲ್ಲ. ಬಾಹ್ಯವಾಗಿ ಮಾರ್ಪಟ್ಟನಂತರ ಆಂತರಿಕ ಮಾರ್ಪಾಟಿನ ಕಡೆ ದಾಪುಗಾಲು ಹಾಕುತ್ತಾನೆ. ಮನೆಗಳ ಮೇಲೆ ಆಧುನಿಕತೆಯ ಪ್ರಭಾವವನ್ನು ಹಾಗೂ ಮನೆಯ ರಚನೆಯನ್ನು ಗಮನಿಸಿದಾಗ ಮಾನವ ಯಾವ ನಿಟ್ಟಿನಲ್ಲಿ ಸಾಗುತ್ತಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ಈ ರೀತಿಯ ಸ್ಥಿತ್ಯಂತರಗೊಳ್ಳುತ್ತಿರುವ ಸಮಾಜವನ್ನು ಒಂದು ಪ್ರದೇಶಕ್ಕೆ ಮಾತ್ರಸೀಮಿತಗೊಳಿಸಿಕೊಂಡಿರುವುದು ಈ ಪ್ರಬಂಧದ ಮೇಲೆ ಎಂದು ಒಪ್ಪಿಕೊಂಡರು, ಇಂಥ ಬದಲಾವಣೆಗಳನ್ನು ಸಮಗ್ರ ಅಧ್ಯಯನಕ್ಕಿಂತ ಪ್ರದೇಶವನ್ನು ಸೀಮಿತಗೊಳಿಸಿಕೊಳ್ಳುವುದೆ ಒಳ್ಳೆಯದು ಎನ್ನಿಸುತ್ತದೆ. 'ಭೌತಿಕ ಸಂಸ್ಕೃತಿ'ಯಲ್ಲಿ ಉಂಟಾಗುವ ಬದಲಾವಣೆಗಳು ಯಾವ ರೀತಿ ಮಾನವನ ಬದುಕಿನಲ್ಲಿ ಬಲಾದವಣೆಗಳನ್ನು ತರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಇನ್ನೂ ಹೆಚ್ಚಿನ ಅಧ್ಯಯನಗಳು ನಡೆಯ ಬೇಕಾಗಿದೆ. ಈ ನಿಟ್ಟಿನಲ್ಲಿ ಇದು ಒಂದು ಸಣ್ಣ ಪ್ರಯತ್ನ ಮಾತ್ರ.

ಅಧ್ಯಾಯ - ೫

ಅನುಬಂಧ-೧

ಬೆಡಗುಗಳು

೧. ನಲ್ಲ ಬಾಮುಂಡ್ಲ ೨. ಮಳೇಲೂರು ೩. ಎನುಮುಲ ೪. ಬೋಸುರ್ಲ
೫. ದೊಣಮಂಡ್ಲ ೬. ಮನ್ನುಲು ೭. ಗಟ್ಟಮತ್ತೆ ೮. ಕುಂಟ್ಲಲು
೯. ಸೂರ್ಯಕಾಮ ೧೦. ಕಾಮಗೇತ್ಲ ೧೧. ಮಂದ್ಲಾರು ೧೨. ಎತ್ತಿನವರು
೧೩. ದದ್ದಿದಾಸರಿ ೧೪. ಪಾಲಜ್ಜಯ್ಯವರು ೧೫. ಓಬನಾಯಕರು ೧೬. ಗಾಡವುಲು
೧೭. ಪೂಲಾರ ೧೮. ಕೋಸಲವರು ೧೯. ಕುರುಬುಲು ೨೦. ಗಜ್ಜುಡ್ಲ
೨೧. ಪಟ್ಟಪಲ್ಲಾರು ೨೨. ಭಾನೂರು ೨೩. ಉರೆ ಬಾಲಯ್ಯ ೨೪. ಬೋನಹಳ್ಳಿಯೂರು
೨೫. ಚೆನ್ನನಾಯ್ಕ ೨೬. ಬುಟುಗ್ಲು ೨೭. ಪಾವಿಡ್ಲ ೨೮. ಬಡಸಲೋರು
೨೯. ಮುಮ್ಮುಡ್ಲ ೩೦. ರಾಯಬೋರು ೩೧. ಒಕ್ಲರು ೩೨. ಅಜ್ಜುಡ್ಲ
೩೩. ಕುಂಡ್ಲುಲು

II. ಬೆಡಗುಗಳನ್ನು ಸೂರ್ಯವಂಶ - ಚಂದ್ರವಂಶ ಎಂದು ವಿಭಾಗ ಮಾಡಿಕೊಳ್ಳಲಾಗಿದೆ.

ಅ.ಸೂರ್ಯವಂಶದ ಬೆಡಗು - (೧). ಮಲ್ಲಿನಾಯಕರ ಉಪ ಬೆಡಗುಗಳು
೧. ಈಶ್ವರನೋರು ೨. ಎನುಮುಲೋರು ೩. ಓಬನಾಯಕನೋರು ೪. ಕಾಟಮಲ್ಲನಾಯಕನೋರು
೫. ಚೆನ್ನಕೇಟನೋರು ೬. ಪದ್ಮನಾಯಕನೋರು ೭. ಪೇಯಲೋರು ೮. ಬಂಗಾರುನೋರು
೯. ಮೇಸಲೋರು ೧೦. ವಡೇಲೂರು.

(೨). ಯರಮಂಚ ನಾಯಕರ ಬೆಡಗುಗಳು
೧.ಅಚ್ಚಪಲ್ಲೋರು ೨. ಕರಿನೋರು ೩. ನಲಗೇಟಿ ೪. ಯರಗೋಟಿ ೫. ಯರಗಾಟ್ಲವರು
೬. ಎಡೇಲರು

ಆ. ಚಂದ್ರವಂಶದ ಬೆಡಗುಗಳು

(೧). ಮಂದಲವರ ಉಪ ಬೆಡಗುಗಳು
೧. ಕಾಮಗೇಟಿ ೨. ಗಾದಪಾಲೋರು ೩. ಬುಲ್ಲಡ್ಲ ೪. ಮಾಸಲೋರು ೫. ನಾಕಲರು

(೨). ಬುಡಗ್ಲೋರಲ್ಲಿನ ಉಪಪಂಗಡಗಳು
೧. ಕುರಿಹಟ್ಟಿ ಬುಟಗಾಲು ೨. ನಲ್ಲದೇವರು ಬುಟುಗ್ಲು ೩. ಬೊಮ್ಮದೇವರು ಬುಟುಗಲ್ಲು
೪. ಮಾರವ್ವನ ಬುಟುಗ್ಲು ೫. ಸಂಗವರ ಬುಟುಗ್ಲು ೬. ಸಿದ್ದಪಲ್ಲಿ ಬುಟುಗ್ಲು

(೩) ಪಾಮುಡ್ಲೋರ ಉಪಪಂಗಡಗಳು
೧. ಜರಕಡ್ಲ ಪಾಮುಡ್ಲ ೨. ನಲ್ಲ ಪಾಮುಡ್ಲ ೩. ಪೂಜಾರಹಳ್ಳಿ ಪಾಮುಡ್ಲ
೪. ಯರಪಾಮುಡ್ಲ

ಇವುಗಳಲ್ಲದೆ ಇನ್ನೂ ಕೆಲವು ಬೆಡಗುಗಳಿವೆ.
೧. ಅಜ್ಜುಡ್ಲೋರು ೨. ಅಲಕೇರು ೩. ಕರಿನೋರು

ದಾಸರಲ್ಲಿ ಕೆಲವು ಉಪಪಂಗಡಗಳಿವೆ.

೧. ಗಗ್ಗಿದಾಸರು ೨. ಗೊಡಗು ದಾಸರು ೩. ಬೋಡದಾಸರು ೪. ದಡ್ಡಿದಾಸರು

ಪ್ರತಿಯೊಂದು ಬೆಡಗುಗಳಿಗೆ ಈ ಕೆಳಗಿನಂತೆ ತಮ್ಮದೇ ಆರಾಧ್ಯದೈವಗಳವೆ

ಬೆಡಗು	ದೇವರು
ಮಳೇಲಾರು	ಓಬಳದೇವರು (ಅ:ಓಬಲ ನರಸಿಂಹ ಸ್ವಾಮಿ)
ಎನುಮ್ಲಾರು	ಗಾದ್ರಿಪಾಲ ನಾಯಕ
ಬಂಟ್ಲಗ್ಲಾರು	ಮಾರೆಮ್ಮ
ಮಂದಾರು	ಓಬಳ -ಗಾದ್ರಿ
ಪೂಲಾರು	ಗುಂಡು ಬೋರ ದೇವರು
ಪುಟ್ಟಪೊಲ್ಲಾರು	ಬೋರದೇವರು
ಕಾಮಗೇತಿ	ಸೂರಪ್ಪದೇವರು

(ಕರಿಶೆಟ್ಟಿ ರುದ್ರಪ್ಪ, ೧೯೯೨, ಪು. ೩೦-೩೩)

Mandala (Herd of Cattle)
Potulu (He-buffalo)
Muchchalal
Kamagetula
Manegala
Chinnamakola
Chimalu (Ants)
Sibbila
Gangavarmu (name of place)
Mallelu (Ssasmine)
Settila
Muchchatla
Nallula (Bugs)
Minugula
Surya (The Sun)
Chadra (The Moon)
Bangaru (gold)
Bhuchakra (The Golbe)
Maddala (Mungala)
Mungala
Janamula

Yenumalu (Beffalo)
Jerrabotula (centepedes)
Sakela
Chinnamagala
Pegadapotula
Peddamakila
Gujjala
Edu kondala (Seven Hills)
Puvvalu gampula (Flower baske
Ankela
Payyala
Gutamu
Generu (sweet Scented Oleande
Edddulu (ocen)
Kachi Kadle (A kind of grass)
Hurali (Horse gram)
Navane (Stalian MIllet)
Gannerla (Sweet-scented Olean
Gaddubaria (crowbar)
Gajjala
Kukkala (Dogs)

(Ananthakrishna Iyer, L.K., 1988, pp.)

ಕ್ಷೇತ್ರಕಾರ್ಯದಲ್ಲಿ ದೊರೆತ ಮ್ಯಾಸನಾಯಕರ ಬೆಡಗುಗಳು ಮತ್ತು ದೇವರುಗಳು

ಮಂದಲ ನಾಯಕರ ಗುಂಪಿಗೆ ಸೇರಿದ ಬೆಡಗುಳು (ಚಂದ್ರವಂಶ - ನಾಮ)

ಬೆಡಗು	ದೇವರು	ಸ್ಥಳ
೦೧. ಕಾಮಗೇತಿ -	ಓಬನಾಯಕ ದೇವರು ಸೂರಯ್ಯ	ರುದ್ರಮ್ಮನ ಹಳ್ಳಿ ಜಗಲೂರು ತಾಲ್ಲೂಕು
೦೨. ಮಮ್ಮಲರು -	ರಾಜಲು ದೇವರು	ಕೂಡ್ಲಿಗಿ ತಾಲ್ಲೂಕು
೦೩. ಮಳೇಲರು (ಮುಂಡಾಸದಾಸರು)	-	-
ಮಕನಡಕ ಮಳೇಲರು	ಓಬಳ ನರಸಿಂಹ	ಮಕನಡಕ(ಜೋಗಹಳ್ಳಿ ಬಳಿ)
ಓಬಳದೇವರ ಮಳೇಲರು	ಓಬಳದೇವರು	ರಾಯದುರ್ಗ (ಗೊಲ್ಲರಹಟ್ಟಿ)
ಮುಚ್ಚ ಮಳೇಲರು	-	ರಾಯದುರ್ಗ
೦೪. ಸೌಳ ಸರುವ್ಲರು -	ಕಂಪಲದೇವರು	-
೦೫. ಕುರುಬನರು -	ಪಾಲಯ್ಯ	ದಾಸಮಾಪುರ (ಕೂಡ್ಲಿಗಿ)
೦೬. ಗೋರ್ಲರು -	ಬೋರಮಯ್ಯ	ಚಳ್ಳಕೆರೆ ತಾಲ್ಲೂಕು
೦೭. ಪೂಲಾರು -	ಚಿತ್ರದೇವರು ಮತ್ತು ಗಾದ್ರಪಾಲ	ಅರಕಬಾವಿ
೦೮. ದಳಮಂಡಲರು -	-	-

ಮಲ್ಲಿನಾಯಕನ ಗುಂಪಿಗೆ ಸೇರಿದ ಬೆಡಗುಗಳು (ಸೂರ್ಯವಂಶ - ಲಿಂಗ)

ಬೆಡಗು	ದೇವರು	ಸ್ಥಳ
೦೧. ಎಮಮಲರು (ಮಲ್ಲನಾಯಕರು)	ಬುಕ್ಕ ಓಬಳ	ಗೊಲ್ಲರ ಹಳ್ಳಿ (ರಾಯದುರ್ಗದ ಬಳಿ)
೦೨. ಪೇಯಲೋರು -	ಗಾದ್ರಿಪಾಲನಾಯಕ	ನಾಯಕನಹಟ್ಟಿ
